REGISTERED NO. M. 1393. ಎಳ್ಳ ಪುಟಗಳು. ಈ ಪ್ರತಿ ಒಂದಾಣ್



ಶ್ರೀಮದ್ಭೂಮಿತಲೇಷು ಭಾಂತಮುಹೀಭಾಗಃ ಪ್ರಶಾಸನ್ನಹೀ
ಪೃಥ್ವೀಜ್ಯಾಂಗಲನಾಯಕೋ ನರಕುಲವ್ಯಾತೇಷು ಚಾರ್ಯಾನ್ವಯಃ ।
ಕಸ್ಮಿನ್ನದ್ಯದಿಮಹು ಸಂವ್ಯವಹೃತಿಪ್ರಾಗಲ್ಭ್ಯಮಾತ್ಮೋನ್ನಹಂ
ಪ್ರಾಪ್ತೋದ್ದಿಶ್ಯಜನೀನಮೃತ್ತಿಚತುರಶ್ಚೀಕಂಠಕಂಠೀರವಃ ॥

KANTEERAVA
THE ONLY KANARESE
BI-WEEKLY.

ನರರ ಕುಲಗಳೊಳಾರ್ಯವಂಶವು, । ಧರೆಯ ದೇಶಗಳೊಳಗೆ ಭಾರತ
ವರಸುತನಗಳೊಳಾಂಗ್ಲರೊಡೆತನ, ನುಡಿಗಳೊಳು ಮೆರೆವಾ ॥
ತಿರುಳಗನ್ನಡವೊಂದಕೊಂಬೊ । ಪ್ರಿರುವ ತೆರ, ಕಂಠೀರವನು ಮೆರೆ
ದಿರಲಿ ವಂಶಕೆ ಧರೆಗೆ ನೃಪತಿಗೆ ನುಡಿಗೆ ಸೊಬಗೆನಿಸೀ! ॥

ಸಂಪುಟ ೧೪ ಮಂಗಳೂರು, ೧೯೩೬ನೇ ಇಸವಿ ಜೂನ್ ತಾರೀಕು ೩೦ನೇ ಮಂಗಳವಾರ ಸಂಚಿಕೆ ೨೭.
VOL. XVIII MANGALORE, TUESDAY, JUNE 30, 1936. NO. 27.

ಅಮೃತಾಂಜನ

(Regd.)

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುನೋವೇದನೆಗಳಿಗೂ ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೀನೆ, ಪಕ್ಷವಾತ, ನೊಡಿಮೆ ನೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪ್ಪೊ

ಬೊಂಬಾಯಿ——————ಮದ್ರಾಸ್——————ಕಲ್ಕತ್ತಾ

ಮಂಗಳೂರಲ್ಲಿ ಶಾಕಂಪೆನಿಯಲ್ಲಿ ದೊರೆಯುವುದು.

ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಕೊಚ್ಚಿಕಾರ್ ಬ್ರದರ್ಸ್, ಮದರಾಸು ಶಾಖಾ ಕಾರ್ಯದರ್ಶಿಗಳು

ಮತ್ತು

ಬೊಂಬಾಯಿ ನಗರ ಮತ್ತು ಅವರ ಉಪನಗರಗಳಿಗೆ ಚೀಫ್ ಏಜಂಟರು.

13-12-1935—ನಮ್ಮ ರಜತೋತ್ಸವ ವರುಷ.

ಪ್ರಕಟಣೆ.

ಪುತ್ತಿಯಾರದಲ್ಲಿ, ತಾಲೂಕು ಆಫೀಸು ರಸ್ತೆಯಲ್ಲಿ, ಪುತ್ತಿಯಾರಾ ಪೋಸ್ಟಾಫೀಸಿನ ಎದುರುಗಡೆಯಲ್ಲಿರುವ "ಸೌಮ್ಯಾಲಯಂ" ಎಂಬ ಹೊಸ ಬಂಗಲೆಯನ್ನು ನಾವು ಪಡಕೊಂಡು, ನಮ್ಮ ಕಲ್ಲಿಕೋಟೆ ಬ್ರಾಂಚ್ ಆಫೀಸನ್ನು ಅಲ್ಲಿ ತಾ. 14-3-36ರಲ್ಲಿ ತೆರೆದಿರುವೆವೆಂದು ನಮ್ಮ ಯಾವತ್ತೂ ಕೆಲಸಗಾರರಿಗೂ ಏಜಂಟರಿಗೂ ಪೊಲಿಸಿದಾರರಿಗೂ ತಿಳಿಸಲು ಸಂತೋಷಪಡುತ್ತೇವೆ. ನಮ್ಮ ಮಲಬಾರು ಜಿಲ್ಲಾ ಏಜಂಟರಾದ ಮಿ. ಸಿ. ಶಂಕರನ್ ನಾಯರರ ಆಫೀಸು, ಹಜೂರು ರಸ್ತೆಯಲ್ಲಿದ್ದುದು ಮೊಕೂಪು ಮಾಡಲ್ಪಟ್ಟು, ಈ ಹೊಸ ಬ್ರಾಂಚ್ ಆಫೀಸಿನಲ್ಲಿಯೇ ಸಮ್ಮಿಲನವಾಗುವುದು. ಈ ಹೊಸ ಆಫೀಸು ಅನುಕೂಲ ಸ್ಥಳದಲ್ಲಿದ್ದು, ವಿಶಾಲವಾಗಿ ಸೌಕರ್ಯಗಳುಳ್ಳುದಾದ್ದರಿಂದ ,ದಿನೇ ದಿನೇ ಮಲಬಾರು ಜಿಲ್ಲೆಯಲ್ಲಿ ಹೆಚ್ಚುತ್ತಿರುವ ನಮ್ಮ ವಿಮಾಕಾರ್ಯದ ದೆಸೆಯಿಂದ ಈ ಹೊಸ ಕಟ್ಟಡವನ್ನು ಪಡೆಯುವ ಆವಶ್ಯಕತೆ ಕ್ಕಾಡಿದ್ದು, ನಮ್ಮ ಪೊಲಿಸಿದಾರರಿಗೆ ಮತ್ತಷ್ಟು ಒಳ್ಳೆಯದಾಗಿ ನಮ್ಮ ಕಾರ್ಯಸೇವೆಯನ್ನು ಸಲಿಸಲನುಕೂಲವಾಗುವುದೆಂಬ ಭರವಸೆ ಇದೆ. ನಮ್ಮ ಆಶ್ರಯದಾತರೂ ಹಿತಚಿಂತಕರೂ ಆದಷ್ಟು ತ್ವರ್ಯದಲ್ಲಿ "ಸೌಮ್ಯಾಲಯ"ವನ್ನು ಸಂದರ್ಶಿಸಬೇಕಾಗಿ ವಿನಂತಿ. ಎಲ್ಲ ಪತ್ರವ್ಯವಹಾರವನ್ನೂ ಹಣಪಾವತಿಗಳನ್ನೂ ಚೆಕ್ಕುಗಳನ್ನೂ ಈ ಕೆಳಗಿನ ವಿಳಾಸಕ್ಕೆ ಮಾಡತಕ್ಕುದು.

ಮೆಸರ್ಸ್. ಕೊಚ್ಚಿಕಾರ್ ಬ್ರದರ್ಸ್,
ಬೊಂಬೇ ಲೈಫ್ ಆಫೀಸು,
ಪುತ್ತಿಯಾರ ಪೋಸ್ಟು (ಕಲ್ಲಿಕೋಟೆ—ಮಲಬಾರು)

ನಮ್ಮ ಕಂಪೆನಿಯೊಂದಿಗೆ ವ್ಯವಹಾರವಿರುವವರ ಸೌಕರ್ಯಕ್ಕಾಗಿ ನಮ್ಮ ಟೆಲಿಗ್ರಾಫ್ ವಿಳಾಸವನ್ನು "Kochikar—Calicut" ಎಂದು ರಿಜಿಸ್ಟರ ಸಹ ಮಾಡಿಸಿರುವೆವು.

ಸಿ. ಶಂಕರನ್ ನಾಯರ್, ಮಲಬಾರ್ ಜಿಲ್ಲಾ ಏಜಂಟ್,
ಇವರ ಸವಿನಯ ಆಮಂತ್ರಣ.

ಕೊಚ್ಚಿಕಾರ್ ಬ್ರದರ್ಸ್,
ತಾ. 1—3—1936.

ESTD:—1906.

THE CANARA BANKING CORPORATION UDIPI, LTD.

THE FIRST INDIGENOUS & COSMOPOLITAN BANK OF S. K. DISTRICT.

Capital: Authorised, Issued and Subscribed	Rs. 3,50,000—0—0
Paid up	Rs. 2,88,840—0—0
Reserve and other funds	Rs. 3,72,337—0—0
Deposits	Rs. 29,50,717—0—0.

Fixed deposit rates up to 5% p. a.

16/6/1936.

Head Office:— UDIPI.

Branches:—1. Udipi, 2. Coondapoor, 3. Car Street—Mangalore, 4. Shimoga, 5. Madras. 6. Bunder—Mangalore, 7. Mercara and 8. Virarajendrapet.

ಲಕ್ಷ್ಮೀ ಕವಚ.

ಬಡತನದಿಂದ ಕಷ್ಟಪಡುತ್ತಿರುವವರು ಈ ರಕ್ಷಾಯಂತ್ರವನ್ನು ಧರಿಸತಕ್ಕದ್ದು. ಇದನ್ನು ಧರಿಸುವುದರಿಂದ, ದುಡ್ಡುಕಾಸಿನ ತಾಪತ್ರಯಗಳು ದೂರವಾಗುವುವು; ಮತ್ತು ದಿನದಿನಕ್ಕೂ ವೃದ್ಧಿಗತಿಯು ಸಂಭವಿಸುವುದು. ಅಲ್ಲದೆ, ಸಾಲದ ಮೂಲವಾದ ತೊಂದರೆಗಳ ಪರಿಹಾರವೂ, ಸಂಸಾರದಲ್ಲಿ ಐಕ್ಯವೂ, ಪ್ರಯತ್ನಿಸಿದ ಕಾರ್ಯಗಳಲ್ಲಿ ಜಯವೂ, ಶತ್ರುಗಳೊಡನೆ ರಾಜಿಯೂ, ಕೈಕೊಂಡ ಎಲ್ಲಾ ಕೆಲಸಗಳಲ್ಲಿಯೂ ಜಯವೂ, ಅಧಿಕಾರಿಗಳ ಅನುಗ್ರಹವೂ ಇನ್ನೂ ಅನೇಕ ಉಪಕಾರಗಳನ್ನೆಸಗುವ ಉಪಯೋಗಕರಗಳಾದ ಫಲಿತಾಂಶಗಳೂ ಸಿದ್ಧಿಸುವುವು. ವರ್ತಕವರ್ಗವೂ, ಕಸುಬುದಾರರೂ, ಇಬ್ಬರೂ ಈ ರಕ್ಷಾಯಂತ್ರವನ್ನು ಧರಿಸುವುದರಿಂದ, ತಮ್ಮ ತಮ್ಮ ವೃತ್ತಿಗಳಲ್ಲಿ ಅತಿಶಯವಾದ ಅಭಿವೃದ್ಧಿಯನ್ನು ಪಡೆಯುವರು. ಈ ರಕ್ಷಾಯಂತ್ರಗಳನ್ನು ಧರಿಸುವವರು, ತಮ್ಮ ಕಾಗದದಲ್ಲಿ, ಸ್ಪಷ್ಟವಾಗಿ, ತಮ್ಮ ಸಂಪೂರ್ಣವಾದ ಹೆಸರುಗಳನ್ನೂ, ಅಂದಾಜಿನ ಪ್ರಾಯವನ್ನೂ ನಮೂದಿಸತಕ್ಕದ್ದು.

ಚಾರ್ಜಿನ ವಿವರ.

ಲಕ್ಷ್ಮೀ ಕವಚ	ರೂ. 5—0—0
ವಿ. ಪಿ. ಪಾರ್ಸೆಲು	ರೂ. 0—5—0

ಹನುಮಂತ ಉಪಾಸಿ **ವಿ. ಕೆ. ಸತಗೋಪಾಚಾರಿಯರ್,**

ಹನುಮಾನ್ ಜ್ಯೋತಿಷ್ಯ ಆಶ್ರಮ, **ತಿರುತ್ತಣ್ಣಿ, ದ., ಇಂಡಿಯಾ.**

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ ?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವ ಚದುರಂಗ ಆಡುವವರೆ? ನೀವು ಯಾರಾದರೂ ಸರಿ-ನಿಮಗೆ ಬೇಸರಿಕೆಯುಂಟಾಗಿ, ಕೆಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ, ಸ್ಫೂರ್ತಿಯೂ ತೋರಿಬರುವುದು.

ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ. (ಟಪ್ಪಾಲು ಖರ್ಚು ಪ್ರತ್ಯೇಕ)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,

ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.

Pomona Sprayers

Here is a very useful Sprayer for Agriculturists, landholders, farmers, for spraying chemicals to the infected trees even to the height of 80 ft. from the ground level. It is strongly built so as to give a satisfactory service for many

years and is imported from Germany specially to meet the needs of Estate owners for spraying chemicals to the infected trees.

Price each Sprayer Rs. 33—0—0

Spray Controller ,, 7—8—0

BASEL MISSION BOOK DEPOT,
MANGALORE.

ಕಸಿ ಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲ ಭಾಗದಲ್ಲಿಯೂ ಸರಿಹೊಗಿ ಬೆಳೆದು, 3ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ. ಒಂದು ಮರದಲ್ಲಿ ಸಾವಿರಗಟ್ಲೆ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ಪರ್ಯಾಯ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಸುಧಾರ ರುಚಿಕರ; ಕ್ಯಾಲೆಯವರಿಗೆ ಉತ್ತಮ ಆಹಾರ. ಅದರಲ್ಲಿ ಕಬ್ಬಿಣಸತ್ವ ಮತ್ತು ವಿಟಮಿನ್ ತುಂಬಾ ಇರುವುದರಿಂದ ರಕ್ತವನ್ನು ವೃದ್ಧಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲಾ ತೋಟದಲ್ಲಿಯೂ ಇರತಕ್ಕದ್ದು. ಗಿಡ ಒಂದರ ಕ್ರಯ ರೂ. 1 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿಗಿಡಗಳೂ ದೊರೆಯುತ್ತವೆ.

ಕ್ರಯ ಪಟ್ಟಿಗೆ ಕೆಳಗಿನ ವಿಳಾಸಕ್ಕೆ ಬರೆಯುವುದು:—

ಮಂಗಳೂರಿನಲ್ಲಿ ವಿಜಯ ಬ್ಯಾಂಕಿನಲ್ಲಿಯೂ, ಸ್ಯಾಡ್ಲ ಶೋಪ್ ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಅಂಡ್ ಕೊ., ರಥಬೀದಿಯಲ್ಲಿಯೂ, ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿಪೋನ್ ಸ್ಟೋರ್‌ಗಳಲ್ಲಿಯೂ, ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,

12, 9—6. ಕಾಪು ಪೋಸ್ಟು, ದ. ಕನ್ನಡ.

VASANTHI HARMONIUMS FOR MELODY AND DURABILITY.

ಶುದ್ಧ ಮತ್ತು ಮಂಜುಳ ಧ್ವನಿಯಿಂದ ಕೂಡಿರುವ ವಸಂತಿ ಹಾರ್ಮೋನಿಯಂನ್ನು ನಿಮ್ಮ ಗೃಹಗಳಲ್ಲಿ ಉಪಯೋಗಿಸಿ, ಸಂಗೀತಸುಖವನ್ನು ಪಡೆಯಿರಿ. ಸಿಂಗಲ್, ಡಬ್ಬಲ್, ಟ್ರಿಬ್ಲ್, ಪೊರ್ಟಬ್ಲ್, ಕಾಲಿನ ಫೊಲ್ಡಿಂಗ್ ವಗೈರೆ ಎಲ್ಲಾ ತರದ ಹಾರ್ಮೋನಿಯಂಗಳು ತಯಾರಿಸಲ್ಪಡುವುವು.

ವಸಂತಿ

ಹಾರ್ಮೋನಿಯಂ ವರ್ಕ್ಸ್,

ಹಂಪನಕಟ್ಟೆ, ಮಂಗಳೂರು.

MUSIC IS THE CHARM OF LIFE

and Vasanthi Harmoniums supply that charm.

VASANTHI HARMONIUM WORKS,

Hampankatta, Mangalore.

Specially constructed in our workshop. Well Tuned & Fitted to withstand Indian Climate.

Proprietor:—

ATTAVAR BABOO.

ಕಾರಣ ಮತ್ತು ಪರಿಣಾಮ

ಮೈಸೂರು ಗಂಧದ ಸಾಬೂನನ್ನು ನಿತ್ಯವೂ ಉಪಯೋಗಿಸುವುದರ ಪರಿಣಾಮವೇನೆಂದರೆ, ಶಾರೀರಕ ಯೋಗ್ಯತೆಯು ರಮ್ಯವಾದ ಅನುಭವವಾಗಿದೆ ಅದು ಚರ್ಮವನ್ನು ಕೂಡ ಕಾಪಾಡುತ್ತದಲ್ಲದೆ, ಅದನ್ನು ಕೋಮಲವಾಗಿಯೂ ನುಣುಪಾಗಿಯೂ ಇರಿಸುತ್ತದೆ

ಇದರ ಕಾರಣವೇನೆಂದರೆ, ಬಿ. ಪಿ. ಗುಣವಿಶೇಷದ ಶುದ್ಧವಾದ ಮೈಸೂರು ಗಂಧದ ಎಣ್ಣೆಯು ಈ ತಯಾರಿಯ ಸ್ವಚ್ಛ ದಿನಸುಗಳೊಡನೆ ಮಿಶ್ರವಾಗುತ್ತಿರುವುದೇ.

ಮೈಸೂರು ಗಂಧದ ಸಾಬೂನು

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

GOVT. SOAP FACTORY,
BANGALORE.

THE

Popular Insurance Co., Ltd.

Head Office:—MANGALORE, S. India.

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಕಾರ್ಯಾಲಯ:—ಮಂಗಳೂರು, ದ. ಇಂಡಿಯ.

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು.

(ಭಾರತದ ವಿಮಾಪ್ರಪಂಚದಲ್ಲಿ ಯೋಗ್ಯಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ)

ಈ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ 'ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದಕ್ಕೆ ರೂಪಾಯಿ ೧೦/-ಬೋನಸ್ ಹಂಚಲಾಗುವುದು

ದ. ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ವ್ಯವಹಾರಕುಶಲರೂ, ಯೋಗ್ಯರೂ ಆದ ಏಜಂಟರು ಸಂಬಳ ಮತ್ತು ಕಮಿಶನಿನ ಮೇಲೆ ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. — ಯಥೋಚಿತವಾದ ಪುರಸ್ಕಾರಗಳಿವೆ. — ತಪ್ಪದೆ ವ್ಯವಹಾರ ಬೆಳಸಿರಿ.

ಮಾಹಿತಿಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಅನೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ವ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—2—0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂ. 3—0—0 ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನ ವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭ ಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತವಾಡುವುದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.
ಕ್ರಯ ಬಾಟ್ಲಿ 1ಕ್ಕೆ ರೂ. 2-0-0. ಪೋಸ್ಟೇಜು ಬಗ್ಗೆರೆ ಬೇರೆ

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ, ಮಂಗಳೂರು, ದ. ಕನ್ನಡ.

ಏಜಂಟರು—ಓರಿಯಂಟ್ ಡ್ರಗ್ಸ್ ಎಂಡ್ ಜನರಲ್ ಏಜನ್ಸಿ, ಸಂಪಿಗೆ ರೋಡ್,
ಮಲ್ಲೇಶ್ವರಮ್, ಪಿ. ಒ. ಬೆಂಗಳೂರು ಸಿಟಿ.



Encourage Indian Concerns,
Solve Unemployment,
By Insuring or Representing

THE CENTRAL

Mutual Life Assurance Society, Ltd.

BOMBAY

(POLICY-HOLDERS' OWN)

(Incorporated in India under Co's Act 1913)

WHICH OFFERS, WHAT IS BEST IN INSURANCE

WISE MEN INSURE

With The Central Mutual Because

The Policy-holders are themselves the share-holders of the Company & all the profits go with policy-holders only.

For Particulars & Agency terms please apply to:—

The Pioneer General Insurance Agency of West Coast,
Car Street, MANGALORE, South India.

OR

The Secretaries, Graham Building, Bombay No. 1.

ಈ ವಾರದ ಕಥೆ:—

ಪ್ರತಿಕಾರ.

(ಅನುವಾದಕ:—ಶ್ರೀ. ಕಟಪಾಡಿ ಶ್ರೀನಿವಾಸ ಶೆಣೈ, ಕಾರ್ಕಳ)

ರಾಮರಾಯರು ಊರಿನ ದೊಡ್ಡ ಪ್ರಮುಖರು. ಅವರನ್ನು ನೋಡದವರು ಕೇಳದವರು ಊರಿನಲ್ಲಿ ಒಬ್ಬರೂ ಇರಲಿಲ್ಲ. ಎಲ್ಲರೂ ಅವರು ಹೇಳಿದಂತೆ ಕುಣಿಯುವವರಾಗಿದ್ದರು. ಎಲ್ಲೆಲ್ಲಿಯೂ ಅವರ ಮಾತೇ ನಡೆಯುತಿತ್ತು. ಹೋದಹೋದಲ್ಲಿ ಅವರ ಅಭಿವಾದನ ಮಾಡಲಿಕ್ಕೆ ಜನರ ಎರಡೂ ಕೈಗಳು ಮುಂದುಮುಂದಾಗುತ್ತಿದ್ದುವು. ಅವರು ಸಾಧುಸ್ವಭಾವದವರೂ ಮಿತವ್ಯಯಿಗಳೂ ಆಗಿದ್ದರು. ಅವರ ಧರ್ಮಪತ್ನಿ ಕನಕಯು ಕೂಡ ದಯೆಯ ಮೂರ್ತಿ, ಭಕ್ತಿಯ ಪ್ರತಿಮೆ ಎಂದು ಜನರು ಆಡಿಕೊಳ್ಳುತಿದ್ದರು. ಮಕ್ಕಳು ರಾಮದಾಸ, ಪ್ರೇಮಾನಂದ ಮತ್ತು ಸುಶೀಲೆ ಒಳ್ಳೆ ಗುಣವಂತರೂ ಪ್ರತಿಭಾಸಂಪನ್ನರೂ ಆಗಿದ್ದರು. ಹೆಚ್ಚೇನು? ಊರಿನ ಸ್ತ್ರೀಪುರುಷ ಮಕ್ಕಳು ಅವರ ಪ್ರಾತಃಸ್ಮರಣೆ ಮಾಡಿ ತಮ್ಮ ಜನ್ಮವು ಪುನೀತವಾಯಿತೆನುತಿದ್ದರು. ಅವರು ಅಷ್ಟು ಸರಳಜೀವಿಗಳಾಗಿದ್ದರು.

ಇದೇ ಸುಖೀ ಪರಿವಾರದ ಸಮೀಪದಲ್ಲಿ ಭೀಮರಾಯನೆಂಬ ಒಬ್ಬ ವಕೀಲನು ವಾಸಮಾಡಿಕೊಂಡಿದ್ದನು. ಅವನಿಗೂ ಒಬ್ಬ ಹೆಂಡತಿ. ಸಂತಾನವೋ ಮಳೆಗಾಲದ ಕಪ್ಪೆಯರಿಗಳಂತೆ ಬೆಳೆಯುತಿತ್ತು. ವಕಾಲತಿನಿಂದ ದೊರೆತ ಉತ್ಪತ್ತಿ ಕೋರ್ಟು ಖಚೇರಿಗಳಿಗೆ ಹೋಗಿ ಬರುವ ಖರ್ಚಿಗೂ ಸಾಕಾಗುತಿದ್ದಿಲ್ಲ. ಆದ್ದರಿಂದ ಭೀಮರಾಯನ ಮನೆಖರ್ಚು ನಡೆಯುವದು ಕಷ್ಟ ಸಾಧ್ಯವಾಗಿತ್ತು. ಅವನು ಸಾಲ ಕೊಂಡು ಮುಗಿಯುವಂತಿರಲಿಲ್ಲ. ಅವನ ಭವಣೆ ಹೀಗಿದ್ದರೂ ಮೃತ್ಯುವು ಕೂಡ ಹೆದರು ವಷ್ಟು ಅವನು ಕ್ರೂರನಾಗಿದ್ದನು. ಬೇರೆಯವರ ಹಾನಿಯಿಂದ ತನ್ನ ಲಾಭವೆಂದು ತಿಳಿಕೊಳ್ಳುತ್ತಿದ್ದನು. ಆದ್ದರಿಂದ ಊರಿನಲ್ಲಿ ಅವನ ಕೀರ್ತಿಗಾನಮಾಡುವವರು ಬಹಳ ಮಂದಿ ಇರಲಿಲ್ಲ.

ರಾಮರಾಯ-ಭೀಮರಾಯ ಇಬ್ಬರೂ ಬಾಲ್ಯಕಾಲದ ಸಹಪಾಠಿಗಳಾಗಿದ್ದರು. ಇಬ್ಬರೂ ಜತೆಜತೆಯಾಗಿ ಬಿ. ಎ. ತನಕ ಓದಿದ್ದರು. ಆದರೆ ಬಿ. ಎ. ಕಲಿಯುತಿದ್ದ ಅದೇ ವರ್ಷ ರಾಮರಾಯರ ತೀರ್ಥರೂಪರು ಕಾಲವಶರಾದರು. ಅವರ ಆಸ್ತಿಪಾಸ್ತಿಗಳಿಗೆ ಅವರ ಏಕಮಾತ್ರ ಪುತ್ರ ರಾಮರಾಯರೇ ಹಕ್ಕುದಾರರೂ ಅಧಿಕಾರಿಗಳೂ ಆದರು. ಇತ್ತ ಭೀಮರಾಯನು ಇನ್ನೂ ಎರಡು ವರ್ಷ ಕಲಿತು ವಕಾಲತ ಪರೀಕ್ಷೆ ಕೊಟ್ಟು ಊರಿಗೆ ಬಂದನು. ಪ್ರಕಟವಾಗಿ ಭೀಮರಾಯನು ರಾಮರಾಯರೊಡನೆ ಬಹಳ ಸ್ನೇಹವನ್ನು ತೋರಿಸುತಿದ್ದನು. ಆದರೆ ಅಂತರಂಗದಲ್ಲಿ ಅವರ ಸರ್ವನಾಶವನ್ನು ಬಯಸುತಿದ್ದನು. ರಾಮರಾಯರನ್ನು ಅವಮಾನದ ಹೊಂಡದಲ್ಲಿ ಕೆಡವಿಹಾಕುವ ಅನುಕೂಲ ಸಂದರ್ಭದ ನಿರೀಕ್ಷೆಯಲ್ಲಿದ್ದನು.

ಭೀಮರಾಯನ ಸೌಭಾಗ್ಯದಿಂದ ಅವನಿಗೆ ಅಂಥ ಒಂದು ಸಂದರ್ಭವೂ ದೊರಕಿತು. ಊರಿನ ಸಾರ್ವಜನಿಕ ದೇವಸ್ಥಾನದ ಆಡಳಿತೆಯ ಭಾರವು ರಾಮರಾಯರ ಮೇಲೆ ಬಿತ್ತು. ದೇವಾಲಯಕ್ಕೆ ಭೂಮಿಕಾಸುಗಳ ಹೇರಳ ಸಂಪತ್ತಿ ಇತ್ತು. ದೇವರ ಅರ್ಚಕರೂ ಕರ್ಮಚಾರಿಗಳೂ ದುರಾಚಾರಿ ಮತ್ತು ಭೋಗವಿಲಾಸಿಗಳಾಗಿದ್ದರು. ರಾಮರಾಯರು ಆಡಳ್ತೆದಾರರಾಗುವ ಮೊದಲು ದೇವಸ್ಥಾನದ ಸ್ಥಿತಿಯು ಬಹಳ ಶೋಚನೀಯವಾಗಿತ್ತು. ಆದರೆ ರಾಮರಾಯರು ಆಡಳಿತೆಯ ಸೂತ್ರವನ್ನು ಕೈಯಲ್ಲಿ ತೆಗೆದುಕೊಂಡ ಸ್ವಲ್ಪಕಾಲದಲ್ಲಿಯೇ ಈ ಎಲ್ಲ ದೋಷಗಳು ದೂರವಾಗತೊಡಗಿದುವು. ಇದರಿಂದ ರಾಮರಾಯರ ಕೀರ್ತಿಲತೆಯೂ ಲಹಲಹಿಸಿ ಬೆಳೆಯತೊಡಗಿತು.

ಆದರೆ ಭೀಮರಾಯನಿಗೆ ಇದು ಅಸಹನೀಯವಾಯಿತು. ಅವನು ಮತ್ಸರಿಯಾಗಿದ್ದಂತೆ ಮೂರ್ಖನೂ ಆಗಿದ್ದನು. ಅವನು ದೇವಸ್ಥಾನದ ಕರ್ಮಚಾರಿಗಳನ್ನೂ ಅರ್ಚಕರನ್ನೂ ತನ್ನ ಪಕ್ಷಕ್ಕೆ ಸೇರಿಸಿಕೊಂಡನು. ಆ ಮೇಲೆ ಊರಿನ ಕೆಲವು ಲುಚ್ಚರನ್ನೂ ರಾಮರಾಯರ ಎದುರು ನಿಲ್ಲಿಸಿದನು. ಅನಂತರ ರಾಮರಾಯರು ದೇವಸ್ಥಾನದ ೫೦೦ ರೂಪಾಯಿಗಳನ್ನು ತಿಂದುಹಾಕಿರುವರೆಂದು ವಿಶ್ವಾಸಘಾತದ ಅಪರಾಧವನ್ನು ಹೊರಿಸಿ ಕೋರ್ಟಿನಲ್ಲಿ ಫಿರ್ಯಾದಿ ಕೊಟ್ಟರು.

೨

ಕೋರ್ಟಿನಲ್ಲಿ ಈ ದಿನ ಜನರು ಕಿಕ್ಕಿರಿದು ನೆರೆದಿರುವರು. ವಾಚಕರು ಇದರ ಕಾರಣವನ್ನು ಊಹಿಸಿರಬಹುದು. ದೇವಸ್ಥಾನದ ಕಡೆಯಿಂದ ಭೀಮರಾಯನು ವಕಾಲತು ಮಾಡಿದನು. ರಾಮರಾಯರ ಕಡೆಗೆ ಸಮಸ್ತ ಜನತೆಯು ಸಹಾನುಭೂತಿಯನ್ನು ತೋರಿಸಿತ್ತು. ಅಂತ್ಯದಲ್ಲಿ ಭೀಮರಾಯನು ವ್ಯವಹರಣೆಯಲ್ಲಿ ಗೆದ್ದನು. ಅವನು ಜಡ್ಜ ಮಹಾಶಯನಿಗೆ ಲಂಚ ಕೊಟ್ಟಿದ್ದನು.

ರಾಮರಾಯರು ೫೦೦ ರೂಪಾಯಿ ದೇವಸ್ಥಾನಕ್ಕೆ ದಂಡ ತೆರಬೇಕು ಅಥವಾ ೧೫ ದಿನಗಳ ಸಾದಾ ಸಜೆಯನ್ನು ಅನುಭವಿಸಬೇಕೆಂದು ಜಡ್ಜರು ತಮ್ಮ ತೀರ್ಮಾನವನ್ನು ಓದಿಹೇಳಿದ್ದರು. ಒಬ್ಬ ಪ್ರತಿಷ್ಠಿತ ವ್ಯಕ್ತಿಗೆ ಇಷ್ಟೇ ಸಾಕು. ರಾಮರಾಯರು ಲಜ್ಜೆಯಿಂದ ನತಮಸ್ತಕರಾದರು. ಆಗಲೇ ಭೀಮರಾಯನು ಬಂದು—'ರೂಪಾಯಿ ಕೊಡುತ್ತೀರಾ, ಅಥವಾ ಪೊಲೀಸನಿಗೆ ಕರೆಯಬೇಕೆ?' ಎಂದು ಕರ್ಣಕಠೋರ ಮಾತುಗಳನ್ನಾಡಿದನು. ಆಗಲೇ ರಾಮರಾಯರು ೫೦೦ ರೂಪಾಯಿ ಕೋರ್ಟಿಗೆ ಹಾಜರು ಮಾಡಿದರು. ಭೀಮರಾಯನನ್ನು ಕರೆದು—'ಭೀಮಾ! ನೀನು ಬಹುರೂಪೀ ಸಾಧು ಎಂದು ನನಗೆ ತಿಳಿದಿರಲಿಲ್ಲ. ಏನೂ ಇರಲಿ, ಭಾಗ್ಯದಲ್ಲಿ ಬರೆದಂತಾಗುವದು ಸಂಪೂರ್ಣ ನಿಜ,' ಎಂದು ಹೇಳಿ ಮನೆಕಡೆಗೆ ತೆರಳಿದರು.

ಇತ್ತ ಭೀಮರಾಯನನ್ನು ಬಂದು ಸಾಲಗಾರರು ಪೀಡಿಸುವದು ಬೆಳೆಯುತ್ತ ಬಂದಿತು. ಆದರೆ ಕೊಡಲಿಕ್ಕೆ ಏನಾದರೂ ಉಳಿದಿದ್ದರಲ್ಲವೆ ಸಾಲಗಾರರನ್ನು ಸಮಾಧಾನಮಾಡುವದು? ಮಾರಿ ಅಥವಾ ಅಡವು ಇಟ್ಟು ಹಣ ತರಲಿಕ್ಕೆ ಮನೆಯಲ್ಲಿ ಚಂಬುಚರಿಗೆ ಕೂಡ ಉಳಿದಿರಲಿಲ್ಲ. ೨೦೦೦ ರೂಪಾಯಿ ಬರಬೇಕಾದ ಒಬ್ಬ ಸಾಲಗಾರನು ನಿರುಪಾಯನಾಗಿ ಭೀಮರಾಯನ ಮೇಲೆ ಕೈಫಿಯತ್ತು ದಾಖಲುಮಾಡಿದನು. ಕೋರ್ಟಿನಲ್ಲಿ ಡಿಕ್ರಿಯೂ ಆಯಿತು. ಡಿಕ್ರಿ ಸಮಾಧಾನಕ್ಕೆ ಕೊಡಲು ಭೀಮರಾಯನ ಹತ್ತಿರ ಒಂದು ಕವಡಿ ಕೂಡ ಇರಲಿಲ್ಲ. ಆದ್ದರಿಂದ ಅವನು ಕಾರಾಗೃಹವನ್ನು ಅನುಭವಿಸಬೇಕಾಯಿತು.

ಮನೆಯಲ್ಲಿ ಭೀಮರಾಯನ ಹೆಂಡತಿ ಶಶಿಪ್ರಭೆ ಮತ್ತು ಒಂದು ಡಜನ ಮಕ್ಕಳು ಉಳಿದರು. ಗಂಡನ ಬಂಧನವಿಮೋಚನೆಗಾಗಿ ಶಶಿಪ್ರಭೆಯು ಕೈಲಾಸಪ್ರಯತ್ನ ಮಾಡಿದಳು. ಆದರೆ ಏನೂ ಸಾರ್ಥಕವಾಗಲಿಲ್ಲ. ಅಂತ್ಯದಲ್ಲಿ ರಾಮರಾಯರ ಶರಣುಹೋಗುವದೊಂದೇ ಉಪಾಯವು ಉಳಿಯಿತು.

ರಾಮರಾಯರಿಗೆ ತುಂಬಿದ ಕೋರ್ಟಿನಲ್ಲಿ ಆದ ಅಪಮಾನವು ಅಸಹನೀಯವಾಗಿ ಅದೇ ಚಿಂತೆಯಿಂದ ರೋಗಶಯ್ಯೆಯ ಮೇಲೆ ಬಿದ್ದುಕೊಂಡರು. ಒಂದು ದಿನ ಅವರು ತಮ್ಮ ಕೋಣೆಯಲ್ಲಿ ಬಿದ್ದುಕೊಂಡಿದ್ದರು. ಅಷ್ಟರಲ್ಲಿ ಯಾರೋ ಒಬ್ಬ ಸುಂದರಿಯು ಕೋಣೆಯನ್ನು ಪ್ರವೇಶಿಸಿದಳು. ರಾಮರಾಯರಿಗೆ ಆಶ್ಚರ್ಯವೂ ಸಂದೇಹವೂ ಉಂಟಾಗಿ—'ಅಮ್ಮಾ! ತಾವು ಯಾರು, ಯಾವ ಕಾರಣದಿಂದ ಇಲ್ಲಿಗೆ ಬಂದಿರಿ?' ಎಂದು ಕೇಳಿದರು. ಬಂದವಳು ಶಶಿಪ್ರಭೆ ಅಲ್ಲದೆ ಬೇರೆ ಯಾರೂ ಆಗಿರಲಿಲ್ಲವೆಂಬುದನ್ನು ಪಾಠಕರು ತಿಳಿದಿರಬಹುದು.

'ನನ್ನಂಥ ದುರ್ಭಾಗ್ಯೆಯ ಪರಿಚಯವನ್ನು ಪಡೆದು ತಮ್ಮಂಥ ಪುಣ್ಯಾತ್ಮರಿಗೆ ಏನು ಲಾಭವಾಗಬಹುದು? ಈಗ ಇಷ್ಟೇ ಹೇಳುವೆನು—ಆಪತ್ತುವಿಪತ್ತುಗಳಲ್ಲಿ ತೊಳಲಿ ಬಳಲಿದ್ದೇನೆ. ತಮ್ಮ ಸಹಾಯವನ್ನು ಅಪೇಕ್ಷಿಸಿ ಬಂದಿದ್ದೇನೆ' ಎಂದು ಅವಳೆಂದಳು.

ಸಹಾಯದ ಶಬ್ದವನ್ನು ಕೇಳಿದೊಡನೆ ರಾಮರಾಯರ ಆನಂದಕ್ಕೆ ಪಾರವೇ ಉಳಿಯಲಿಲ್ಲ. ಅವರು ಬಹಳ ವಿಸ್ಮಿತರಾದರು. 'ತಮ್ಮ ಪರಿಚಯವನ್ನು ಪಡೆಯಲಿಕ್ಕೆ ಲಾಲಾಯಿತನಾಗಿದ್ದೇನೆ. ದಯಮಾಡಿ ತಮ್ಮ ಪರಿಚಯ ಕೊಡಿರಿ' ಎಂದು ರಾಮರಾಯರು ಪುನಃ ಹೇಳಿದ ಮೇಲೆ ಅವಳು—'ನಾನು, ತಮ್ಮ ಮಿತ್ರ, ವಕೀಲ .....' ಎಂದಳು.

ಇಷ್ಟು ಹೇಳುತ್ತಲೇ ರಾಮರಾಯರು ಪೂರ್ವಾಪರ ಎಲ್ಲವನ್ನೂ ತಿಳಿಕೊಂಡರು. ಶಶಿಪ್ರಭೆಗೆ ಬೇಕಾದ ಸಹಾಯದ ಸ್ವರೂಪವೂ ಅವರಿಗೆ ಗೊತ್ತಾಯಿತು. ವಕೀಲ ಭೀಮರಾಯನಿಗೆ ಪ್ರಾಪ್ತವಾದ ದುರ್ಗತಿಯ ಕಥೆಯನ್ನು ಕೆಲವು ದಿನಗಳ ಮೊದಲು ಅವರು ಕೇಳಿದ್ದರು. 'ಏನು, ತಾವು ತಮ್ಮ ಮಿತ್ರ ಮತ್ತು ಅವನ ಹೆಂಡತಿ—ಮಕ್ಕಳನ್ನು ಹೀಗೆ ಅನಾಥರಾಗಬಿಡುವಿರಾ?' ಎಂದು ಶಶಿಪ್ರಭೆ ತುಂಬಿದ ಕಣ್ಣುಗಳಿಂದ ಪ್ರಶ್ನಿಸಿದಳು.

ಭೀಮರಾಯನ ಕುಟುಂಬದ ದುಃಖಪೂರ್ಣ ಭವಿಷ್ಯವನ್ನು ಊಹಿಸಿ ರಾಮರಾಯರ ಕೆನ್ನೆಗಳೆರಡೂ ಕಣ್ಣೀರಿನಿಂದ ತೊಯಿದು ಹೋದುವು. ಅವರು ಹೇಳಿದರು—'ಅಮ್ಮಾ, ಚಿಂತಿಸಬೇಡ. ಅವರನ್ನು ಬಂಧವಿಮುಕ್ತರನ್ನಾಗಿ ಮಾಡಲಿಕ್ಕೆ ಯಥಾಶಕ್ತಿ ಪ್ರಯತ್ನಿಸುವೆನು.'

ಮರುದಿನವೇ ರಾಮರಾಯರು ಭೀಮರಾಯನ ಸಾಲಗಾರನನ್ನು ಕರೆದು ಅವನಿಗೆ ಸಲಬೇಕಾದ ಅಸಲು ಬಡ್ಡಿ ಸೇರಿ ೨,೬೦೦ ರೂಪಾಯಿ ಕೊಟ್ಟುಬಿಟ್ಟರು. ಮತ್ತು ಭೀಮರಾಯನನ್ನು ಜೈಲಿನಿಂದ ಬಿಡಿಸಲಿಕ್ಕೆ ಹೇಳಿದರು.

ಭೀಮರಾಯನು ಕಾರಾಗೃಹವನ್ನು ಬಿಟ್ಟು ಮನೆಗೆ ಬಂದನು. ರಾಮರಾಯರು ಮಾಡಿದ ಉಪಕಾರವು ಅವನಿಗೆ ಜೈಲಿನಲ್ಲಿರುವಾಗಲೇ ಗೊತ್ತಾಗಿತ್ತು. ಆದಕಾರಣ ತನ್ನ ಅಪರಾಧದ ಕ್ಷಮಾಯಾಚನೆ ಮಾಡಲಿಕ್ಕೆ ಅವನು ರಾಮರಾಯರ ಮನೆಕಡೆಗೆ ತೆರಳಿದನು.

ಸ್ವಲ್ಪ ಸಮಯದಲ್ಲಿ ಅವನು ರಾಮರಾಯರ ಮನೆದ್ವಾರವನ್ನು ಹತ್ತಿದನು. ಅಷ್ಟರಲ್ಲಿ ಜನರು ರಾಮರಾಯರ ಶವವನ್ನು ಅಂತ್ಯಸಂಸ್ಕಾರಕ್ಕೆ ಹೊತ್ತುತರುವುದನ್ನು ಕಂಡು ಸ್ತಂಭೀಭೂತನಾದನು. 'ಅಯ್ಯೋ, ಸಾಯುವ ಕಾಲಕ್ಕೂ ನನ್ನ ಪ್ರಾಣದಾತನನ್ನು ನೋಡಲಾರದೆ ಹೋದೆನಲ್ಲಾ!' ಎಂದುಕೊಂಡು ಅಲ್ಲೇ ಭೂಶಾಯಿಯಾದನು.

'ವಿಜಯ'

FIXED DEPOSITS

ARE NOW RECEIVED ON THE FOLLOWING RATES:—

5½% p. a. for 6 months
6 „ „ 12 „
6½ „ „ 24 „

INTEREST BEING PAYABLE EVERY QUARTER.

Please apply for further particulars

The Udipi Bank, Ltd.,
UDIPI.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

"ಗೊನೊಕಿಲರ್" (ರಿಜಿಸ್ಟರ್ಡ್)

ಡಾ. ಜಸಾನಿಯವರ ಜಗತ್ಪ್ರಸಿದ್ಧ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಇಂದಿನ ಆಧುನಿಕ ಔಷಧ. ಅಂಗ್ಲೇಯ ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ಔಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀಪ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರಜಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ 50 ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. 3—0—0 (ಮೂರು) ವಿ. ಪಿ. ಖರ್ಚು ಬೇರೆ.

CONO KILLER — REGD. — ORIGINAL TRADE MARK

ಸಕಲ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡುಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ,
ಗಿರಗಾಂವ ಬ್ಯಾಕ್ ರೋಡ್, ಮುಂಬಯಿ 4.

Sole Manufacturer: Dr. D. N. JASANI,
GIRGAUM BACK ROAD, BOMBAY 4.

ಮೊಡರ್ನ್ ಡ್ಯಾಮಂಡ್ಸ್.

ನಿಜವಾದ ವಜ್ರಗಳ ಬದಲಿಗೆ ಇವೇ ಯೋಗ್ಯ ಸಾಧನಗಳು)

MODERN DIAMONDS

SUBSTITUTE for REAL DIAMONDS

ಮೆಸರ್ಸ್ ಶೆಲ್ಡ್ರಿಕ್ ಬ್ರದರ್ಸ್

ವಜ್ರ ವ್ಯಾಪಾರಿಗಳು, ಆಭರಣ ತಯಾರಿಸುವವರು, ಇತ್ಯಾದಿ
ಮದ್ರಾಸು ಮತ್ತು ಲಂಡನ್—ಇವರ ಅಭಿಪ್ರಾಯ.

"ಮೊಡರ್ನ್ ವಜ್ರಗಳು" ನಾನು ಕಂಡ ಸಿಂತೆಟಿಕ್ ಅಥವಾ ಪುನಃ ನಿರ್ಮಿಸಿದ ವಜ್ರಗಳಿಗಿಂತಲೂ ಬಹಳ ಮುಂದುವರಿದವುಗಳೆಂದು ನಾನು ಭಾವಿಸುತ್ತೇನೆ. ಇವುಗಳು ನಿಜವಾದ ವಜ್ರಗಳೊಡನೆ ಕೆತ್ತನೆಯಲ್ಲಿಯೂ ಪ್ರಕಾಶದಲ್ಲಿಯೂ ಯೋಗ್ಯವಾಗಿ ಸರಿಹೋಲುತ್ತಿದ್ದು ನಿಜವಾದ ವಜ್ರಗಳ ಬದಲಿಗೆ ಉತ್ತಮ ಸಾಧನವಾಗಿ ಪರಿಣಮಿಸಬೇಕಾಗಿದೆ.

ಸಂಪೂರ್ಣ ಮಾಹಿತಿಯು ಅಪೇಕ್ಷಿಸಿದಲ್ಲಿ ಉಚಿತವಾಗಿ ಕಳುಹಿಸಲ್ಪಡುವದು.

C. C. Acharyulu & Son,
High Class Jewellers,
Post Box No. 543, Park Town, Madras.

1936ನೇ ಮಾದರಿಯ

ಹೊಸ ಸೀರೆಗಳು

ಗಟ್ಟಿ ಬಣ್ಣದಲ್ಲಿ ಪ್ರಖ್ಯಾತಿ ಹೊಂದಿದ ನಮ್ಮ **"ಕಾಫಿ ಕಲ್ಲರ್"** ಸೀರೆಗಳನ್ನೇ ಉಪಯೋಗಿಸಿರಿ!
ಕಡಿಮೆ ಬೆಲೆಗೆ–ತರತರದ ಬಣ್ಣದ–ನಮೂನೆವಾರು ಅಂಚಿನ–ಸೀರೆಗಳು!
ಒಮ್ಮೆ ಬಂದು ನಮ್ಮ ಅಂಗಡಿಯನ್ನು ಸಂದರ್ಶಿಸಿರಿ!

ಪಿ. ಎ. ಪೈ ಬ್ರದರ್ಸ್—ಉಡುಪಿ.
ದಿ ಕರ್ನಾಟಕ ಡ್ರಾಯಿಂಗ್ ಎಂಡ್ ವೀವಿಂಗ್ ಇಂಡಸ್ಟ್ರೀಯಲ್
ಏಜಂಟರು:—**ಸೂಜಿಕರ್ಣರ್ ಬ್ರದರ್ಸ್—ಮಂಗಳೂರು.**

ಯಜಮಾನ್ ಅಂಡ್ ಸನ್ಸ್

ಫೋಟೊ, ಲೈಫ್, ಬ್ಲಾಕುಗಳು
ಹಿತ್ತಾಳೆ, ಸೀಸದ, ಬ್ಲಾಕುಗಳು
ಅರಗಿಸಶೀಲು, ಜವಾನರ ಬಿಲ್ಲೆ
ಮತ್ತು ರಬ್ಬರ್ ಮೊಹರುಗಳೂ
ತಯಾರಿಸತ್ತೀವೆ.

ಚಿಕ್ಕಪೇಟೆ
ಬೆಂಗಳೂರು ಸಿಟಿ

ಬೀಜಗಳು.

೨೫ ಪ್ಯಾಕೆಟ್ ಇಂಡಿಯನ್ ತರಕಾರಿ ಬೀಜಗಳು ೪—೦—೦
೨೫ ,, ಯುರೋಪ ,, ,, ೫—೦—೦
೨೫ ,, ಹೂವಿನ ಬೀಜಗಳು ೫—೦—೦

ಗಿಡಗಳು.

೧೨ ಜಾತಿ ಮೂವಿನ ಗಿಡಗಳು ಕಟ್ಟಿದ್ದು ಡಜನ್ ೧ಕ್ಕೆ ೧೦—೦—೦

ನಿಂಬೆ, ಕೊಡಗು ಕಿತ್ತಳೆ, ಚೇಪೆ, ಪನ್ನೇರಳೆ, ದಾಳಿಂಬರ, ಚಕ್ರವರ್ತಿ, ಶೇವ್ಹು, ಪಿಚ್ಚೀಸ್, ಅಂಜೂರ, ದ್ರಾಕ್ಷೆ ಗಿಡಗಳು ಡಜನ್ ೧ಕ್ಕೆ ೯—೦—೦
ಕಟ್ಟಿದ ಸಂಪಿಗೆ ಗಿಡಗಳು ಡಜನ್ ೧ಕ್ಕೆ ೧೨—೦—೦
ಪಾರಿಜಾತ, ನಂದಿವರ್ಧನ, ದಾಸಿವಾಳ, ಮಲ್ಲಿಗೆ ಹೂವಿನ ಗಿಡಗಳು ಡಜನ್ ೧ಕ್ಕೆ ೬—೦—೦

ನಮ್ಮಲ್ಲಿ ದೊರೆಯುವ ಗಿಡ, ಬೀಜ, ತರಕಾರಿ, ಹೂವ, ಹಣ್ಣುಗಳ ಬೆಲೆ ತೋರಿಸುವ ಕನ್ನಡ ಕ್ಯಾಟಲಾಗನ್ನು ಅಪೇಕ್ಷಿಸುವವರು ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ್,
ಇಂಟರ್‌ನ್ಯಾಷನಲ್ ಸೀಡ್ ಕಂಪೆನಿ,
ಲಾಲ್‌ಬಾಗ್ ಫೋಟ್ಸ್ ರೋಡ್,
ಬೆಂಗಳೂರು ಸಿಟಿ.



ಸೊಕ್ಕಿದ ನರಗಳಿಗೆ ಪಟುತ್ವವೀವುದು.



Alembic
The Seal of Purity

"ಜೀರ್ಣಶಕ್ತಿ ಮತ್ತು ದೇಹಬಲ ಹೆಚ್ಚಿಸುವ ಔಷಧಗಳಲ್ಲಿ ಅಲೆಂಬಿಕ್ ಹೆಮೋ ದ್ರಾಕ್ಸೋಮಾಲ್ಸ್ ಶ್ರೇಷ್ಠವಾದದ್ದು.

ಇದು ಬಲವನ್ನೂ ಜೀರ್ಣಶಕ್ತಿಯನ್ನೂ ಹೆಚ್ಚಿಸಿ ನರಗಳಿಗೆ ಪಟುತ್ವವನ್ನು ಕೊಡುವುದೇ ಅಲ್ಲದೆ ಜೀವನಸೌಖ್ಯವನ್ನನುಭವಿಸಲು ಸಹಾಯವನ್ನೂ ಮಾಡುವುದು.

ಹೆಮೋ-ದ್ರಾಕ್ಸೊ-ಮಾಲ್ಟ್

ಅಲೆಂಬಿಕ್ ಕೆಮಿಕಲ್ ವರ್ಕ್ಸ್, ಲಿಮಿಟೆಡ್.

ಮುಂಬಯಿ ಬರೋಡಾ ಮದರಾಸು.

ಅಶೋಕ್

ಬೋನಸ್
ಪ್ರತಿ ಸಾವಿರಕ್ಕೆ ರೂ. 10/-
ಅದೂ
ಪ್ರಥಮ ಮೂಲ್ಯಮೇತನದಲ್ಲಿಯೇ.

ಜನತೆಯ ವಿಶ್ವಾಸದ ಪ್ರತ್ಯಕ್ಷ ನಿದರ್ಶನ.

ಗುಜರಾತಿನ ಪ್ರಥಮ ಜೀವವಿಮಾ ಕಾರ್ಯಾಲಯವಾದ ಇದು ತನ್ನ ಪ್ರಥಮ ಮೂಲ್ಯವೇತನ ಕಾಲದಲ್ಲಿಯೇ, ನಾಲ್ಕು ವರ್ಷಗಳ ಅಂತ್ಯದೊಳಗೆ ಮಾತ್ರವೇ 'ಶಿಲುಕ'ನ್ನು ತೋರಿಸಲು ಸಮರ್ಥವಾಗಿದೆ.

ಡೈರೆಕ್ಟರರ ಮಂಡಲಿಯಲ್ಲಿ, ಡೆಲ್ಲಿಯಲ್ಲಿ ನಡೆದ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಅಧಿವೇಶನದ ಕಾಜೀ ಪ್ರೆಸಿಡೆಂಟರಾದ ಸೇಟ್ ರಾಂಜೋಡ್‌ಲಾಲ್, ಕಟ್ನಿಯ ಸಿಮೆಂಟ್ ಮತ್ತೂ ಇಂಡಸ್ಟ್ರೀಯಲ್ ವರ್ಕ್ಸ್, ಲಿಮಿಟೆಡ್‌ನ ಶ್ರೀ. ಹರಿದಾಸ್ ಗೋಪಾಲ್‌ದಾಸ್, ಅಹಮ್ಮದಾಬಾದ್ ಮುನಿಸಿಪಾಲಿಟಿಯ ಮಾಜೀ ಪ್ರೆಸಿಡೆಂಟ್ ಮತ್ತೂ ವೈಸ್ ಪ್ರೆಸಿಡೆಂಟರಾದ ಶ್ರೀ. ಜಿ. ವಿ. ಮಾವಲಂಕರ್, ಬೀ. ಏ., ಎಲ್. ಎಲ್. ಬಿ. ಇಂಥವರೂ ಇತರರೂ ಇದ್ದಾರೆ.

ಕಂಪೆನಿಯ ಏಕ್ಚುವೆರಿಯಾದ ಶ್ರೀ. ಜಿ. ಎಸ್. ಮುರಾಡೇ, ಎಂ. ಏ., ಏ. ಐ. ಏ. ಇವರು ಬರೆಯುವುದೇನೆಂದರೆ:—

'ಮೂಲ್ಯನೇತನದ ಫಲವು ಉತ್ತೇಜನಕಾರಿಯೆಂದು ಎಣಿಸಬೇಕು. ನಿಮ್ಮ ಕಂಪೆನಿಯು ಕಷ್ಟದ ಸಮಯವಾದ ಒಂದೊಂದು ಅವಧಿಯನ್ನೀಗ ಹಾಟಿದೆ. ಯಾವ ಆ ಸಮಯದ ಒಂದು ಭಾಗದಲ್ಲಿ ನೀವೂ, ಜನತೆಯೂ ಅನಿಶ್ಚಿತವಾದ ವಿದ್ಯಮಾನಗಳ ಅನುಭವವನ್ನು ಪಡೆದಿರೋ ಯಾವ ಆ ಸಮಯದಲ್ಲಿ ನಿಮ್ಮ ಆಫೀಸಿನ ಉದ್ಯೋಗಿಗಳು ಕೊಂಚ ಮಟ್ಟಿಗೆ ಸಾರ್ವಜನಿಕ ಸೇವೆಯನ್ನು ಸಮರ್ಪಿಸಲು ಯತ್ನಿಸಿದರೋ, ಆ ಸಮಯದಲ್ಲಿ, ನಿಮ್ಮ ಕೆಲಸಕಾರ್ಯಗಳ ಮೇಲೆ ವಿಶೇಷವಾದ ಮಾನಸಿಕ ಪರಿಶ್ರಮದ ಭಾರವು ಹೇರಿರಲೇ ಬೇಕು; ಆದರೆ, ಇಷ್ಟೊಂದು ಸಂಕಷ್ಟಾನುಭವವನ್ನು ಮಾಡಿಕೊಂಡೂ, ನೀವು ಇಷ್ಟೊಂದು ಶೀಘ್ರಗತಿಯ ವೃದ್ಧಿಯನ್ನು ಸಾಧಿಸುವ ಹಾಗೆ, ನಿಮ್ಮ ಕಂಪೆನಿಯು ಪ್ರದರ್ಶಿಸಿದ ಈ ವೃದ್ಧಿಗತಿಯನ್ನು ಜನತೆಯೂ ಮೆಚ್ಚಿರಬೇಕೆಂದು ನಾನು ಭಾವಿಸುತ್ತೇನೆ...ಆದುದರಿಂದ, ನೀವು... ವರ್ಷದಿಂದ ವರ್ಷಕ್ಕೆ ಇನ್ನೂ ಹೆಚ್ಚು ಹೆಚ್ಚು ಅಭಿವೃದ್ಧಿಯನ್ನು ತೋರಲು ಸಮರ್ಥರಾಗುವಿರೆಂದು ನನ್ನ ನಂಬಿಕೆ.'

ಚುರುಕಾದ ಏಜೆಂಟರುಗಳು ಬೇಕಾಗಿದ್ದಾರೆ. ಬರೆದುಕೊಳ್ಳಿ:

THE ASHOK INSURANCE CO., LTD.,
9, Forbes Street, Fort, BOMBAY. Raikhad, AHMEDABAD.
ಅಥವಾ ಕೊಡಗು ಮತ್ತೂ ಮೈಸೂರು ಪ್ರಾಂತ್ಯಗಳ ಚೀಫ್ ಏಜಂಟ್ಸ್:—
ನಾಥ ಬ್ರದರ್ಸ್, 3, ಆಸ್ಪತ್ರೆಯ ರೋಡ್, ಬಳೇಪೇಟೆ, ಬೆಂಗಳೂರು ಸಿಟಿ.

ಪಂಡಿತ ಜವಾಹೀರಲಾಲ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣಪದಕ ದೊರೆತ

ಒಂದೇ ಸವನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲು ದೊರೆತಿರುವ, ವರದೇಶದಲ್ಲಿ ಖರ್ಚಾಗುವ,

ಶಕ್ತಿಯ ಮೇಲೆ

ದ್ರಾಕ್ಷಾಮೃತ

ಮೊದಲನೇ ತರಗತಿಯ ಟಾನಿಕ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ-ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶೀಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕೆ [ಗರ್ಭಿ] ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈ, ಕಾಲು, ಕಣ್ಣೊಳಗೆ ಉರುಪು ಬೇಳೋಣ, ಶೌಚಕ್ಕೆ ಸಾಫು ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅಸ್ಥಿ ಚನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯವ್ವನವಂತರಾಗಿ, ಶರೀರ ಬಲವಾಗಿ, ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಸ್ಣದ ಗರ್ಭಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ಸಂತರ ತಿಳಿಸೀತು.

ಪ್ರಮಾಣ:—ಸಸಿಕಸಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು. ೧ ಬಾ. ಬೆಲೆ ೧। ರೂ. ೩ ಬಾ. ಬೆಲೆ ೩॥ ರೂ. ೧ ಡಜನ್ ಬಾ. ಬೆಲೆ ೧೨ ರೂ.

ಮ್ಯಾನೆಜರ:—ದ್ರಾಕ್ಷಾಮೃತ ಡೆಪೊ, ಪೋಷ್ಟ ನಿಪ್ಪಾಣಿ, ಜಿಲ್ಲಾ (ಬೆಳಗಾಂವ)

ಮಂಗಳೂರು-ಮಿಜಾರಕರ ಬ್ರದರ್ಸ್, ಶೆಣೈ ಬ್ರದರ್ಸ್, ವ ಗಜಾನನ ಮೇಡಿಕಲ ಹಾಲ, ಕಾರ ಸ್ಟ್ರೀಟ್, ಉಡ್ಪಿ—ಪೈ ಫಾರ್ಮಸಿ ಮತ್ತು ಕೆ. ಶೇಷಗಿರಿ ಪೈ, ತಂಕಪೇಟೆ.
ಕಾರ್ಕಳ—ವ್ಹಿ. ವ್ಹಿ. ಶೆಣೈ.
ಕುಂದಾಪುರ-ಕೆ. ಆರ್. ಭಡಜೀ.
ಕಾಸರಗೋಡು—ಕೆ. ರಾಮು ನಾಯ್ಕ ಮತ್ತು. ಭಕ್ತ ಬ್ರದರ್ಸ್.

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೊರ್ಸರ್‌ದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವದು.

ಪ್ರಹ್ಲಾದಚರಿತ್ರ

[ಸುಮಾರು ೧೫೦ ವರ್ಷಗಳ ಹಿಂದೆ ಮೂಲ್ಕೀನಿವಾಸಿ ವೆಂಕಣ್ಣ ಕವೀಶ್ವರರು ಬರೆದ ಇನ್ನೊಂದು ಸುಶ್ರಾವ್ಯಧ್ವನಿಯ ಕಾವ್ಯ. ವ್ಯಕ್ತಿತ್ವ ನಾಶದ ಭಯದಿಂದ ಕೆಲವೊಂದು ದೋಷಗಳನ್ನು ಮಾತ್ರ ಸರಿಪಡಿಸಿಯಿವೆ. M. Narasing Rao.]

॥ ರಾಗ ಬೇಗಡೆ—ಏಕತಾಳ ॥

ಶ್ರೀ ನರಹರಿ ಶರಣಾ—ಗತರಕ್ಷಕ-ದೀನಜನೋದ್ಧಾರೀ ।
ಭಾನುಶತಕೋಟಿಸ—ಮಾನತೇಜ ಬಹು- ।
ದಾನವವಂಶಾರಣ್ಯವ ದಹಿಪ ಕೃ- ।
ಶಾನು ಸುಜನಸುರಧೇನು ಸರ್ವೋತ್ತಮ ॥ ಪಲ್ಲ ॥

(೧)

ಶರಣ ಪ್ರಹ್ಲಾದನಂದೂ-ಶ್ರೀರಮಣನ-ಚರಣವೆ ಗತಿಯೆಂದೂ ।
ಮೆರೆಯದಚ್ಯುತಪದವಾ—ಮನದಿ ಮನು-ಕರಿಸಿ ಸ್ಮರಿಸುತಿರುವಾ॥
ಪರಿಯ ಹಿರಣ್ಯಕಶಿಪು ಕಾಣುತ ತನ- ।
ಗರಿಯಹ ನಾರಾಯಣನ ನಾಮಂಗಳ ।
ಸ್ಮರಿಸುವ ಶಿಶುವಿನ ಬಾಲಭಾಷಿತಗಳ ।
ಮರೆಯಿಸಬೇಕೆನುತಾ ॥
ಕರೆಸುತ ಅಣ್ಣಂಗಳಿಗೆಂದನು ಈ ।
ತರಳನ ದುರ್ಭಾಷಿತವ ಬಿಡಿಸಿ ಕುಲ- ।
ಬಿರಿದಿನ ವಿದ್ಯೆಯ ಕಲಿಸುವ ಬರಹವ ।
ಬರಿಸಿರೆನಲು ಭಕತನ ಕರೆದೊಯ್ದರು ॥ ಶ್ರೀ ನರಹರಿ.... ॥

(೨)

ಅಣ್ಣಗಳತಿ ಮುದದಿ—ಅಕ್ಷರಾಭ್ಯಾಸ-ವನ್ನು ಗೆಯ್ಯುತ ವಿಧದೀ ।
ಓಂ ನಮೋ ಹಿರಣ್ಯಾಯ—ಎನುತ ಬರೆ-ಯೆನ್ನಲು ಶುಭಕಾಯ॥
ಎನ್ನೊಡೆಯನು ಶ್ರೀ ನಾರಾಯಣ ಗತಿ- ।
ಯೆನ್ನುತ ಬರೆವುತ್ತಿರೆ ಕಾಣುತ ಕರ- ।
ವನ್ನು ಪಿಡಿಸಿ ಬರೆಸಿದರದು ವಿಷ್ಣುವ್ರ । ಸನ್ನವೆಂಬುದಾಯ್ತೂ॥
ಮನ್ನದಿ (!) ವಿಸ್ಮಯ ಬಡುತಲವರು ದಿನ- ।
ದಿನ್ನದಿ (!) ಪಾಠವ ಪೇಳಲು ಮುರಹರ ।
ಪನ್ನಗಶಯನ ಪರಾತ್ಪರವಸ್ತು ನೀ- ।
ನೆನ್ನ ಸಲಹು ಸಲಹೆನ್ನುತ ಬರೆದನು ॥ ಶ್ರೀ ನರಹರಿ.... ॥

(೩)

ದಣಿದರಣ್ಣಗಳೆಲ್ಲರೂ-ಪ್ರಹ್ಲಾದನ-ದನುಜಗೊಪ್ಪಿಸುತೆಂದರೂ ।
ತನಯನ ತಿದ್ದುವಡೇ-ನಮ್ಮಿಂದೀಗ-ಳನುಸರಿಸದು ಪೇಳ್ವಡೇ ॥
ಎನಲು ಕೋಪಾನಲ ಕಿಡಿಗಳನುಗುಳಿ ಗ- ।
ರ್ಜನೆಗೆಯ್ಯುತ ಸುತನಂ ದಿಟ್ಟಿಸಿ ಪೇ- ।
ಳ್ದನು ಕೇಳೆಲವೊ ನೀ ವಿಷ್ಣುವನೊಂದೇ ।
ಕ್ಷಣ ಮರೆಯದೆ ನೆನೆವೇ ॥
ನಿನಗೇನಹನವನೆಂದಿನೆ ಪೇಳ್ದನು ।
ಜನಕನು ನೀನೀ ಜನ್ಮಕೆ ನಿಜವಹ ।
ಜನಕನು ಶ್ರೀ ಲಕ್ಷ್ಮೀಪತಿ ಬಹಳದ ।
ಜನುಮದಿ ಜಾಗ್ರತೆಯಿಂ ಪೊರೆವುತ್ತಿಹ ॥ ಶ್ರೀ ನರಹರಿ.... ॥

(೪)

ಮೆರೆವ ತಾಯ್ತಂದೆಗಳೂ-ಶ್ರೀಹರಿಯೆಂದು-
ಒರೆಯುವನಿವನೀಗಳೂ ।
ಹರಿ ಇವನನು ಕಾಯ್ವಾ—ಆ ಪರಿಗಳ-ಪರಿಕಿಸುತೀಕ್ಷಿಸುವಾ ॥
ತರಳನು ಇವನೆಮಗಲ್ಲವೆನುತ ಮಹ- ।
ಗರಳವ ಕುಡಿಸಲ್ಕಮೃತವಾದುದು ಬಲಿ- ।
ತುರಿಯನು ಪೊಗಿಸಲು ಶೀತಳವಾದುದು ।
ಹರ್ಮ್ಯಾಗ್ರಗಳಿಂದಾ ॥
ಉರುಳಿಸಲಿಳೆ ಮೃದುತಲ್ಪವಾದುದು ಪದ- ।
ಕರಗಳ ಕಟ್ಟಿ ಗಾಢೋದಕದಲಿ ಕಲ್- ।
ವೆರಸುತ ಮುಳುಗಿಸಲಿದ್ದು ಬಂದನು ಜಗ- ।
ದೆರೆಯ ಮುರಹರ ನವೋ ಜಯವೆಂದನು ॥
॥ ಶ್ರೀ ನರಹರಿ.... ॥

(೫)

ಎಣಿಸಲಪರಿಮಿತದಾ—ಹಿಂಸೆಗಳನ್ನು- ತನಯಗೆ ಪೊಡಿಸಿದಾ ।
ಇನಿತಲೆಗಳು ಸೋಂಕದೇ-ಪ್ರಹ್ಲಾದಾರ್ಭ-ಕನು ಸುಖವಿರೆ
ಕೊಂಕದೇ ॥
ಮನದೊಳಗದ್ಭುತ ಪಡುತೆಂದನು ನೀ ।
ನೆನಹುತ್ತಿಹ ನಿನ್ನೊಡೆಯನದೆಲ್ಲಿಹ- ।
ನೆನಲು ಕೇಳೆನ್ನಯ ಸ್ವಾಮಿಯು ಸಚ್ಚಿ ।
ತ್ತನು ಜೀವರುಗಳಿಗೇ ॥
ಅಣುರೇಣೂತೃಣಕಾಷ್ಟದಿ ಪರಿಪೂ- ।
ರ್ಣನು ಪರಬೊಮ್ಮ ಪರಾತ್ಪರವಸ್ತುವು ।
ಮನದಿ ಮರೆಯಲೆಂತೆನ್ನಯ ನಾರಾ- ।
ಯಣನ ಪದಂಗಳನೆನಲಿಂತೆಂದನು ॥ ಶ್ರೀ ನರಹರಿ.... ॥

(೬)

ನಿಲ್ಲೆಲೊ ಎಲೊ ಖೂಳಾ-ನಿನ್ನೊಡೆಯನ-ದೆಲ್ಲಿ ತೋರುತ
ಪೇಳಾ ।
ಅಲ್ಲದಿರ್ದಡೆ ನಿನ್ನಾ—ಕೈಯಾರೆ-ಕೊಲ್ಲದಿರನು ಮುನ್ನಾ ॥
ಸೊಲ್ಲಿಸೆನಲು ತವಕಿಸದಿರು ಕೇಳ್ ನಿ- ।
ನ್ನಲ್ಲಿ ಎನ್ನಲ್ಲಿಳೆಯಲ್ಲಿ ಹೊರಗೊಳಗ- ।
ದೆಲ್ಲೆಲ್ಲಿಯು ಹರಿಯಲ್ಲದನ್ಯತ್ರವಿ ।ನ್ನಿಲ್ಲವು ಶ್ರುತಿಮತವೂ ॥
ಅಲ್ಲಿಲ್ಲೆಂಬುದಿನ್ನೊಡೆಯನು ಕರ- ।
ದಲ್ಲಿಗೆ ಬಪ ಕರುಣಾಂಭೋನಿಧಿ ಬಹು- ।
ಸುಲ್ಲಭ(!) ಸುಜನವರರ್ಗೆ ದುಷ್ಪರಿಗೆದೆ: ।
ಭಲ್ಲೆಯನಾಗಿಹ ಭಾಗೀರಥಿಪಿತ ॥ ಶ್ರೀ ನರಹರಿ.... ॥

(೭)

ಹೋರಾಡದೆ ಈಗ—ಈ ಸ್ತಂಭದೆ—ತೋರಾದರೆ ಬೇಗಾ ।
ತೋರದಿರಲು ಕಡಿದೂ—ನಿನ್ನನು ಕೈ—ಯಾರೆ ಚೆಲ್ಲುವೆ ಬಡಿದೂ ॥
ತೋರೆನುತಲೆ ಖಳ ಖಡ್ಗನ ಕಂಠ- ।
ಕ್ಕೇರಿಸಿ ಚಂಡಿಕೆವಿಡಿದು ಜಡಿವುತಿರೆ ।
ಬಾರೋ ನರಹರಿ ಭಕ್ತೋದ್ಧಾರಕ । ಬಾರೋ ಬಾರೆಂದೂ॥
ಚೀರಿ ಪ್ರಹ್ಲಾದನು ಕಳವಳಿಸುತ ಬಾ- ।
ಯ್ಯಾರಿ ಕರೆಯಲಾಕ್ಷಣದಲಿ ಸ್ತಂಭದಿ ।
ತೋರಿ ಪುಟ್ಟಿತು ಹೂಂಕೃತಿ ಕಟಕಟಕಠೇಂ- ।
ಕಾರ ಬ್ರಹ್ಮಾಂಡವೊಡೆದುದ್ದೆಂಬಂದದಿ ॥ ಶ್ರೀ ನರಹರಿ....॥

(೮)

ಘುಡುಘುಡುಘುಡುರೆನ್ನುತಾ—ಆ ಸ್ತಂಭದಿ-ನುಡಿದುದು
ರವ ಮಿಗುತಾ ।
ಖಡ ಖಟ್ ಖಟಿಲು ಖಟಿಲು-ಛಟ್ ಛಟಿಲೆಂದು-ನಡುವೆ
ಸೀಳಿದುದಾಗಲೂ ॥
ಛಟ್ ಛಟ್ ಛಟ್ ಛಟ್ ಛಟಾಲ್ ಛಟಾಲೆಂ ।
ದೊಡೆದು ಮೂಡಿದ ನರಸಿಂಹ ಕೋಪಾನಲ- ।
ಕಿಡಿಗಳ ಸೂಸುತ ಹ್ರೂಂ ಹ್ರೂಂ ಹ್ರೂಂ ಎಂ ।
ದಡಿಗಡಿಘೂಂಕರಿಸಿ ॥
ಬಿಡದುಚ್ಚಳಿಸಲ್ ಧಡ ಧಡ್ ಧಡರೆಂದು ।
ನಡುಗಿದುವಾ ಮಂದಿರಹರ್ಮ್ಯಂಗಳು ।
ಸಡಲುತಲಿರೆ ಪ್ರಹ್ಲಾದನ ಮುಂದಲೆ ।
ಬಿಡುತಲಸುರನೇನೆಂದೀಕ್ಷಿಸಿದನು ॥ ಶ್ರೀ ನರಹರಿ.... ॥

(೯)

ತರಣಿಕೋಟಿಪ್ರಕಾಶದಾ—ಮಹಾದ್ವಾರ-ಭೈರದಿಂದ
ತೆರೆದಂದದಾ ।
ಮೆರೆವ ತೇಜೋರಾಶೀ-ವಿರಾಜಿಸು-ತಿರೆ ಸುಮನೋದ್ಭಾಸೀ ॥
ಸ್ಫುರಿಸುವ ಮಣಿಮುಕುಟದ ಮಸ್ತಕ ಬಾ- ।
ಯ್ದೆರೆದ ವೃಗೇಂದ್ರವದನದ ಭಯಂಕರ- ।
ದುರುಬೆಯ ತೀಕ್ಷ್ಣರದನಪಂಕ್ತಿಯ ಕಿಡಿ ।
ಗೆರೆವ ದ್ವಿನಯನಗಳಾ ॥
ಅರಳಿದ ನಾಸಾಪುಟಧೂಂಕೃತಿಗಳ ।
ಮೆರೆವ ಮಕರಕುಂಡಲಕರ್ಣಂಗಳ ।
ಉರುತರ ರೋಷಾವೇಶದಿ ರಾಜಿಪ ।
ಪುರುಷಾವಯವ ಬಂಧುರ ನರಸಿಂಹನು ॥ ಶ್ರೀ ನರಹರಿ.... ॥

(೧೦)

ಹಿರಣ್ಯಕಶಿಪು ಕಂಡೂ-ಗರ್ಜಿಪ ಹೊಸ-ಪರಿಯ ಮೃಗವಿ
ದೆಂದೂ ।
ಧುರಕಳುಕದಲೊದಗೀ-ಸೆಣಸಿ ಕಾದು-ತ್ತಿರಲು ಕಾಣುತ
ಕಡುಗೀ ॥
ಅರೆಸಂಚೆಯೊಳಾರ್ಭಟಿಸಿ ರಕ್ಕಸನನು ।
ಭರದಿಂ ಪಿಡಿದೆತ್ತುತ ಹೊಸ್ತಿಲಲಿ ಕು- ।
ಳ್ಳಿರುತತಿ ರೋಷಾವೇಶದಿ ತೊಡೆಗಳೊ ।
ಳಿರಿಸುತಲೊಡನೀಳಾ ॥
ಎರಡು ಕರಗಳಿಂದೊತ್ತಿಪಿಡಿದು ಮು- ।
ತ್ತೆರಡು ಕರಗಳಿಂದುದರವನುಗುರ್ಗಳಿ- ।
ನಿರಿದು ಬಗೆದು ಸರ್ರನೆ ಸೀಳ್ದು ಭಯಂ- ।
ಕರ ರೂಪದ ನರಸಿಂಹನೆನಿಸಿರುವ ॥ ಶ್ರೀ ನರಹರಿ.... ॥

(೧೧)

ಎಳೆಗರುಳ್ಗಳ ತೆಗೆದೂ-ಮಾಲೆಯನು ಕೊ-ರಳಿಗೆ ಇಕ್ಕಿದ
ನೊಗೆದೂ ।
ತಿಳಿರಕುತವ ಸುರಿದಾ-ಕೈಬೊಗಸೆಗ-ಳೊಳಗೆ ತೆಗೆದು ಮೊಗೆದಾ॥
ಖಳನನು ಮರ್ದಿಸಿ ಕರಾಳನೆನಿಸಲ್।
ಜ್ವಲಿಸುವ ಕೋಪದ ಕಿಡಿಯುರುಬೆಗೆ ಭೂ- ।
ವಳಯವು ಬೆಂಡಾಗುತ ಬೇಯುತ್ತಿರೆ ।
ಜಲನಿಧಿಗಳು ಕುದಿಯೇ ॥
ನಳಿನಭವಾಂಡಘಟವು ಕಾದುದು ಶ್ರೀ- ।
ನಿಳಯನ ರೌದ್ರವು ಪೆರ್ಚಿತಿದುವೆ ಜಗ- ।
ದಳಿವಿನ ದಿನವೋ ಎನುತಜಮುಖ್ಯರು
ಫಳಿಲನ್ನೆ ಪೊರಮಡುತಲೆ ಸ್ತುತಿಗೆಯ್ದರು ॥ ಶ್ರೀ ನರಹರಿ....॥

(೧೨)

ಜಯಜಯ ಜಗದೀಶಾ-ರಕ್ಷಿಸು ಜಯ-ಜಯ ನರ
ಮೃಗವೇಷಾ ।
ಜಯತು ಜಗದ್ಧರಿತಾ-ಸುಲಲಿತಾ-ಜಯಜಯ ಸಚ್ಚರಿತಾ ॥
ಜಯಜಯ ಮಂಗಲದಾಯಕ ಜಯಜಯ ।
ಭಯಭಂಜನ ಭಕ್ತೋದ್ಧಾರಕ ಜಯ ।
ಜಯ ಕರುಣಾಕರ ಕಮನೀಯಾಂಗನೆ ।
ಜಯ ಜನ್ಮವಿದೂರಾ ॥
ಲಯಗೆಯ್ದಿಯೊ ದೇವನೆ ರಾಕ್ಷಸನನು ।
ಜಯವಾಯಿತು ಜನಗಳ ಭಯ ಪಿಂಗಿತು ।
ದಯೆಯಿಂದೆಮ್ಮನು ರಕ್ಷಿಸು ಭಕ್ತ- ।
ಪ್ರಿಯ ಭವಹರ ಜಯಜಯ ಎನುತಿರ್ದರು ॥
॥ ಶ್ರೀ ನರಹರಿ.... ॥

(೧೩)

ಸುರರಿಂತು ನುತಿಗೆಯ್ಯುತಾ—ಹೊಸ ಮಲ್ಲಿಗೆ-ಯೆರಳ
ಮಳಿಗರೆವುತಾ ।
ಶರನಿಧಿಸುತೆಯ ತಂದೂ- ನೃಸಿಂಹನಿ-ದಿರೊಳು
ನಿಲ್ಲಿಸುತಲಂದೂ ॥
ಶರಣ ಪ್ರಹ್ಲಾದನು ಸಹಿತ ವಂದಿಸಿ ಶ್ರೀ- ।
ವರನೆ ಕರುಣದಿಂದೆಮ್ಮನು ಸಲಹುತ ।
ದುರುಳನ ಸಂಹರಿಸಿದೆ ಲೇಸಾಯ್ತುದು ।
ಮೆರೆವ ಕೋಪಜ್ವಾಲೇ ॥
ಉರಿಸುತ್ತಿರ್ಪುದು ಮೂಲೋಕಗಳನು ।
ಭರವ ನಿಲಿಸಿ ಶಾಂತತ್ವದಿ ನಮ್ಮ- ।
ನ್ನುರೆ ಪೊರೆ ಎನ್ನುತಲೆರಗಲು ಲಕ್ಷ್ಮಿಯ ।
ಕರೆದು ತೊಡೆಯ ಮೇಲಿರಿಕಿಸಿಕೊಂಡನು ॥ ಶ್ರೀ ನರಹರಿ.... ॥

(೧೪)

ಮಿಗುವ ಕೋಪವ ನಿಲ್ಲಿಸೀ-ಹರಬ್ರಹ್ಮಾ-ದಿಗಳೆಲ್ಲರನು
ಮನ್ನಿಸೀ ।
ಮಗುವೆ ನೀ ಬಾರೆನುತಾ—ಪ್ರಹ್ಲಾದನ-ಬಿಗಿದಪ್ಪಿದನು ನಗುತಾ ॥
ಜಗದೊಳಗೆನ್ನಯ ಭಕ್ತರ ಬಾಧಿಪ- ।
ರಿಗೆ ಭಯವನು ತೋರುತ ಭಂಜಿಸುವೆನು ।
ಅಗಲಲರಿಯೆನೆನ್ನಯ ಮುರೆ ಹೊಗುವಾ ।
ಸುಗುಣರ ಲೋಕದಲೀ ॥
ನಿಗಮಸಿದ್ಧ ಸಹಜವು ಛೆದರದಿರೆಂ- ।
ದೊಗುವಿಗೆ ಹರುಷದಿನೆಲ್ಲರನಭಯದಿ ।
ಪೊಗಿಸಿ ಭಕ್ತನನು ಹರಸಿ ವಿವಿಧದಲಿ ।
ಜಗಧರನಂತರ್ಧಾನವಗೊಂಡನು ॥ ಶ್ರೀ ನರಹರಿ.... ॥

(೧೫)

ಮಂಗಳ ಮಾಧವನೇ-ಜಯತು ಜಯ-ಮಂಗಳ ಭೂಧವನೇ ।
ಮಂಗಳ ದಿವ್ಯ ಸಿಂಹಾ-ಜಯತು ಶುಭ-ಮಂಗಳ
ಜಯ ರಂಹ್ಯಾ ॥
ಮಂಗಳ ಶ್ರೀಕರುಣಾಕರ ಶುಭಕರ ।
ಮಂಗಳ ಸುಖಸಂಪದವಾಂಛಿತಪ್ರದ ।
ಮಂಗಳ ಕನಕಕಶಿಪುಮರ್ದನನು ।
ತ್ತುಂಗೆ ಜನಾರ್ದನನೇ ॥
ಮಂಗಳ ಕವಿಜನಪೋಷ ಸರ್ವೇಶನೆ।
ಮಂಗಳ ಮೂಲ್ಕೀಪುರವರವಾಸನೆ ।
ಮಂಗಳ ಶ್ರೀ ನರಸಿಂಹ ಸಲಹು ಜಯ ।
ಮಂಗಳ ಶ್ರೀ ಗುರು ವೇಂಕಟನಾಯಕ ॥ ಶ್ರೀ ನರಹರಿ.... ॥

[This superb story probably typifies that stage of human evolution at which, permanent sexual unions having already been formed, parental authority was attempted to be enforced. This initial attempt was bad, this placing of the father before God, whose existence was admitted, but, strangely enough, as a sort of glorified human being capable of being challenged. The story also inculcates the doctrine of an all-pervading Divine Being and teaches the wholesome truth that God leaves man to work out his own salvation, until the situation becomes impossible—when He certainly interferes. M. N.]

Have you heard of THE GOLDEN SCHEME
OF
The Guardian of India Insurance Co., Ltd., Madras?

A scheme best suited for the middle and poor class who cannot insure for a large sum.

Another unique scheme is the **SPLENDID FAMILY PROTECTION POLICY** under which the interests of your wife and children are best safeguarded—by an immediate cash payment of ¼ of the insured amount if the assured dies and an annual pension of $\frac{1}{10}$ the insured amount to the wife till the expiry of the period of the policy and **then, the payment of the full insured amount** over and above the preceeding two benefits! If the assured survives the period of the policy, he gets the insured amount or a free paid-up policy for a large amount.

IS NOT THIS SCHEME AN IDEAL ONE FOR EVERY FAMILY MAN?

Full details can be had, without any obligation, from:—

V. D. Heranjal,
District Organizer,
MANGALORE.

OR FROM

M. T. Kordale & Co.,
Hampankatta,
MANGALORE.

ಹೊಸ ಪುಸ್ತಕ.

೧. **ನನ್ನ ಗೃಹಿಣಿ**:-(ಸೋಸಲ) ಪುಟ ೧೫೦; ಬೆಲೆ ೧೦ ಆಣೆ.
೨. **ಚೋದ್ಯಪುರದ ಚೋಜಿಗರಾಯ**:—(ಪೊಲಿಟಿಕಲ್) ಪುಟ ೩೩೨; ಬೆಲೆ ೨ ರೂ.
೩. **ಮೋಜಿನ ಜೀವನ**:—(ಡಿಟೆಕ್ಟಿವ್) ಪುಟ ೨೨೪; ಬೆಲೆ ೧—೪—೦ ರೂ.

ಇವುಗಳ ಹೊರತು ನಮ್ಮಲ್ಲಿ ಐತಿಹಾಸಿಕ, ಸಾಮಾಜಿಕ, ಪೌರಾಣಿಕ, ಪತ್ತೆದಾರಿ ನಾವೆಲ್ಲುಗಳೂ, ಚರಿತ್ರೆ, ನಾಟಕ, ಪಾರಮಾರ್ಥಿಕ ಪುಸ್ತಕಗಳೂ ದೊರೆಯುತ್ತಿವೆ.

ಶ್ರೀ ಶೇಷಾಚಲ ಪ್ರೆಸ್ಸು,
ಪೋಸ್ಟು ಆಸಂದವನ, (ಜಿ. ಧಾರವಾಡ.)

ಸೂಚನೆ:- ಆರ್ಡರು ಕಳುಹಿಸುವವರು 'ಕಂಠೀರವ' ಪತ್ರಿಕೆಯ ಹೆಸರು ಬರೆಯಬೇಕು.

ತೊನ್ನಿಗೆ ಅದ್ಭುತ ಔಷಧಿ

(ರಿಜಿಸ್ಟರ್ಡ್)

ಗುಣ ದೊರಕದಿದ್ದರೆ ರೂ. 1000 ಬಹುಮಾನ!

18 ಪ್ರಕಾರಗಳ ಎಲ್ಲಾ **ಕುಷ್ಟ ರೋಗಗಳೂ, ಬಿಳಿ ತೊನ್ನು, ಚರ್ಮವ್ಯಾಧಿಗಳೂ** ಮತ್ತು **ಮೇಹ ಸಂಬಂಧ ರೋಗಗಳೂ,** ಬುಡ ಸಮೇತ ಕಿತ್ತುಹೋಗಿ, ಖಂಡಿತವಾಗಿಯೂ ಗುಣಹೊಂದುವುವು. 25 ವರ್ಷಗಳ ಜಗತ್ಪ್ರಸಿದ್ಧಿಯಿದೆ. ಇಂಜೆಕ್ಷನ್ ಮತ್ತು ಇತರ ಯಾವ ರೀತಿಯಲ್ಲಿಯೂ ಗುಣಹೊಂದದ ರೋಗಿಗಳೂ ಇದರಿಂದ ಗುಣಪಡೆದಿರುವರು. ಗುಣಕ್ಕಾಗಿ ಭರವಸವಿದೆ. ಕುಷ್ಟ ರೋಗ ಮತ್ತು ಚರ್ಮವ್ಯಾಧಿಗಳಿಗಾಗಿ ಡಾಕ್ಟರುಗಳಿಂದ ಶಿಫಾರಸು ಮಾಡಲ್ಪಟ್ಟಿದೆ.

ಸೇಲಮಿನ ಡಾ। ವಿ. ಎನ್. ಸಾಶನ್‌ರವರು ಬರೆಯುತ್ತಾರೆ:— ನಾನು ನಿಮ್ಮ **ಅತ್ಯಾಶ್ಚರ್ಯ ಕುಷ್ಟರೋಗ ನಿರ್ಮೂಲಿನಿ** ಯನ್ನು ಇಬ್ಬರು ಕುಷ್ಟರೋಗಿಗಳಿಗೆ ಉಪಯೋಗಿಸಿದ್ದು, ಪರಿಣಾಮವು ಉತ್ಕೃಷ್ಟವಾಗಿತ್ತು. **ಲಕ್ಷ್ಮಿ ಮತ್ತು ಕಂಪೆನಿ**ಯವರ ಸಿದ್ಧೌಷಧ ಇಂದ ಸಂಪೂರ್ಣ ಗುಣ ಹೊಂದಿದ ನಂತರ, ರೋಗಿಗಳ ರಕ್ತವನ್ನು ಪರೀಕ್ಷಿಸಿದಲ್ಲಿ, ಅದು ಕುಷ್ಟ ರೋಗದ ಮೊಳಿಕೆಗಳಿಂದ ವಿರಹಿತವಾಗಿತ್ತು. ಈ ಔಷಧವು ಅತ್ಯುತ್ತಮವೆಂದೂ, ಟೀಕೆಯೇನೂ ಅಗತ್ಯವಾಗಿಲ್ಲವೆಂದೂ ನಾನು ಕಂಡಿರುತ್ತೇನೆ.

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಬೇಕು.
ಯಾವತ್ತೂ ಮಾಹಿತಿಗಾಗಿ ಮತ್ತು ಕೆಟಲಾಗಿಗೆ ಬರೆಯುವರೆ ವಿಳಾಸ:—

ಮೆಸರ್ಸ್ ಲಕ್ಷ್ಮಿ ಅಂಡ್ ಕೋ. (ರಿಜಿಸ್ಟರ್ಡ್),
ತೊನ್ನು ಚಿಕಿತ್ಸಾ ಪ್ರವೀಣರು,
ವಾಲ್ವೇರ್, ಆರ್. ಎಸ್. ಪೋಸ್ಟ್.

ಬಿಳೇ ತೊನ್ನು—

ಮತ್ತೂ ಕುಷ್ಠ ರೋಗ.

ಈ ಔಷಧದ ಕೆಲವು ದಿನಗಳ ಸೇವನೆಯಿಂದಲೇ ಬಿಳೇ ತೊನ್ನೂ ಕುಷ್ಠರೋಗವೂ ಸಂಪೂರ್ಣವಾಗಿ ಗುಣವಾಗುತ್ತದೆ. ಸೂರಾರು ಮುಂದಿ ಹಕೀಮರೂ, ಡಾಕ್ಟರುಗಳೂ, ಕವಿರಾಜರೂ, ಜಾಹೀರಾತುಗಳನ್ನು ಪ್ರಕಟಿಸಿದವರೂ ಈ ಭಯಂಕರ ವ್ಯಾಧಿಯನ್ನು ಗುಣಮಾಡಲಾರದೆ ಹೋದರೂ ಈ ಔಷಧಪ್ರಯೋಗದಿಂದ ಆ ರೋಗವನ್ನು ನಿರ್ಮೂಲಿಸಿ ಬಿಡಿ. ಇದು ವ್ಯರ್ಥವೆಂದು ರುಜುವಾತಾದಲ್ಲಿ ನಮ್ಮ ಬಹುಮಾನ ರೂ. 500.

Vaidiya Raj Akhila Kishori Ram,
No. 223, P. O., Katri Sarai. (GAYA).

8, 11-2. ಪತ್ರ ವ್ಯವಹಾರ ಇಂಗ್ಲೀಷಿನಲ್ಲೇ.

ಆರ್. ಮಾರ್ಟಿನ್ಸ್‌ರ
ಗ್ಲಿಟೋಡಯಿನ್

ಗಂಡಸರಿಗೂ ಮತ್ತು ಹೆಂಗಸರಿಗೂ ಎಲ್ಲಾ ತರದ ಮೇಹ ರೋಗಗಳಿಗೆ ಎರಡು ಸೀಸೆಗಳ ಔಷಧಿಯನ್ನು ಉಪಯೋಗಿಸಿದಲ್ಲಿ ಸಂಪೂರ್ಣವಾಗಿ ಗುಣವಾಗುತ್ತೆ. ಎಷ್ಟು ದಿವಸಗಳ ಹಳೇ ರೋಗವಾಗಿದ್ದರೂ ಸರಿ ಅಥವಾ ಹೊಸತಾಗಿದ್ದರೂ ಸರಿ, ಬಿಳುಪು ಹೋಗುವುದು, ಉರಿಯುವುದು ಮುಂತಾದ್ದೆಲ್ಲಾ ನಿಂತುಹೋಗುವುದಲ್ಲದೆ, ಒಂದಾವರ್ತಿ ಸೇವಿಸಿದ ಮಾತ್ರಕ್ಕೇ ಉರಿ ಮೂತ್ರವನ್ನು ನಿಲ್ಲಿಸಿ, ಮೂತ್ರವು ಬಿಳುಪಾಗಿ ನಿರ್ಮಲವಾಗುವುದಲ್ಲದೆ ರೋಗದ ಪಟ್ಟನ್ನೇ ಅಡಗಿಸಿಬಿಡುತ್ತದೆ. ಈ ಔಷಧಿಯು ಕುಡಿಯುವುದಕ್ಕೆ ರುಚಿಯಾಗಿಯೂ, ನಿರ್ಮಲವಾಗಿಯೂ ಇರುತ್ತೆ. ಸಿವಿಲ್ ಮತ್ತು ಮಿಲಿಟರಿ ಇಲಾಖೆಗೆ ಸೇರಿದ ಎಲ್ಲರಿಂದಲೂ ಹೊಗಳಲ್ಪಟ್ಟಿದೆ. ವೈದ್ಯರೂ ಪ್ರಶಂಸಿಸಿದ್ದಾರೆ. ಹೆಚ್ಚು ಮಾರಾಟವಾಗುತ್ತಿದೆ.

ಬೆಲೆ: ಸೀಸೆ ಒಂದಕ್ಕೆ ರೂ. 2—0—0.

R. D. KATELY & Co.,
319 Frere Road,
Opposite Fort Market, near Fountain,
BOMBAY.

ಆರ್. ಡಿ. ಕಟ್ಲೀ ಅಂಡ್ ಕೋ.,
319 ಫ್ರಿಯರ್ ರೋಡ್,
ಫೋರ್ಟ್ ಮಾರ್ಕೆಟಿನ ಎದುರು,
ಫೋರ್ಟ್, ಬೊಂಬಾಯಿ.

The United India Life Assurance Co., Ltd.

Head Office: **MADRAS.** | ESTABLISHED: **1906.** | Branch for Karnatak: **UDIPI.**

POLICIES IN FORCE EXCEED 3,00,00,000.

(1) The oldest and the premier Life Office of Southern India.
(2) The only Indian Life Office allowing interest on bonus.
(3) One of the very few companies recognised by the Govt. of India as most stable.

It will pay you to represent this oldest Life Office.
A policy in United India will give you the maximum benefits.

For particulars apply to:—

M. K. SRINIVASAN, B. A., B. L., *Managing Director.* OR PANGALKAR BROTHERS, *DISTRICT & GENERAL AGENTS,* KODIALBAIL, MANGALORE.

THE TRAVANCORE NATIONAL BANK, LIMITED.

Head Office: ALLEPPEY.
London Agents: MIDLAND BANK LTD.

Bombay Office:—25-27, Church Gate Street, Fort, BOMBAY. MADRAS OFFICES: (1) 164, Broadway, (2) 183, Mount Road, (3) Luz-Corner, Mylapore & (4) Vepery (No. 1, Purasawalkam High Road).

BRANCHES EVERYWHERE IN SOUTH INDIA.

We have pleasure to announce that this Bank is now in a position to handle business on the following centres also:—

AGRA	CALCUTTA	HYDERABAD (Deccan)	LUCKNOW
AHMEDABAD	CAWNPORE	HYDERABAD (Sind)	RAICHUR
AMINABAD (Lucknow)	DACCA	JAMNAGAR	RANGOON
AMRITSAR	DELHI	KARACHI	SAMBHAR LAKE
AURANGABAD	GORAKHPORE	LAHORE	SECUNDERABAD

SURAT and other centres in Northern India.

ENQUIRIES SOLICITED.

Alleppey, 10th January 1936. | **K. C. Eapen, B. A.,** Managing Director.

ಕೋಹಿನೂರಿನ ಸುಪ್ರಸಿದ್ಧ ತಯಾರಿಕೆಗಳು.

೧. ಕೋಲನ್ ವಾಟರ್ (ರಿ. ನಂ. ೧೪೬೨) **ಜ್ವರ, ನೆಗಡಿ, ಮತ್ತು ಎಲ್ಲಾ ವಿಧವಾದ ಶಿರಸ್ಸಿನ ಬಾಧೆಗಳಿಗೆ ದಿವ್ಯಾಮೃತ.**

೨. **ಮಸ್ಕ್ ಲವೆಂಡರ್**—ಕರವಸ್ತ್ರದಲ್ಲಿ ಉಪಯೋಗಮಾಡತಕ್ಕ ಸುವಾಸನೆಯಾದ ಸೆಂಟು.

೩. **ಅನಷ್ ಸ್ನೋ**—ಸೌಂದರ್ಯವನ್ನು ಹೆಚ್ಚಿಸಿ ಚರ್ಮವನ್ನು ಮೃದುವಾಗಿಡುತ್ತೆ.

೪. **ಬ್ರಿಲಿಯಂಟಾಯಿನ್**—ಕೂದಲಿನ ಸೌಂದರ್ಯಕ್ಕೋಸ್ಕರ ಆರ್ಹವಾದ ಮತ್ತು ಸುವಾಸನೆಯುಳ್ಳ ಪರಿಮಳ.

೫. **ಬ್ರಾಹ್ಮೀ ತೈಲ**—ಮೆದುಳು, ಕೂದಲು, ಮತ್ತು ನೇತ್ರಗಳ ಸಂರಕ್ಷಣ ಹಾಗೂ ಹುಚ್ಚು ತನಕ್ಕೂ ಅದ್ಭುತ ಗುಣಕಾರಿ. ಕೂದಲು ಉದುರಿ ಹೋಗುವವರ ಸಂಬಂಧದಲ್ಲಿ ಅದನ್ನು ನಿಲ್ಲಿಸಿ, ಹೆಚ್ಚಾಗಿ ಬೆಳೆಸುತ್ತದೆ.

೬. **ದ್ರಾಕ್ಷಾಸವ**—ಮಂದಾಗ್ನಿ, ಅಜೀರ್ಣ, ಶ್ವಾಸ, ದಮ, ಇತ್ಯಾದಿಗಳಿಗೆ ಅತ್ಯುತ್ತಮ.- ದೇಹಬಾಧೆಯನ್ನು ಕ್ರಮವಾಗಿ ನಡೆಯಿಸಿ ಆರೋಗ್ಯವನ್ನೀಯುತ್ತದೆ. ರಕ್ತ ವರ್ಧಿಸುವ ಮತ್ತು ಶಕ್ತಿ ಕೊಡುವ ಉತ್ತಮ ಔಷಧ.

೭. **ಆರಾಮೇತಿಹಾಲ್**—ಎಲ್ಲಾ ವಿಧವಾದ ಜ್ವರವನ್ನು ಹೋಗಲಾಡಿಸಿ, ಜ್ವರದಗಡ್ಡೆ, ಹೊಟ್ಟೆ ನೋವು ಮುಂತಾದುವೆಗಳನ್ನು ಗುಣಪಡಿಸುವ, ಸರ್ವೋತ್ತಮ ಔಷಧ.

೮. **ವೆಜಿಟೇಬಲ್ ಹೈನ್-ಹಂಟರ್**—ವಾಂತಿ, ವಿರೇಚನ, ಅಜೀರ್ಣ, ಕಾಲೆರಾ, ಮುಂತಾದ ರೋಗಗಳಿಗೋಸ್ಕರ ಕುಡಿಯತಕ್ಕ ಔಷಧ.

೯. **ರತ್ನಾಂಜನ ಪೇನ್ ಬಾಮ್**—ನೆಗಡಿ, ಶಿರಸ್ಸಿನ ಬಾಧೆಗಳು, ಮುಂತಾದ ಶಾರೀರಕ ಬಾಧೆಗಳ ಮೇಲೆ.

೧೦. **ಕ್ರೀಸೋರಿಂಗಾ**—ಕಪ್ಪು ಅಥವಾ ಕೆಂಪು ಹುಳಕಡ್ಡಿಯನ್ನು ನಿರ್ಮೂಲಮಾಡುತ್ತೆ.

೧೧. **ಹಿಟೊ ಡಿ ರೋಜ್ ಕೋಕೊನಟ್ ಹೇರ್ ಆಯಿಲ್**— ಕೇಶಗಳಿಗೋಸ್ಕರ ಗುಲಾಬಿಯ ಮಧುರವಾದ ವಾಸನೆ ಕೊಡುವ ಶುದ್ಧವಾದ ಎಣ್ಣೆ.

ಕೋಹಿನೂರ್ ವರ್ಕ್ಸ್,
60 ಅಬ್ದುಲ್‌ರಹಿಮಾನ್ ಸ್ಟ್ರೀಟ್,
ಬೊಂಬಾಯಿ, 3.

KOHINOOR WORKS,
60 Abdul Rehiman Street,
BOMBAY, No. 3.

THE PIE-MONEY BANK LTD., MAIDAN ROAD, MANGALORE.

Undertakes all kinds of Banking Business. Current account at 2½% per annum.
Savings Bank Deposits at 4½% per annum.

FIXED DEPOSITS.

For 2 years	7%	For 6 months	5 %
1 year	6%	3 months	4½%

Auction Chit Funds ranging from Rs. 100—5000 run regularly on systematic lines.
Unique Banking facilities to Businessmen and interested Public.

Apply for particulars:—

K. R. GURU, *Managing Director.*

ವಾಚನಾಲಯಗಳು

ಧಾರವಾಡದಲ್ಲಿ ಶ್ರೀ. ಹನುಮಂತರಾವ್ ಮಾಂಜರೇಕರರ ವ್ಯಾಖ್ಯಾನ.

(ನಮ್ಮ ಸ್ವಂತ ವಾರ್ತಾಹಾರಕರಿಂದ)

ಇಲ್ಲಿಯ ಶಾಂತೇಶ ವಾಚನಾಲಯದ ವಾರ್ಷಿಕ ವರ್ಧಂತಿ ಉತ್ಸವವು ಜೂನ ತಾರೀಕು ೨೦ನೇಗೆ ಸದರ್ನ ಮರಾಠಾ ಬ್ಯಾಂಕಿನ ಭವ್ಯವಾದ ಅಂತಸ್ತಿನ ಮೇಲೆ ಬಹು ವಿಜೃಂಭಣೆಯಿಂದ ನೆರವೇರಿತು. ಆ ಕೂಟಕ್ಕೆ ಡಿಸ್ಟ್ರಿಕ್ಟ ಜಜ್ಜರಾದ **ಶ್ರೀಮಾನ್ ಜಿ. ಎಸ್. ರಾಜಾಧ್ಯಕ್ಷ, ಐ. ಸಿ. ಎಸ್.,** ಅವರ ಅಧ್ಯಕ್ಷತೆಯಲ್ಲಿ **ಕಾರವಾರದ ಶ್ರೀ. ಹನುಮಂತರಾವ್ ಮಾಂಜರೇಕರ, ಬಿ. ಎ.,** ಅವರು 'ವಾಚನಾಲಯ'ವೆಂಬ ವಿಷಯವನ್ನು ಕುರಿತು ಭಾಷಣ ಮಾಡಿದರು. ಪ್ರಸಿದ್ಧ ಕವಿಗಳಾದ ಶ್ರೀಮಾನ್ ದ. ರಾ. ಬೇಂದ್ರೆ, ಎಂ. ಎ., ಅವರು ಶ್ರೀ. ಮಾಂಜರೇಕರರ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟರು. ಅನಂತರ ಶ್ರೀ. ಮಾಂಜರೇಕರರು ನುಡಿದದ್ದೇನೆಂದರೆ—

'ಇಲ್ಲಿಯ ನನ್ನ ಮಿತ್ರರು ನಾನು ಕನ್ನಡಕ್ಕೆ ಸಲ್ಲಿಸುತ್ತಿದ್ದ ಕಿರಿದಾದ ಸೇವೆಯನ್ನು ಹಿರಿದಾಗಿ ಭಾವಿಸಿ, ನನ್ನಲ್ಲಿ ಅತಿಶಯವಾದ ಪ್ರೇಮ-ವಿಶ್ವಾಸಗಳನ್ನಿಟ್ಟು, ನಾನು ಈ ಹೊತ್ತು 'ವಾಚನಾಲಯ'ವೆಂಬ ವಿಷಯವನ್ನೆತ್ತಿ ಮಾತನಾಡಬೇಕೆಂದು ತಮ್ಮೊಳಗೇ ಗೊತ್ತುಮಾಡಿ, ನನಗೆ ಪೂರ್ವಸೂಚನೆಯನ್ನು ಸಹ ಕೊಡದೆ, ಆಹ್ವಾನಪತ್ರಿಕೆಗಳನ್ನು ಮುದ್ರಿಸಿ, ನಿಮ್ಮೆಲ್ಲರಿಗೂ ಅವುಗಳನ್ನು ಕಳಿಸಿ ಆದ ಮೇಲೆ ಅಂದರೆ ನಾಲ್ಕೈದು ತಾಸುಗಳ ಕೆಳಗೆ ಈ ಎಲ್ಲ ವಿಷಯವನ್ನು ನನಗೆ ತಿಳಿಸಿ, ನನಗೆ ನಿಮ್ಮೆಲ್ಲರ ಮುಂದೆ ನಿಲ್ಲಲು ವಿಧಿಸಿದ್ದಾರೆ. ವಿಷಯಸಿದ್ಧತೆಯನ್ನು ಮಾಡದೆ, ಅದರಲ್ಲಿಯೂ ಕೊಂಕಣಿ ಮಾತೃಭಾಷೆಯುಳ್ಳವನಾದ ನಾನು ಕನ್ನಡಿಗರ ನಡುಬೀಡಾದ ಧಾರವಾಡದ ವಿದ್ವತ್ಸಭೆಯ ಮುಂದೆ ನಿಲ್ಲುವುದು ಸಾಹಸದ ಮಾತೇ ಸರಿ. ಹೀಗಾಗಿ ಮಾತನಾಡಲು ನನಗೆ ಬಲು ಸಂಕೋಚವೆನಿಸುತ್ತಿದೆ. ಆದರೂ ಪ್ರೀತಿಯ ಮಿತ್ರರ ದಾಕ್ಷಿಣ್ಯಕ್ಕೂ ಅವರು ಜಾಹೀರವಾಡಿದ ಕಾರ್ಯಕ್ರಮದಲ್ಲಿ ಭಂಗ ತರಬಾರದೆಂದೂ ನಾಲ್ಕು ಮಾತುಗಳನ್ನಾಡಬೇಕಾಗಿ ಬಂದಿದೆ. ನನ್ನಲ್ಲಿದ್ದ ಲೋಪಗಳಿಗಾಗಿ ತಮ್ಮೆಲ್ಲರ ಕ್ಷಮಾಪಣೆಯನ್ನು ಬೇಡಿ ಮುಂದರಿಯುತ್ತೇನೆ.

ವಾಚನಾಲಯವೆಂಬ ಶಬ್ದವನ್ನು ಲೈಬ್ರರಿ ಎಂಬರ್ಥದಲ್ಲಿ ಉಪಯೋಗಿಸುವುದು ರೂಢಿಯಾಗಿದೆ. ವಾಚನಾಲಯವೆಂಬ ಶಬ್ದವನ್ನು ರೀಡಿಂಗ-ರೂಮು ಎಂಬರ್ಥದಲ್ಲಿಯೂ, ಗ್ರಂಥಸಂಗ್ರಹಾಲಯವೆಂಬ ಶಬ್ದವನ್ನು ಲೈಬ್ರರಿ ಎಂಬರ್ಥದಲ್ಲಿಯೂ ಉಪಯೋಗಿಸಬಹುದೆಂದು ನನ್ನ ಮತ. ಎರಡೂ ಕೂಡಿಯೇ ಸೂಚಿಸುವಂಥ ಕನ್ನಡ ಶಬ್ದವು ಇನ್ನೂ ಬಳಕೆಯಲ್ಲಿ ಬರಬೇಕಾಗಿದೆ. ಇರಲಿ.

ಗ್ರಂಥಸಂಗ್ರಹಾಲಯಗಳು ಜ್ಞಾನಪ್ರಸಾರದ ಮುಖ್ಯ ಸಾಧನಗಳು. ಗ್ರಂಥಸಂಗ್ರಹಾಲಯಗಳೇ ಇಂದಿನ ನಿಜವಾದ ವಿದ್ಯಾಪೀಠಗಳೆಂದು **ಕಾರ್ಲೈಲ** ಎಂಬ ಇಂಗ್ಲಿಷ ತತ್ವಜ್ಞಾನಿಯು ಹೇಳಿರುವನು. ಗ್ರಂಥಸಂಗ್ರಹಾಲಯದ ಕಲ್ಪನೆಯನ್ನು ನಾವು ಪಾಶ್ಚಾತ್ಯರಿಂದ ಎತ್ತಿದ್ದೇವೆಂದು ಅನ್ನಲಾಗದು. ವಾಚನಾಲಯಗಳ ಕಲ್ಪನೆ ಮಾತ್ರ ಪಾಶ್ಚಾತ್ಯ ಸಂಸ್ಕೃತಿಯ ಫಲ. ನಮ್ಮಲ್ಲಿ ಪ್ರಾಚೀನಕಾಲದಲ್ಲಿದ್ದ ದೊಡ್ಡ ದೊಡ್ಡ ಗ್ರಂಥಸಂಗ್ರಹಾಲಯಗಳು ಒಂದಿಲ್ಲೊಂದು ಕಾರಣದಿಂದ ನಷ್ಟವಾಗಿಹೋದುದರಿಂದ ನಮ್ಮ ಜ್ಞಾನಭಾಂಡಾರಕ್ಕೆ ಬಹು ದೊಡ್ಡ ಕೊರತೆಯಾಗಿದೆ. ಕಾಲಾಯ ತಸ್ಮೈ ನಮಃ.

ಬ್ರಿಟಿಶ ಮ್ಯೂಜಿಯಮ್ಮು ಗ್ರಂಥಸಂಗ್ರಹಾಲಯಕ್ಕೆ ಮಾದರಿಯೆಂದು ಹೇಳುವುದು ವಾಡಿಕೆಯಾಗಿದೆ. ಆದರೆ ಬ್ರಿಟಿಷ ಮ್ಯೂಜಿಯಮ್ಮಿಗೆ ಬ್ರಿಟಿಶ ಸರ್ಕಾರದ ಬೆಂಬಲವಿದೆಯೆಂದು ನಾವು ಮರೆಯಬಾರದು. ಆ ಮಾದರಿಯ ಮಧ್ಯವರ್ತಿ ಗ್ರಂಥಸಂಗ್ರಹಾಲಯವೂ ಇಂಡಿಯಾ ಸರ್ಕಾರದ ಸಹಾಯದಿಂದಲೇ ಸಾಧ್ಯವಾಗಬೇಕಲ್ಲದೆ ಜನತೆಯ ಪ್ರಯತ್ನಗಳಿಂದಲೇ ಸಾಧ್ಯವಾಗಲಾರದು.

ಇತ್ತಲಾಗಿ ನಮ್ಮ ಸರ್ಕಾರಕ್ಕೆ ಗ್ರಾಮಗಳ ಹೀನಾವಸ್ಥೆಯ ಬಗ್ಗೆ ಬಹಳ ಕನಿಕರವುಂಟಾಗಿದೆ. ಎಲ್ಲ ಕಡೆಗೂ ಗ್ರಾಮೋದ್ಧಾರ, ಗ್ರಾಮೋದ್ಧಾರ ಎಂಬ ಕೂಗು ಕೇಳಬರುತ್ತಿದೆ. ನಮ್ಮ ಹೊಸ ವೈಸರಾಯರಂತೂ ಗ್ರಾಮೋದ್ಧಾರದಲ್ಲಿ ತುಂಬ ಆಸಕ್ತಿಯುಳ್ಳವರೆಂದು ಅವರು ಮಾಡಿದ ಭಾಷಣಗಳ ಮೇಲಿಂದ ಕಂಡುಬರುತ್ತಿದೆ. ಹಳ್ಳಿಯ ಜನತೆಯಲ್ಲಿ ಶಿಕ್ಷಣದ ಪ್ರಸಾರವಾದ ಹೊರತು ಹಳ್ಳಿಗಳ ಪುನರುಜ್ಜೀವನವು ಎಂದೂ ಆಗಲಾರದು. ಈ ದೃಷ್ಟಿಯಿಂದ ಜನರನ್ನು ಸುಶಿಕ್ಷಿತರನ್ನಾಗಿಸಲಿಕ್ಕೆ ಬರೋಡಾ ಸರ್ಕಾರದವರು ಸುತ್ತಾಡುವ ವಾಚನಾಲಯಗಳನ್ನು (Circulating Libraries) ಸ್ಥಾಪಿಸಿ ಏನು ಮಾಡಿದೆಂಬ ಉದಾಹರಣೆಯು ನಮ್ಮ ಸರ್ಕಾರದ ಮುಂದೆ ಇದೆ. ಇದರಂತೆಯೇ ನಮ್ಮ ಇಂಡಿಯಾ ಪ್ರಭುತ್ವದವರು ಸಹ ಗ್ರಾಮೋದ್ಧಾರದ ಈ ದಿನಗಳಲ್ಲಿ ಹಳ್ಳಿಹಳ್ಳಿಗಳಲ್ಲಿ ಇಂತಹ ವಾಚನಾಲಯಗಳನ್ನು ಸ್ಥಾಪಿಸಿ ಜ್ಞಾನಪ್ರಸಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಸೂಚಿಸದೆ ಇರಲಾರೆನು. ಇಂತಹ ಯೋಜನೆಯನ್ನು ಬಡ ಜನತೆಯು ಹರಕುಮುರಕು ಪ್ರಯತ್ನಗಳಿಂದ ಸಾಧ್ಯವಾಗಲಾರದು.

ಹಳ್ಳಿಯೊಳಗಿನ ಸಾಮಾನ್ಯ ಜನತೆಯ ಶಿಕ್ಷಣದ ಸಾಧನಗಳೆಂಬ ದೃಷ್ಟಿಯಿಂದ ವಿಚಾರಿಸಿದರೆ, ವಾಚನಾಲಯಗಳ ಭವಿತವ್ಯತೆಯ ವಿಷಯವಾಗಿ ನಾನು ಸಂದೇಹಗೊಂಡಿದ್ದೇನೆ: ರೇಡಿಯೋ, ಟಾಕೀಜ ಮೊದಲಾದ ಹೆಚ್ಚು ಮನೋರಂಜಕವಾದ ವಿದ್ಯಾಪ್ರಸಾರದ ಸಾಧನಗಳು ಭರದಿಂದ ಪ್ರಚಾರಗೊಳ್ಳುತ್ತಿರುವ ಈಗಿನ ಕಾಲದಲ್ಲಿ ಹಳ್ಳಿಯಲ್ಲಿ ವಾಚನಾಲಯಗಳು ಎಷ್ಟರ ಮಟ್ಟಿಗೆ ಪ್ರಗತಿಯನ್ನು ಮಾಡಬಹುದು ಎಂದು ನಾನು ಹೇಳಲಾರೆ. ಆದರೆ ಈ ಮನೋರಂಜಕ ಸಾಧನಗಳು ಹಳ್ಳಿಯವರಿಗೆ ಮುಟ್ಟಬೇಕಾದರೆ ಹತ್ತಿಪ್ಪತ್ತು ವರ್ಷಗಳಾದರೂ ಹಿಡಿಯುಬಹುದೆಂದು ನನ್ನ ಅಂದಾಜು. ಅಲ್ಲಿಯ ತನಕ ನಾವು ಕಾದಿರಲಾಗದು. ಮಾತ್ರವಲ್ಲ ಈ ಸಂಕ್ರಮಣಾವಸ್ಥೆಯಲ್ಲಿಯೇ ವಾಚನಾಲಯಗಳ ಗರಜು ನನಗೆ ಬಹಳವಿದೆ.

ಸದ್ಯಕ್ಕೆ ಸರ್ಕಾರವು ಈ ವಿಷಯದ ಕಡೆಗೆ ಗಮನ ಕೊಡುವುದಿಲ್ಲವೆಂದು ನಾವು ಸುಮ್ಮನೆ ಕೂತುಕೊಳ್ಳಬಾರದು. ಸರ್ಕಾರದ ಸಹಾಯವಿಲ್ಲದೆನೇ ನಮ್ಮ ಆಂಧ್ರ ಬಂಧುಗಳು ವಾಚನಾಲಯಗಳ ಒಂದು ಜಾಲವನ್ನೇ (network) ಹರಡಿಸಿದ್ದಾರೆಂದು ನಾನು ಕೇಳುತ್ತೇನೆ. ಅವರಿಗೆ ಈ ಕೆಲಸ ಸಾಧ್ಯವಾದರೆ ನನಗೆ ಯಾಕಾಗಬಾರದು ಎಂದು ನನಗೆ ತಿಳಿಯುವುದಿಲ್ಲ. ನಾವು ಅಲ್ಲಿಯ ವರೆಗೆ ಹೋಗಿ ಅಲ್ಲಿಯ ವಾಚನಾಲಯಗಳ ಚಳವಳಿಯನ್ನು ಅಭ್ಯಾಸಿಸಿ ಬರಬಹುದು.

ಇದೆಲ್ಲಕ್ಕೂ 'ಸರ್ವಾರಂಭಾಸ್ತಂಡುಲಾ ಪ್ರಸ್ಥಮಾತ್ರಾಃ' ಎಂದು ದುಡ್ಡಿನ ಅಡಚಣೆಯನ್ನು ಯಾರಾದರೂ ಮುಂದೆಮಾಡಬಹುದು. ಆದರೆ ಹಣಕ್ಕಿಂತಲೂ ಈಗ ಕರ್ನಾಟಕದಲ್ಲಿದ್ದ ವಾಚನಾಲಯಗಳಲ್ಲಿ ಪರಸ್ಪರ ಸಹಕಾರವೂ, ಪ್ರಯತ್ನಗಳ ಏಕೀಕರಣವೂ ಅವಶ್ಯವಿದೆಯೆಂದು ನನಗೆನಿಸುತ್ತದೆ. ಇದಕ್ಕಾಗಿ ವಾಚನಾಲಯಗಳ ಒಂದು ಮಧ್ಯವರ್ತಿ ಸಂಘವನ್ನು ಸ್ಥಾಪಿಸಬೇಕೆಂದು ನಾನು ಸೂಚಿಸುತ್ತೇನೆ. ಮುಂಬಾರಾಷ್ಟ್ರದಲ್ಲಿ ಇಂತಹ ಸಂಘವು ಉಪಯುಕ್ತವಾದ ಕೆಲಸವನ್ನು ಮಾಡುತ್ತಾ ಇದೆ. ಇಂತಹ ಸಂಘವೊಂದಿದ್ದರೆ ಸ್ವಲ್ಪ ಹಣದಿಂದ ಬಹಳ ಕೆಲಸ ಮಾಡಬಹುದು. ಒಂದು ವಾಚನಾಲಯದವನು ತನ್ಮಲ್ಲಿಯ ಪುಸ್ತಕಗಳನ್ನು ಎರಡನೇ ವಾಚನಾಲಯದವರಿಗೆ ಕೂಡಾ ಕೊಡಬಹುದು. ಹೀಗೆ ಮಾಡುವುದರಿಂದ ಎರಡನೆಯ ವಾಚನಾಲಯದವರು ಅವೇ ಪುಸ್ತಕಗಳನ್ನು ಕೊಂಡುಕೊಳ್ಳುವ ಗರಜು ಇರುವುದಿಲ್ಲ; ಇವರು ತನ್ಮಲ್ಲಿದ್ದ ಹಣದಿಂದ ಮೊದಲನೆಯ ವಾಚನಾಲಯದಲ್ಲಿಲ್ಲದ ಪುಸ್ತಕಗಳನ್ನು ಕೊಂಡುಕೊಳ್ಳಬಹುದು. ಹೀಗೆ ಅನೇಕ ರೀತಿಯಿಂದ ಕೆಲಸ ಮಾಡುವ ಹಾಗಿದೆ. ನಮ್ಮ ಕರ್ನಾಟಕದಲ್ಲಿ ಸಂಪತ್ತು ಇದೆ, ಸಾಹಸ ಮಾಡುವ ಹಂಬಲವಿದೆ, ಆದರೆ ಯೋಜಕಸ್ತತ್ರ ದುರ್ಲಭಃ, ಯೋಜಕನು ಮಾತ್ರ ಇಲ್ಲ.

ಈ ದಿಕ್ಕಿನಿಂದ ಧರ್ಮಾರ್ಥವಾಗಿ ಜ್ಞಾನಪ್ರಸಾರಮಾಡಲು ಪ್ರಯತ್ನಿಸುತ್ತಿದ್ದ ಶಾಂತೇಶ ವಾಚನಾಲಯದ ಅಭಿವೃದ್ಧಿಯನ್ನು ಕಾಂಕ್ಷಿಸಿ, ತಮ್ಮೆಲ್ಲರನ್ನು ಕಾಣಲು ಸಂಧಿಯನ್ನು ಕಲ್ಪಿಸಿಕೊಟ್ಟ ಅದರ ಚಾಲಕರಿಗೂ, ನನ್ನ ಮಿತ್ರರಿಗೂ, ನಿಮ್ಮೆಲ್ಲರಿಗೂ ಅಭಿವಂದಿಸಿ ವಿರಮಿಸುತ್ತೇನೆ.'

ECONOMY

The Practice of rigid economy will make you a better businessman, a better man to your family and friends and a better citizen generally. We do not encourage any one to be stingy. But many persons have never stopped to consider, that between practicing economy and being stingy there is a vast difference.

A BANK ACCOUNT HERE WILL HELP YOU TO SAVE MONEY SENSIBLY.

THE PALAI CENTRAL BANK, LTD,

(INCORPORATED IN TRAVANCORE.)

BUNDER ROAD, MANGALORE.

London Agents— Lloyds Bank, Ltd.

New York— National City Bank of New York.

JAYA LAXMI BANK, LTD.,
MANGALORE.

ಜಯಲಕ್ಷ್ಮೀ ಬೇಂಕ್,
ಲಿಮಿಟೆಡ್, ಮಂಗಳೂರು.
ಶಾಖೆಗಳು: ಪುತ್ತೂರು, ಕಾಸರಗೋಡು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಭಂಗಾರ, ಸರಕು ಈಡಿನ ವ ಪ್ರೋ.ನೋಟಿನ ಮೇಲೆ, ಸಾಲವನ್ನು ಕೊಡುವುದು.

ಕಾಯಂ ಠೇವಣಾತಿಗಳು.

ವಾರಿಕ, ಸೇವಿಂಗ್ಸು ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. GANESH RAO,
ಸೆಕ್ರೆಟರಿ.

FOR YOUR DIAMONDS
ENQUIRE AT
SOWCAR
SRINIVAS RANGA PAI,
SOWCAR MAHAL,
Car Street,
MANGALORE.



ಜೀವಹಿಂಸೆ, ಅಸತ್ಯ, ದುರಾಚಾರ, ಚೌರ್ಯ ಮೊದಲಾದ ನಿಂದ್ಯಕಾರ್ಯಗಳಿಂದ ದೂರನಾಗಿರಬೇಕು. ಜೈನಧರ್ಮ ಸಿದ್ಧಾಂತ.

XVIII] ಮಂಗಳೂರು, ತಾ. ೫೦—೬—೧೯೩೬ [೨೭
ವಿಲಂಬಿ ಧಾತು ಸಂ। ಆಷಾಢ ಶು। ೧೧ ಶುಜವಾರ.

ನಮ್ಮ ಮೈಸರಾಯರೂ, ಹಿಂದೀಯರ ಆಹಾರವೂ.

ಭಾರತದ ಪ್ರಜಾಹಿತಚಿಂತನೆಯ ದೃಷ್ಟಿಯಿಂದ, ನಮ್ಮ ಮೈಸರಾಯರು ಆಗಲೇ ಕೈಕೊಂಡಿರುವ ಮತ್ತೂ ಕೈಕೊಳ್ಳಲಿರುವ ಹಲವು ಉತ್ತಮ ಏರ್ಪಾಡುಗಳಿಂದ, ಅವರು ಭಾರತದ ಪ್ರಜಾಗಣದ ಸದಭಿಪ್ರಾಯವನ್ನು ಸಂಪಾದಿಸಿ, ನಮ್ಮೆಲ್ಲರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಅವರು ಇಂಡಿಯಕ್ಕೆ ದಯೆ ಮಾಡಿಸಿದಂದಿನಿಂದ, ಹಿಂದುಸ್ಥಾನದ ರೈತರ ವಿಷಯದಲ್ಲಿ, ನಿರ್ವಂಚನೆಯ ತನ್ನ ಔದಾರ್ಯವನ್ನು ಪ್ರಕಟಿಸದ ಒಂದೇ ಒಂದು ಸಾರ್ವಜನಿಕ ಭಾಷಣವಾದರೂ ಇಲ್ಲ. ನೂರಾರು ಮುಂದಿ ಬಡಬಗ್ಗರಿಗೆ, ತನ್ನ ಸ್ವಂತ ಖರ್ಚಿನಿಂದ, ಊಟವನ್ನು ಮಾಡಿಸಿದ ಮೈಸರಾಯರು, ನನಗೆ ತಿಳಿದ ಮಟ್ಟಿಗೆ, ಇವರಲ್ಲದೆ ಇನ್ನಾರೂ ಇಲ್ಲ. ಮತ್ತೆ ಸಾಮಾನ್ಯ ಜನರ ವಾಡಿಕೆಯ ಜೀವನ ಕ್ರಮದ ಕುರಿತಾಗಲೀ, ಇಂಪೀರಿಯಲ್ ಸೆಕ್ರಟೇರಿಯಟಿನ ಅಧೀನ ಉದ್ಯೋಗಿಗಳ ಕುರಿತಾಗಲೀ ಇಷ್ಟೊಂದು ಆಸಕ್ತಿಯನ್ನು ನಿರ್ವಹಿಸಿದ ಮೈಸರಾಯರು ಬೇರೆ ಇದ್ದಾರೆಯೇ? ನಿನ್ನೆಮೊನ್ನೆಯಲ್ಲಿ ಕೃಶಾಂಗವುಳ್ಳ ಆ ಬಡ ಮಕ್ಕಳನ್ನು ಕಂಡು ಕನಿಕರಗೊಂಡು, ನಮ್ಮ ಮೈಸರಾಯರು, ಆ ಮಕ್ಕಳಿಗೆ ಉಚಿತವಾಗಿ ಹಾಲು ಹಂಚಬೇಕೆಂದು ಆ ಮುನಿಸಿಪಾಲಿಟಿಗೆ ಸೂಚಿಸಿದರು. ದನಕರುಗಳ ಪಾಲನೆಯ ವಿಷಯದಲ್ಲಿ ವಿಶೇಷವಾದ ಆದರವನ್ನು ತೋರಿಸಬೇಕೆಂದು, ಆ ಪ್ರಶ್ನೆಯ ಕಡೆಗೆ ಲಕ್ಷ್ಯವನ್ನು ಸೆಳೆಯುವ ಪತ್ರಗಳನ್ನು ಪ್ರಾಂತಾಧಿಕಾರಿಗಳಿಗೆ ನಮ್ಮ ಮೈಸರಾಯರು ಸ್ವತಃ ಬರೆದುದು ಮೊನ್ನೆ ಮೊನ್ನೆಯೇ. ವಸ್ತುತಃ ದನಕರುಗಳ ಸ್ಥಿತಿಗತಿಗಳು ನಮ್ಮಲ್ಲಿ ವೃದ್ಧಿಹೊಂದದೆ, ನನ್ನು ಕೃಷಿಯು ಮತ್ತೂ ಕೃಷಿಕರ ವಿಚ್ಯನೂನಗಳು ಉತ್ತಮಗೊಳ್ಳಲಾರವೆಂದೇ ಅವರ ಯುಕ್ತ ಅಭಿಪ್ರಾಯ. ಅದಂತಿರಲಿ.

ಪ್ರಕೃತ, ಮೇಲೆ ವಿವರಿಸಿದ ಹಲವು ಜನೋಪಕಾರ ಕಾರ್ಯಗಳೊಡನೆ, ನಮ್ಮ ಮೈಸರಾಯರು ಇನ್ನೂ ಒಂದು ಮುಖ್ಯವಾದ ಕೆಲಸಕ್ಕೆ ಕೈ ಹಾಕಿದ್ದಾರೆ. ಜನಸಾಮಾನ್ಯಕ್ಕೆ ತಕ್ಕ ಆಹಾರವು ಒದಗಬೇಕೆಂಬುದೇ ಅವರ ಸದುದ್ದೇಶ. ಇದರಿಂದಲೂ, ಅವರ ಇತರ ಕಾರ್ಯಕಲಾಪಗಳಿಂದಲೂ ಕೆಲವು ಸರಕಾರಿ ಶಾಖೆಗಳು ಚುರುಕಾಗಿ ಕೆಲಸಮಾಡುವಂತಾಗಿದೆ. ಇದುವರೆಗೆ ಆ ಶಾಖೆಗಳೇನು ಮಾಡುತ್ತಿವೆ ಎಂದು ಜನತೆಗೆ ಗೊತ್ತಿರಲಿಲ್ಲ. ಸಿನ್ಲುದ ವಾರ್ತಾದಾಯಕನೆನ್ನುವಂತೆ, ಈಗ ನಮ್ಮ ವೈಸರಾಯರ ಪ್ರೋತ್ಸಾಹದಿಂದ, ಸರಕಾರದ ಆಡಳಿತದ ಯಾವತ್ತು ಯಂತ್ರಗಳೂ, ತಕ್ಕಷ್ಟು ಚಟುವಟಿಕೆ ಇಲ್ಲದ ಶಾಖೆಗಳು ಕೂಡ, ಸರಿಯಾಗಿ ಕೆಲಸಮಾಡಬೇಕಾಗಿದೆ ಎಂಬೀ ವಿಷಯವು ಅಭಿನಂದನೀಯವಾಗಿದೆ.

ನಮ್ಮ ವೈಸರಾಯರು, ಇಂಡಿಯನ್ ರಿಸರ್ಚ್ ಸಂಸ್ಥೆಯ ಒಂದು ವಿಷಯಕ್ಕಿನಲ್ಲಿ ಒಂದು ಉದಾತ್ತ ಉಪನ್ಯಾಸವನ್ನೂ ಕೊಟ್ಟುದುದಲ್ಲದೆ, ಆಹಾರವನ್ನು ಸೂಚಿಸುವ ಬಗೆಗೆ ಒಂದು ಕಮಿಟಿಯನ್ನೂ ಸ್ಥಾಪಿಸಿದ್ದಾರೆ. ಮುಂದೆ ಈ ಚಿಕ್ಕ ಕಮಿಟಿ, ರಾಯಲ್ ಕಮಿಶನಿನ ಶಿಫಾರಸಿನಂತೆ, ದೊಡ್ಡದಾದ ಒಂದು ಮಧ್ಯಕೇಂದ್ರ ಸಂಸ್ಥೆಯಾಗಿಯೂ ಮಾರ್ಪಡಬಹುದು. ಹಿಂದೆ, ಈ ಆಹಾರದ ವಿಷಯದಲ್ಲಿ, ನಮ್ಮಲ್ಲಿ ಪ್ರಯತ್ನಗಳೇನೂ ನಡೆದಿರಲಿಲ್ಲವೆಂದಲ್ಲ. ಕುನ್ನೂರಿನ ಆಹಾರಪರಿಶೋಧನಾಲಯದ ಮುಖ್ಯಾಧಿಕಾರಿಗಳಾದ ಸರ್ ರೋಬರ್ಟ್ ಮೆಕ್‌ಕೆರಿಸನ್ ರವರು, ಈ ಕ್ಷೇತ್ರದಲ್ಲಿ ಚೆನ್ನಾಗಿ ಕೆಲಸ ಮಾಡಿದ್ದಾರೆ. ಅವರು ಹಿಂದೀಯರ ಎಲ್ಲ ಬಗೆಯ ಆಹಾರಗಳ ಕುರಿತೂ ಪರಿಶೋಧನೆ ನಡೆಯಿಸಿ, ಆ ವಿಷಯದಲ್ಲಿ ಬರೆದಿಟ್ಟಿರುವ ಅಮೂಲ್ಯ ಅನುಭವದ ನುಡಿಗಳನ್ನು ಎಲ್ಲರೂ ಓದಬೇಕಾಗಿದೆ. ಹಾಗೆಯೇ, ಅವರ ಬಳಿಕ ಬಂದ ಮಿ. ಐಕ್ರಾಡ್‌ರವರಾದರೂ ಪರಿಶೋಧನೆಗಳನ್ನು ನಡೆಯಿಸುತ್ತ, ತಕ್ಕ ಸೂಚನೆಗಳನ್ನು ಕೊಡುತ್ತ ಪರಿಶ್ರಮಪೂರ್ವಕವಾಗಿ ಪ್ರಯತ್ನಿಸುತ್ತಿದ್ದಾರೆ. ಅತ್ಯಲ್ಪ ಖರ್ಚಿನಿಂದ ಅತ್ಯುತ್ತಮ ಆಹಾರವನ್ನು ಒದಗಿಸಿಕೊಳ್ಳುವುದು ಹೇಗೆ ಎಂಬುದನ್ನು ಸೂಚಿಸುವುದೇ ಅವರ ಮುಖ್ಯ ಧ್ಯೇಯ. ನಮ್ಮ ವೈಸರಾಯರೀಗ, ಇಂತದೇ ಒಂದು ಸಂಸ್ಥೆ, ಕಲ್ಕತ್ತೆಯಲ್ಲಿಯೂ ಯೋಗ್ಯವಾದ ಕೆಲಸವನ್ನೇ ಮಾಡುತ್ತಿದೆ ಎಂದು ತಮ್ಮ ಭಾಷಣದಲ್ಲಿ ತಿಳಿಸಿರುತ್ತಾರೆ. ಸ್ತುತ್ಯ!

ಈ ಸಂದರ್ಭದಲ್ಲಿ, ಬ್ರಿಟಿಶರ ವ್ಯವಸ್ಥೆ ಏನೆಂದು ನೋಡೋಣ. ಕೆಲಕಾಲದ ಹಿಂದೆ, ಜನಾಂಗಸಂಘದಿಂದ, ಈ ಬಗೆಗೆ ಒಂದು ಕಮಿಟಿ ಏರ್ಪಾಡಾಗಿದ್ದು, ಅದು ಒಂದು ಅಮೂಲ್ಯವಾದ ವರದಿಯನ್ನು ಬರೆದೊಪ್ಪಿಸಿದೆ. ಹಾಗೂ ಸರ್ ಜಾನ್ ಆರ್‌ರವರೂ 'ಆಹಾರ, ಆರೋಗ್ಯ ಮತ್ತೂ ಆದಾಯ'ಗಳ ಕುರಿತು ಒಂದು ಪುಸ್ತಕವನ್ನೂ ಬರೆದಿದ್ದಾರೆ. ಆದರೆ, ಬ್ರಿಟಿಶ್ ಅಧಿಕಾರದ ಅಭಿಪ್ರಾಯದ ಮೇರೆಗೆ,—ಇವುಗಳಲ್ಲಿ ಸೂಚಿಸಲ್ಪಟ್ಟ ಇಂಗ್ಲಿಷ್ ಜನರ ಆಹಾರವು ಸಾಕಷ್ಟು ಪುಷ್ಟಿಕರವಾಗಿಲ್ಲವೆಂದೇ ತೋರುತ್ತದೆ. ವಸ್ತುತಃ ನೂರಕ್ಕೆ ನೂರು ಮಂದಿ ವಿದ್ಯಾವಂತರಿರುವ, ಜೀವನದ ಅಂತಸ್ತು ಉಚ್ಚವಾಗಿರುವ ಇಂಗ್ಲೆಂಡಿನಂತಹ ದೇಶದಲ್ಲಿಯೇ ಆಹಾರದ ಸ್ಥಿತಿ ಹೀಗಾದರೆ, ನಮ್ಮ ಬಡ ದೇಶದ ವಿಷಯದಲ್ಲಿ ಹೇಳುವುದೇನು? ಈ ದೇಶದಲ್ಲಿ ಅವಿದ್ಯಾವಂತರ ಸಂಖ್ಯೆ ಹೆಚ್ಚು; ಜೀವನದ ಅಂತಸ್ತು ತೀರಾ ಕನಿಷ್ಟ; ಜನಗಳಿಗೆ ಹೊಟ್ಟೆಗೆ ಸಾಕಷ್ಟು ಅನ್ನವಿಲ್ಲ. ಇದರಿಂದ ಅವರ ಶಕ್ತಿ ಕುಂದಿ, ಪೌರುಷವು ಉಡುಗಿ, ನಾನಾ ರೋಗಗಳಿಗೆ ಗುರಿಯಾಗುತ್ತಾರೆ. ಆದುದರಿಂದ, ನಮ್ಮ ವೈಸರಾಯರೀ ವಿಚಾರದಲ್ಲಿ ಸ್ವಂತವಾಗಿ ಅತಿಶಯವಾದ ಶ್ರದ್ಧೆಯನ್ನು ನಿರ್ವಹಿಸಿರುವುದಕ್ಕಾಗಿ, ಇಂಡಿಯದ ಜನತೆಯು, ಅವರಿಗೆ ವಂದನೆಗಳನ್ನು ಅರ್ಪಿಸಬೇಕಾಗಿದೆ.

ನಾವು ಲಾರ್ಡ್ ಲಿನ್‌ಲಿತ್‌ಗೋರವರ ನಿರ್ವಂಚನೆಯ, ಉದಾರಬುದ್ಧಿಯ ಈ ಪ್ರಯತ್ನಗಳನ್ನು ಕೊಂಡಾಡುತ್ತಿರುವಾಗಲೇ, ಇನ್ನೊಂದು ಮುಖ್ಯ ವಿಷಯದಲ್ಲಿಯೂ ತುಂಬ ಚಿಂತಾಕ್ರಾಂತರಾಗಿದ್ದೇವೆ. ತಕ್ಕ ಆಹಾರವನ್ನು ಜನಸಾಮಾನ್ಯಕ್ಕೆ ಸೂಚಿಸುವುದಕ್ಕೂ ಮೊದಲಾಗಿ,—ಒಳ್ಳಿದಾಗಲೀ, ಕೆಟ್ಟದಾಗಲಿ,—ಸಾಕಷ್ಟು ಆಹಾರವು ನಮ್ಮ ದೇಶದ ಮಿಲ್ಯಗಟ್ಟಲೆಯ ಬಡವರಿಗೆ ಒದಗುವ ಈ ಸನುಸ್ಯೆಯನ್ನು ಬಿಡಿಸುವವರಾರು, ಹೇಗೆ ಎಂಬುದೇ ನಮ್ಮ ಅಗಾಧಚಿಂತೆಯ ಆ ವಿಷಯವಾಗಿದೆ. ಅನೇಕ ವರ್ಷಗಳ ಹಿಂದೆ, ಸರ್ ವಿಲ್ಲಿಯಮ್ ಹಂಟರ್ ಸಾಹೇಬರು, ಎರಡು ಊಟಗಳಿಗೆ ಗತಿ ಇಲ್ಲದ ೪೦ ಮಿಲ್ಯ ಮುಂದಿ ನಮ್ಮಲ್ಲಿದ್ದಾರೆ ಎಂದಿದ್ದರು. ಇದೇನೂ ಉತ್ಪ್ರೇಕ್ಷೆಯಲ್ಲ. ಬರೇ ಅನ್ನ, ಉಪ್ಪು ಇವುಗಳುಳ್ಳ ಒಂದೇ ಊಟದಿಂದ ತೃಪ್ತರಾಗುವ ಲಕ್ಷಾಂತರ ಮುಂದಿ ನಮ್ಮಲ್ಲಿ ಈಗಲೂ ಇದ್ದಾರೆ. ಇವರಿಗೆ—ಹೊಟ್ಟೆಗೇ ಸಾಲದವರಿಗೆ,—ಯೋಗ್ಯ ಆಹಾರವು ಇಂತದೆಂದು ಸೂಚಿಸುವುದರೊಡನೆ, ಅಥವಾ ಅದಕ್ಕೂ ಮೊದಲಾಗಿಯೇ, ಎರಡು ಹೊತ್ತಿನ ಊಟಕ್ಕೂ ಮಾರ್ಗವನ್ನು ಕಲ್ಪಿಸಿಕೊಡುವುದು ಹೆಚ್ಚು ಫಲಕಾರಿಯಾಗಿದೆ. ಆದರಲ್ಲಿಯೂ ಕೃತಾರ್ಥರಾಗುವ ವೈಸರಾಯಿಯವರೇ, ರೈತರ ವೈಸರಾಯ್‌ರವರು. ಆ ಕೀರ್ತಿ ನಮ್ಮ ಲಾರ್ಡ್ ಲಿನ್‌ಲಿತ್‌ಗೋರವರಿಗೂ ಸಲ್ಲದಿರದೆಂದು, ಅದನ್ನೂ ಅವರು ಸಂಪಾದಿಸದಿರರೆಂದು ನಮ್ಮ ಹಾರೈಕೆ.

ಮಂಗಳೂರು

ಮಂಗಳೂರು ಮುನಿಸಿಪಾಲಿಟಿಯೊಳಗಣ ಮದ್ರಾಸು ಲೆಜಿಸ್ಲೇಟಿವ್ ಎಸೆಂಬ್ಲಿ ಇಲೆಕ್ಟರರ ಪಟ್ಟಿಯಲ್ಲಿ ವೋಟರರ ಹೆಸರುಗಳನ್ನು ದಾಖಲು ಮಾಡುವರೆ ಅರ್ಜಿ ಕೊಡುವ ಪ್ರತಿ ಒಬ್ಬನಿಗೂ ಬೇಕಾಷ್ಟು ಅನುಕೂಲತೆಯನ್ನು ಒದಗಿಸುವ ಉದ್ದಿಶ್ಯ ಗವರ್ನಮೆಂಟಿನವರು ಅರ್ಜಿಗಳನ್ನು ಸ್ವೀಕರಿಸುವ ಮತ್ತು ತೀರ್ಮಾನಿಸುವ ಅಧಿಕಾರವನ್ನು ೧೯೩೬ನೇ ಇಸವಿ ಜೂಲೈ ತಿಂಗಳ ತಾರೀಕು ೩ರ ವರೆಗೆ ಮುಂದರಿಸಿಟ್ಟಿರುತ್ತಾರೆ. ಮಂಗಳೂರು ಮ್ಯುನಿಸಿಪಾಲಿಟಿಯ ಕೆಲವು ಉದ್ಯೋಗಸ್ಥರು ೧೯೩೬ನೇ ಇಸವಿ ಜೂಲೈ ತಿಂಗಳ ತಾರೀಕು ೩ರ ವರೆಗೆ ನೇಮಿಸಿದ ಸ್ಥಳಗಳಲ್ಲಿ ಅರ್ಜಿಗಳನ್ನು ಸ್ವೀಕರಿಸುವರು. ಯೋಗ್ಯತೆ ಉಳ್ಳವರು ತಮ್ಮ ಹೆಸರುಗಳನ್ನು ದಾಖಲು ಮಾಡಿಸುವ ಉದ್ದಿಶ್ಯ ಮ್ಯುನಿಸಿಪಾಲಿಟಿಯೊಳಗಣ ಬೇರೆ ಬೇರೆ ಸ್ಥಳಗಳಲ್ಲಿ ಸ್ಪೆಶ್ಯಲ್ಸ್‌ಗಳನ್ನು ನೇಮಿಸಿ ಜನರಿಗೆ ಹೆಚ್ಚಿನ ಅನುಕೂಲತೆಯನ್ನು ಮುನಿಸಿಪಾಲಿಟಿಯು ಮಾಡಿಸಿದೆ. ಮೇಲೆ ಹೇಳಿದ ಪ್ರಕಾರ ಅವರವರ ಹೆಸರುಗಳನ್ನು ವೋಟರರ ಪಟ್ಟಿಯಲ್ಲಿ ದಾಖಲು ಮಾಡಿಸುವ ಉದ್ದಿಶ್ಯ ಅರ್ಜಿ ಕೊಡುವವರು ತಮ್ಮ ತಮ್ಮ ಅರ್ಜಿಗಳನ್ನು ಸರಿಯಾಗಿ ಬರೆದು ಆವುಗಳಲ್ಲಿ ಪೋಲಿಂಗ್ ಸ್ಥಳದ ಹೆಸರು ಮತ್ತು ವಿಭಾಗವನ್ನು ಸರಿಯಾಗಿ ಕಾಣಿಸಬೇಕಾಗಿದೆ.

ಮೈಸೂರು, ಬೆಂಗಳೂರು, ಮದ್ರಾಸು, ತಿರುಚಿನಾಪಳ್ಳಿ ಮೊದಲಾದ ನಗರಗಳಲ್ಲಿ ತಮ್ಮ 'ಭೂ-ಕೈಲಾಸ' ಇತ್ಯಾದಿ ನವನವೀನ ನಾಟಕಗಳನ್ನು ಪ್ರದರ್ಶಿಸಿ ಖ್ಯಾತಿಯನ್ನು ಪಡೆದಿರುವ ಮೈಸೂರಿನ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯವರು, ಪ್ರಸಿದ್ಧ ನಟನಟಿಯರೊಂದಿಗೆ ನವಂಬರ ತಿಂಗಳ ಮಧ್ಯದಲ್ಲಿ ಮಂಗಳೂರಿಗೆ ಬರಲಿರುವರೆಂದು ತಿಳಿಯುತ್ತೇವೆ. ಕರ್ನಾಟಕ ರಂಗಭೂಮಿಯಲ್ಲಿಯೂ, ಚಲನಚಿತ್ರಗಳಲ್ಲೂ, ಗ್ರಾಮಫೋನ್ ಸಂಗೀತದಲ್ಲಿಯೂ ಪ್ರಖ್ಯಾತಿಯನ್ನು ಪಡೆದಿರುವ ಮಿ.ಗಳಾದ ಆರ್. ನಾಗೇಂದ್ರ ರಾವ್ ಮತ್ತು ಎಂ. ವಿ. ಸುಬ್ಬಯ್ಯ ನಾಯಿಡುರವರೇ ಇದರ ಮ್ಹಾಲಕರು.

ಮಂಗಳೂರಿನಲ್ಲಿ ವ್ಯಾಪಾರವನ್ನು ಬೆಳಿಸಿ ನೆಲಸಿಕೊಂಡಿರುವ ಫಾರ್ಶಿಗಳಲ್ಲಿ ಬಹಳ ವಯೋವೃದ್ಧರಾಗಿದ್ದ ಮಿ. ಜೆಮ್ಸೆಟ್ಜಿ ನವರೋಜಿಯವರು ಕಳೆದ ಶನಿವಾರ ಮಧ್ಯರಾತ್ರಿ ವೃದ್ಧಾಪ್ಯದ ದೆಸೆಯಿಂದ ಪರಲೋಕವನ್ನೈದಿದರು. ಶವಸಂಸ್ಕಾರವು ಆದಿತ್ಯವಾರ ಪ್ರಾತಃಕಾಲ ನಡೆಯಿತು. ದಿವಂಗತರು ಶಾಂತ ಸ್ವಭಾವದವರಾಗಿದ್ದು, ತಮ್ಮ ಮತಸ್ಥರ ಉಪಯೋಗಕ್ಕಾಗಿ ಶವಸಂಸ್ಕಾರದ ಸ್ಥಳವನ್ನು ದಾನಮಾಡಿದ್ದರು. ಅವರ ಆತ್ಮಕ್ಕೆ ಶಾಂತಿ ಇರಲಿ.

ಕಳೆದ ಆದಿತ್ಯವಾರ ಸಂಜೆ ಇಲ್ಲಿ ಬಹು ವಿಪರೀತವಾದ ಗಾಳಿ ಬೀಸಿ, ಮರಗಳು ಕೆಲವು ಉರುಳಿ, ಕೆಲವು ಮಾಡುಗಳ ಹಂಚುಗಳೂ, ಹಾರಿವೆ. ವಿಶೇಷ ನಷ್ಟವೇನೂ ಸಂಭವಿಸಿದ ಸುದ್ದಿ ಇರುವುದಿಲ್ಲ.

ಇಲ್ಲಿಯ ಮಿಶ್ಶನ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಮು. ರಾ. ರಾಮ ಶರ್ಮರು ಕುದ್ರೋಳಿಯಲ್ಲಿರುವ ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ಪೂಜೆ ಎಂಬುದರ ವಿಷಯ ಬರುವ ಆದಿತ್ಯವಾರ ತಾ. ೫—೬—೩೬ನೇ ಬೆಳಿಗ್ಗೆ ೮—೩೦ಕ್ಕೆ ಭಾಷಣ ಕೊಡುವರು. ಎಲ್ಲರಿಗೂ ಸುಸ್ವಾಗತವಿದೆ.

ದಿವಂಗತ ಜಾರ್ಜ್ ಚಕ್ರವರ್ತಿಗಳ ಸ್ಮಾರಕ ನಿಧಿ.

ಬ್ರಿಟಿಶ್ ಸಾಮ್ರಾಜ್ಯದಲ್ಲೆಲ್ಲಿಯೂ, ನಮ್ಮ ಜಾರ್ಜ್ ಚಕ್ರವರ್ತಿಗಳ ಪವಿತ್ರ ಸ್ಮಾರಕಕ್ಕಾಗಿ, ಹಣದ ವಂತಿಗೆಯ ಏರ್ಪಾಡು ನಡೆಯುತ್ತಿರುವಂತೆ, ಭಾರತದಲ್ಲಿಯೂ, ನಮ್ಮ ಆಧಿಪತ್ಯದಲ್ಲಿಯೂ, ನಮ್ಮ ಜಿಲ್ಲೆಯಲ್ಲಿ ಕೂಡ ನಡೆಯುತ್ತಿದೆ. ಎಂಬುದು, ಆಗಾಗ ಪತ್ರಿಕೆಗಳಲ್ಲಿ ಪ್ರಕಟವಾಗುವ ವಂತಿಗೆ ಪಟ್ಟಿಗಳನ್ನೋದುವವರಿಗೆ ತಿಳಿದೇ ಇದೆ.

ಈ ನಿಧಿಯ ಸಂಗ್ರಹಕ್ಕೆಂದು ನಮ್ಮಲ್ಲಿ ಸ್ಥಾಪನೆಯಾದ ಆ ಕಮಿಟಿ ಅತ್ಯುತ್ಸಾಹದಿಂದ ಕೆಲಸ ಮಾಡುತ್ತ, ಇಷ್ಟರೊಳಗೇ ಕೆಲವು ಮಟ್ಟಿನ ಧನಸಾಹಾಯ್ಯವನ್ನು ಸಂಗ್ರಹಿಸಿದೆ. ಆದರೂ ಈ ಸ್ಮಾರಕದಲ್ಲಿ ಅಡಕವಾಗಿರುವ ಎರಡು ಉದ್ದೇಶಗಳನ್ನು ನಾವಿಲ್ಲಿ ನಮ್ಮ ಜಿಲ್ಲೆಯವರ ಸ್ಮರಣೆಗೆ ತಂದುಕೊಟ್ಟು, ತನ್ಮೂಲಕ ನಮ್ಮ ಜಿಲ್ಲೆಯವರು ಇದಕ್ಕೆ ಇನ್ನಷ್ಟು ಧನಸಹಾಯ ಮಾಡುವಲ್ಲಿ ನಿರವಾಗದಿರರೆಂದು ನೆರೆನಂಬುತ್ತೇವೆ.

ನಿಧಿಸಂಗ್ರಹದ ಮುಖ್ಯವಾದ ಒಂದು ಉದ್ದೇಶವು, ನಮ್ಮ ದಿವಂಗತ ಚಕ್ರವರ್ತಿಗಳ ಸ್ಮಾರಕ ಪ್ರತಿಮೆಯನ್ನು ನಿರ್ಮಿಸುವ ಖರ್ಚಿನಲ್ಲಿ, ಎಲ್ಲ ಜಿಲ್ಲೆಗಳಂತೆ, ನಮ್ಮ ಪಾಲನ್ನು, ನಾವೂ ಕೊಡುವುದಾದರೂ, ಧನಸಂಗ್ರಹಕ್ಕಾಗುವ ವೆಚ್ಚವೂ, ಪ್ರತಿಮೆಗಾಗಿ ನಾವು ಕೊಡಬೇಕಾದ ಮೊತ್ತವೂ ಕಳೆದುಳಿವ ದ್ರವ್ಯಭಾಗವು, ನಮ್ಮ ಜಿಲ್ಲೆಗಾಗಿಯೇ ವಿನಿಯೋಗವಾಗಲಿದೆ ಎಂಬುದಿದು ಅಷ್ಟೇ ಮುಖ್ಯಾಂಶವೆಂಬುದನ್ನೂ ನಾವಿಲ್ಲಿ ವ್ಯರ್ಥಯಲಾಗದು. ಉಳಿದ ಈ ಅಂಶದ ಹಣವು, ಇಲ್ಲಿ ವಿನಿಯೋಗಿಸಲ್ಪಟ್ಟು, ಅದರ ಆದಾಯದಿಂದ ಬರುವ ಮೊತ್ತದಲ್ಲಿ ಸೇಕಡಾ ೬೦ ನಮ್ಮ ಜಿಲ್ಲೆಯ ವೈದ್ಯಕೀಯ ಸಹಾಯಕ್ಕಾಗಿ ಉಪಯೋಗವಾಗಲಿದೆ. ಹೀಗೆ ರಾಜಸೇವೆ ಮತ್ತೂ ಸಾರ್ವಜನಿಕ ಸೇವೆಗಳೆರಡರ ಸಂಯೋಗವೂ ಇರುವ ಈ ಸುಸಂಧಿಯನ್ನು ನಮ್ಮ ಜಿಲ್ಲೆಯವರು ಹೋಗಲಾಡಿಸಿಕೊಳ್ಳದೆ, ಸರ್ವಪ್ರಕಾರದಿಂದಲೂ ಯಥೋಚಿತ ಸಹಾಯವನ್ನು ಕೊಟ್ಟು ಕೊಡಿಸಿ, ನಮ್ಮ ಜಿಲ್ಲೆಯ ರೋಗಿಗಳ ಕೃತಜ್ಞತೆಗೂ ಪಾತ್ರರಾಗಲೆಂದು ಹಾರೈಕೆ.

ಕಳೆದ ವಾರ

'ಇಂಡಿಯದಲ್ಲಿ ಹಿಂದುಗಳೇ ಬಹುಸಂಖ್ಯಾಕರು'

ಎಂಬ ಮಾತನ್ನು ನಾವು ಆಗಾಗ ಕೇಳುತ್ತಲಿದ್ದೇವೆ. ಈ 'ಬಹುಸಂಖ್ಯೆ' ಎಂಬ ಕೂಗಿನಿಂದ 'ಅಲ್ಪಸಂಖ್ಯಾಕರ' ಬಲ ವೆಷ್ಟೋ ಹೆಚ್ಚಿದೆ. 'ಬಹುಸಂಖ್ಯೆ' ಎಂಬುದೇ ಆ ಸಮಾಜ ಕ್ಕೊಂದು ಅವಗುಣ; 'ಅಲ್ಪಸಂಖ್ಯೆ' ಎಂಬುದೇ ಆ ಸಮಾಜ ಕ್ಕೊಂದು ಗುಣವಾಗಿ ಪರಿಣಮಿಸಿದೆ. ಆದರೆ 'ಬಹುಸಂಖ್ಯೆ' ಎಂಬುದರ ನಿಜವಾದ ಗುಟ್ಟೇನು? 'ಹಿಂದೂಗಳ ಬಹುಸಂಖ್ಯೆ ಎಂಬ ಕೂಗು ಅದೊಂದು ಬರೇ ಗುಲ್ಲು; ಅದ್ಭುತ ಕಥೆ. ಹಿಂದೂ ಸಮಾಜವು, ತಮ್ಮೊಳಗೆ ಜಗಳವಾಡಿಕೊಳ್ಳುವ 'ಮೈನಾರಿಟಿ'ಗಳ ದೊಡ್ಡ ರಾಶಿಗಳನ್ನು ಒಳಗೊಂಡಿದೆ. ೩ ಸಾವಿರ ಜಾತಿ-ಉಪ ಜಾತಿಗಳು ಈ ಹಿಂದೂ ಸಮುದಾಯದಲ್ಲಿ. ಎಲ್ಲವೂ ಅಸ್ಪೃಶ್ಯತೆ ಗೊಳಗಾದುವು. ವರ್ಣಧರ್ಮದ ನೆವದಲ್ಲಿ ಪರಸ್ಪರ ಭೋಜನ ವಿಲ್ಲ; ದೇಹಸಂಬಂಧವಿಲ್ಲ' ಹೀಗೆಂದು ಡಾ॥ ಭಗವಾನ್ ದಾಸರೆನ್ನುತ್ತಾರೆ. ಇದರಲ್ಲಿ ಹುಡುಕಿದರೆ, ಎಷ್ಟು ಸತ್ಯಾಂಶವಿಲ್ಲ!

* * * * *

ಇಟೆಲಿಗೆ ಇನ್ನೇನು ತಾನೇ ಕಡಿಮೆ?

ಇಟೆಲಿ ಅಬಿಸೀನಿಯವನ್ನು ನುಂಗಿದುದೇ ತಡ! ಜನಾಂಗ ಸಂಘದ ಗೃಹಸ್ಥರೆಲ್ಲ ಹೇಗೆ ತಿರುಗಿಬಿಟ್ಟಿದ್ದಾರೆ! ಇನ್ನು ಅವರಲ್ಲಿ ನೈತಿಕ ಧರ್ಮದ ಮಾತು ಕಡಿಮೆ; ಇಟೆಲಿಯೊಡನೆ ಸ್ನೇಹಾಚಾರದ ಮಾತುಗಳೇ ಹೆಚ್ಚು. 'ಸ್ಯಾಂಕ್ಶನು'ಗಳು ಅಂದು ಅಗತ್ಯವೆಂದ ವರ ಆ ಬಾಯಿಗಳಿಂದಲೇ, ಇಂದು, ಅವು ಏಕೆ ಅಗತ್ಯವಲ್ಲ ವೆಂಬುದಕ್ಕೆ ಸಾವಿರಾರು ಕಾರಣಗಳೂ, ಕಥೆಗಳೂ ಮುಂದೆ ಬಂದಿವೆ. ಸ್ಯಾಂಕ್ಶನಿಸಿಂದ ಇನ್ನು ಫಲವಿಲ್ಲವೆಂದು ಪ್ರತಿಯೊಬ್ಬ ಗೃಹಸ್ಥರ ಹೇಳಿಕೆ. ಸಹಜವಲ್ಲವೇ? ಇಟೆಲಿಯ ಅಮೂಲ್ಯ ವಾದ ಮಾರ್ಕೆಟನ್ನು ಕಳೆದುಕೊಳ್ಳಲು ಆಸ್ಟ್ರೇಲಿಯಕ್ಕೆ ಮನ ಸ್ಸಿಲ್ಲ. ದಕ್ಷಿಣ ಆಫ್ರಿಕಕ್ಕೆ, ಈ ಸ್ಯಾಂಕ್ಶನಿನ ಬೇಟೆಯೇ ಬೇಡ ವೆಂದು ತೋರುತ್ತಿದೆ. ಇನ್ನು ಬ್ರಿಟನ್ ಆದರೋ, ಧ್ಯೇಯ ಸಾಧನೆಯನ್ನು, ಸಮಯ ಬಂದಂತೆ, ಮುಂದೊತ್ತಿಯೇ ಇದ್ದರೂ, ಈಗ ಹತ್ತು ಜನರೊಡನೆ ತಾನೂ ಸೇರಿ, ಬಹಳ ವಿಷಾದದಿಂದ, ಅನಿವಾರ್ಯಪಕ್ಷದಿಂದ, ಇಟೆಲಿಯ ಬಾಂಧವ್ಯವನ್ನು ಹೊಸ ರೀತಿಯಲ್ಲಿ ಏರ್ಪಡಿಸಿಕೊಳ್ಳಲು ಹಾರೈಸುತ್ತಿದೆ. ಈ ಹೊಸ ಬಾಂಧವ್ಯದ ಏರ್ಪಾಡಿನಿಂದ, ಒಂದು ವೇಳೆ, ಬ್ರಿಟನಿನ ಸ್ಥಾನವು, ಮೆಡಿಟರೇನಿಯನ್ನಿನಲ್ಲಿಯೂ, ದಕ್ಷಿಣ ಆಫ್ರಿಕದಲ್ಲಿಯೂ ಬಲ ಪಡಬಹುದು. ಅಂತೂ, ಅವರವರಿಗೆ ಅವರವರ ಆದಾಯದ ಯೋಚನೆಯೇ ಮುಖ್ಯ. ಅದಕ್ಕಿನ್ನು ಈ ಸ್ಯಾಂಕ್ಶನಿನ ತೆರೆಮರೆ ಯನ್ನು ಕದಲಿಸಿಬಿಟ್ಟರೆ ಎಲ್ಲರಿಗೂ ಸೌಖ್ಯ!

* * * * *

ನಮ್ಮ ಕೆಲವು ಉಚ್ಚಾಧಿಕಾರಿಗಳಿಗೂ 'ತತ್ವಜ್ಞಾನ ಶಾಸ್ತ್ರ'ದಲ್ಲಿ

ತಲೆಯುಂಟೆಂಬುದು, ಈಗೀಗ, ಕೆಲವು ಮಟ್ಟಿಗೆ ನಿದರ್ಶನಕ್ಕೆ ಬರುತ್ತಿದೆ. ಈ ಅನರ ಉಪದೇಶದ ಉದ್ದೇಶವು, ಆ ಶಾಸ್ತ್ರದ ತಿಳುವಳಿಕೆಯನ್ನು ಪ್ರಪಂಚದಲ್ಲಿ ಹಬ್ಬಿಸುವುದೋ ಅಥವಾ ಸ್ವಕಾರ್ಯವನ್ನು ಸಾಧಿಸುವುದೋ ಯಾವುದೇ ಆದರೂ, ನಮ್ಮ ಬರ್ಮದ ಗವರ್ನರರು ಏನೋ, ರಂಗೂನ್ ಮುನಿಸಿ ಪಾಲಿಟಿಯ ಮಾನಪತ್ರಕ್ಕೆ ಉತ್ತರ ಕೊಡುವಾಗ, ಬರ್ಮಿಯರಿಗೆ 'ತತ್ವಜ್ಞಾನ'ದ ಸ್ಪರ್ಶವಿರುವ ಒಂದು ಉಪದೇಶನವನ್ನು ಹೊಡೆದೇ ಬಿಟ್ಟರು. 'ಪ್ರಾಪಂಚಿಕ ವಿಚಾರದ ಅಭಿವೃದ್ಧಿಗಾಗಿ ಯತ್ನಿಸುವ ಆತುರದಲ್ಲಿ, ಬರ್ಮದ ಅಮೂಲ್ಯ ಸಾರ್ವಜನಿಕ ಜೀವನದ ಗುಣನಡತೆಗಳು ನಷ್ಟವಾದಲ್ಲಿ, ಮುಂದೆ ಅದು ಒಂದು ಶೋಕ ಮಯ ಘಟನೆಯಾಗಿ ಪರಿಣಮಿಸುವುದು. ಆಗ ಬರ್ಮವು ಬಹಳ ಅಪಾಯದಲ್ಲಿ ಬೀಳಬೇಕಾದೀತು'. ಕೆಲವು ಸಮಯದ ಹಿಂದೆ, ಜಟ್‌ಲ್ಯಾಂಡಿನ ವಾರ್ಕ್ಸಿಸ್ ಸಾಹೇಬರೂ, ಇದೇ ಸರಣಿಯನ್ನೇ ಅನುಸರಿಸಿ, ಬೌದ್ಧರ ಧ್ಯೇಯವಾದ ನಿರ್ವಾಣದ ಕುರಿತು, ಮನೋರಂಜಕ ವಚನಗಳನ್ನಾಡಿದ್ದರು. ಬ್ರಿಟಿಶ್ ರಾಜ ನೀತಿಜ್ಞರು, ಅಕಸ್ಮಾತ್ತಾಗಿ, ಹೀಗೆ ಏಕೆ ಬೌದ್ಧಧರ್ಮದ ಅಮೂಲ್ಯ ತತ್ವಗಳ ಬೆಲೆಯನ್ನು ಕಂಡುಹಿಡಿದು, ಅವುಗಳನ್ನು ಕೊಂಡಾಡುತ್ತ ಕುಣಿದಾಡಬೇಕೋ, ಅವರೇಕೆ ಸಾರ್ವಜನಿಕ ಜೀವನದಲ್ಲಿ ಬೌದ್ಧಮತಕ್ಕೆ ಇಷ್ಟೊಂದು ಪ್ರಾಮುಖ್ಯ ಕೊಟ್ಟು, ಪ್ರಾಪಂಚಿಕ ವಿಷಯಗಳ ಅಭಿವೃದ್ಧಿಸಾಧನೆಯಿಂದಾಗುವ ಕೆಡುಕುಗಳ ಕುರಿತು, ಬರ್ಮಿಯರಿಗೆ ತತ್ತ್ವೋಪದೇಶ ಮಾಡಲು ಹೊರಡ ಬೇಕೋ ಬಹಳ ಆಶ್ಚರ್ಯ! ನಿಜವಾಗಿಯೂ, ಬ್ರಿಟಿಶರು ಪ್ರಥಮತಃ ಬರ್ಮಕ್ಕೆ ಕಾಲಿಟ್ಟಾಗ, ಅವರೇನಾದರೂ ಬೌದ್ಧತತ್ತ್ವ ಜ್ಞಾನವನ್ನು ಹುಡುಕಿಕೊಂಡು ಬಂದವರಾಗಿರಲಿಲ್ಲವೆನ್ನುವಾಗ, ಅಮು, ಈಗ, ಏಕೆ ಹೀಗಾಗಬೇಕೋ ಯಾರು ಬಲ್ಲ?

* * * * *

ನಮ್ಮ ಮದ್ರಾಸ್ ಸರಕಾರವು

ನಮ್ಮ ಆಧಿಪತ್ಯದ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆಯನ್ನು ಗೊತ್ತುಮಾಡುವಂತೆ, ಅದನ್ನು ಎಣಿಸಿ, ಗುಣಿಸುವ 'ಸೆನ್‌ಸಸ್ಸನ್ನು' ನಡೆಯಿಸುವಂತೆ ನಮ್ಮ ಲೇಬರ್ ಕಮಿಶನರಿಗೆ ಅಪ್ಪಣೆ ಮಾಡಿದೆ ಎಂಬುದು ಸಂತೋಷದ ಸುದ್ದಿ. ಈ ಲೆಕ್ಕಾಚಾರವು ಅಗತ್ಯವೆಂಬುದಕ್ಕೆ ಪ್ರತ್ಯೇಕ ಕಾರಣಗಳನ್ನೇನೂ ಯಾರೂ ಕೊಡಬೇಕಾಗಿಲ್ಲ. ಸಪ್ರೂ ಕಮಿಟಿಯ ವರದಿಯ ಶಿಫಾರಸುಗಳೇ ಇದಕ್ಕೂ ಮೂಲವೆಂದರೆ ಸಾಕು. ಆದರೆ ಈ ಲೆಕ್ಕಾಚಾರ ಮಾಡುವಾಗ ಸೂತ್ರ, ಒಂದೆರಡು ಮುಖ್ಯಾಂಶಗಳನ್ನು ಸ್ಮರಣೆಯಲ್ಲಿರಿಸಿಕೊಳ್ಳಬೇಕಾದುದು ಅಗತ್ಯ. ಬ್ರಿಟನಿನಲ್ಲಿ, ಈ ನಿರುದ್ಯೋಗಿಗಳ ಲೆಕ್ಕಾಚಾರ ನಡೆಯಿಸುವಾಗ 'ದೀರ್ಘ ಕಾಲದಿಂದ ಕೆಲಸವಿಲ್ಲದವರು' 'ಅಲ್ಪ ಕಾಲದಿಂದ ನಿರುದ್ಯೋಗಿಗಳಾದವರು' ಎಂಬೆರಡು ತರಗತಿಗಳನ್ನೇರ್ಪಡಿಸಿಕೊಳ್ಳುತ್ತಾರೆ. ಇಲ್ಲಿಯೂ ಹಾಗೇ ವಿಭಾಗಿಸಿ ತರಗತಿಗಳನ್ನು ಮಾಡುವುದು ಕಷ್ಟಸಾಧ್ಯವಾದರೂ,—ಬ್ರಿಟನ್ ಕೈಗಾರಿಕೆಯ ಪ್ರದೇಶವಾಗಿ, ನಮ್ಮದು ಕೃಷಿಯ ಸೀಮೆಯಾಗಿರುವ ಕಾರಣ, ಬ್ರಿಟಿಸಿನಂತೆ ಅದೇ ತರಗತಿಗಳನ್ನೇ ಇಲ್ಲಿಯೂ ಮಾಡಿಕೊಳ್ಳುವುದು ವಿಶೇಷ ಫಲಕಾರಿಯಲ್ಲವಾದರೂ,—ಈ ನಿರುದ್ಯೋಗ ಪ್ರಶ್ನೆಯ ಆಮೂಲಾಗ್ರ ಪರಿಶೋಧನೆಯಾಗುವಂತೆ, ಅದಕ್ಕೆ ಅಗತ್ಯವಿರುವ ಎಲ್ಲ ಸಂಗತಿಗಳನ್ನೂ ಬಿಡದೆ ಸಂಗ್ರಹಿಸುವುದು ವಿಹಿತವಾಗಿದೆ. 'ನಿರುದ್ಯೋಗಿಗಳ ಸಂಖ್ಯೆ ಇಂತಿಷ್ಟೆ'ಂದು ಸ್ಥೂಲವಾಗಿ ನದಿಂದ, ಕೆಲವೊಂದು ಮಂದಿಯ ಲೆಕ್ಕಾಚಾರವನ್ನು ಬರೆದ ಮಾತ್ರಕ್ಕೇ, ಈ ಸಮಸ್ಯೆಯ ನಿಜವಾದ ಪ್ರಮಾಣವು ಗೊತ್ತಾಗುವುದೂ ಇಲ್ಲ; ಅದಕ್ಕೆ ತಕ್ಕ ನಿವಾರಣೋಪಾಯಗಳನ್ನು ಕಲ್ಪಿಸುವುದು ಅದಷ್ಟು ಸುಲಭವೂ ಅಲ್ಲ. ಆದುದರಿಂದ, 'ಅಲ್ಲಿ ನಿರುದ್ಯೋಗದ ಹಾವಳಿ ಹೆಚ್ಚಿದೆ; ಇಲ್ಲಿ ಕಡಿಮೆ ಇದೆ' ಎಂಬ ಭೇದವಿಡವೆ, ನಿರುದ್ಯೋಗಿಗಳಿಲ್ಲರ ಲೆಕ್ಕಾಚಾರವೂ ಕ್ರಮವಾಗಿ ನಡೆದಲ್ಲಿ ಮಾತ್ರ, ಮುಚ್ಚಿದ ಕಣ್ಣು ತೆರೆಯುವಂತಾದೀತು.

* * * * *

'ಬಿದ್ದುದು ಪಾತಾಳವಾದರೇನಯ್ಯ? ಮೂಗಿಲ್ಲವೆ ಅಲ್ಲಿ-ನಕ್ಷತ್ರಲೋಕದಲ್ಲಿ?'

ಎಂದು ಕೆಲ ಧೀರರು ಪರಾಕ್ರಮ ಕೊಚ್ಚಿಕೊಳ್ಳುವಂತೆ, 'ಇಟೆಲಿಯ ಮೇಲಿನ ಸ್ಯಾಂಕ್ಶನುಗಳ ಸಂಸ್ಕಾರವಾಗಿ, ಸಮಾಧಿಯಾದದೂ ಏನಯ್ಯ? ನಾವು ಅಬಿಸೀನಿಯವನ್ನು ಇಟೆಲಿಗೆ ಸೇರಿಸಿಕೊಂಡಿರುವುದನ್ನು ಒಪ್ಪಿರುತ್ತೇವೆಯೋ?' ಎಂದೂ ಒಂದು ಪೌರುಷಪ್ರದರ್ಶನದ ಹಾಡೂ ಹೊರಟಿದೆ. ಇತ್ತ ಆ ಮಹಾನುಭಾವರು, ಈ ಹಾಡು ಹಾಡುತ್ತಿರುವಾಗಲೇ, ಅತ್ತ ಅಬಿಸೀನಿಯದಲ್ಲಿ ಕಥೆ ಬೇರೆಯೇ ನಡೆಯುತ್ತಿದೆ. ಸ್ಯಾಂಕ್ಶನುಗಳೆಂಬ ಏಕ ಮಾತ್ರ ಅಂಕುಶದ ವಿಸರ್ಜನೆಯಿಂದ ಧೈರ್ಯ ತಳೆದ ನಮ್ಮ ಮುಸಲೋನಿಯವರು, 'ಇನ್ನು ಮುಂದೆ ಬಿಳಿಯವರೆಲ್ಲರೂ ಇಟೆಲಿಯ ನ್ಯಾಯಶಾಸ್ತ್ರದ ಕಟ್ಟಪ್ಪಣೆಗೇ ಒಳಗಾಗಬೇಕು' ಎಂದು ಅಬಿಸೀನಿಯದ ಬೀದಿಬೀದಿ, ಕೇರಿಕೇರಿಗಳಿಗೂ ಘಂಟಾಘೋಷವಾಗಿ ತಿಳಿಸಿರುತ್ತಾರೆ. ಪಾಪ! ಅಬಿಸೀನಿಯದ ಬರ್ಬರರನ್ನು ನಾಗರಿಕರನ್ನಾಗಿ ಮಾಡಲು ಹೊರಟ ಆ ಇಟೆಲಿಯ ಪಾರುಪತ್ಯೆಯಲ್ಲಿ, ಅಲ್ಲಿನ ಕರೀ ಜನಗಳ ಸುಖಪ್ರಾರಬ್ಧವು ಹೇಗೆ ಪರಿಣಮಿಸುವುದೋ ಅದಂತಿರಲಿ—ಆ ಗೊಡವೆ 'ಜನಾಂಗಸಂಘಕ್ಕೂ ಬೇಡನನ್ನಿ,—ಕೊನೆಗೆ, ಈ ಬಿಳಿ ಜನಗಳು, ಆ ನೇಗಸ್ ಚಕ್ರವರ್ತಿಯ ಕಾಲದಲ್ಲಿ, ಉಪಾಯಾಂತರದಿಂದಲೋ, ಒತ್ತಾಯದಿಂದಲೋ ದೊರಕಿಸಿಕೊಂಡ ಅವರ ಕಷ್ಟಾರ್ಜಿತದ ಆ ಪ್ರತ್ಯೇಕ ಹಕ್ಕುಬಾಧ್ಯತೆಗಳೂ, ಇಟೆಲಿಯ ಒಂದೇ ಒಂದು ದಂಡಪ್ರಹಾರದಿಂದ ಅಳಿದುಹೋಗುವಾಗ, ಆಗಲಾದರೂ, ಜನಾಂಗಸಂಘವೇನು ಮಾಡುವುದೋ ನೋಡಬೇಕಾಗಿದೆ. ಬ್ರಿಟಿಷ್ ಸರಕಾರವಾದರೂ ಈ ವಿಷಯದಲ್ಲಿ ಪ್ರತಿಭಟಿಸಲೆಂದು ಪ್ರೊ. ಕೀತ್ ರವರು ಗಾಳಿಹಾಕುತ್ತಿದ್ದಾರೆ. ಆದರೆ ನಿಷೇಧಸೂಚನೆಯಾಗಿ, ಇದ್ದ ಸ್ಯಾಂಕ್ಶನುಗಳನ್ನೇ ತೆಗೆದುಹಾಕಿ ಕೃತಾರ್ಥವೆನಿಸಿದ ಆ ಸಂಘ, ಈಗ ಯಾವ ಮುಖದಿಂದ ಹೊಸ ನಿಷೇಧಪ್ರದರ್ಶನವನ್ನು ಹೂಡಬೇಕು? ಅಥವಾ ಹೂಡಿದರೂ, 'ಸಮುದ್ರದ ತೆರೆಗಳಲ್ಲಿಯೇ ಈಜಾಡಿ ಬಂದ' ಮುಸಲೋನಿಯವರಿಗೆ, ಈ 'ಚರಂಡಿನೀರಿನ' ಭಯುವಿದ್ದೀತೇ? ಲಕ್ಷ್ಯವಿದ್ದೀತೇ?

ರಾಮುದಾಸ ಪದ್ಮಕಾಯ ಗುಟಿಕಾ

(STERN-VIGOUR)

ಈ ಔಷಧದಲ್ಲಿ ಬಂಗಾರ, ಕಸ್ತೂರಿ, ಕೇಸರ ಮುಂತಾದ ಅಮೂಲ್ಯ ಜೀನಸುಗಳಿದ್ದು ಇದು ಮುಖ್ಯವಾಗಿ ಧಾತುವನ್ನು ಗಟ್ಟಿಮಾಡಿ ಸ್ವಪ್ನೇಂದ್ರಿಯ ಮುಂತಾದ ಧಾತು ವಿಕಾರಂಗಳನ್ನು ಗುಣಪಡಿಸಿ, ಧಾತುಸ್ತೈಂಬನ ಶಕ್ತಿಯನ್ನು ಹೆಚ್ಚಿಸಿ ರತಿಕ್ರೀಡೆಯಲ್ಲಿ ಹೆಚ್ಚಿನ ಆಹ್ಲಾದನವನ್ನು ಕೊಡುವುದು. ಅಲ್ಲದೆ ಅತ್ಯಾಚಾರದಿಂದ ಉಂಟಾದ ನಪುಂಸಕತ್ವವನ್ನು ಸಹಾ ಹೋಗಲಾಡಿಸುವದು.

ಕ್ರಯ 12 ಗುಳಿಗೆಗಳ ಬಾಟ್ಲಿ 1ಕ್ಕೆ 1—4—0.
50ಕ್ಕೆ 4—8—0.

ಇದಲ್ಲದೆ ನಮ್ಮ ಇತರ ಅನುಭವಸಿದ್ಧ ಔಷಧಗಳ ಮಾಹಿತಿ-ಪತ್ರಕಗಳನ್ನು ನಮ್ಮ ಏಜಂಟರಿಂದ ಪಡಕೊಂಡು ಅನುಭವಹೊಂದಿರಿ.

ದ. ಕ. ಜಿಲ್ಲೆಯ ಎಲ್ಲಾ ಪ್ರಮುಖ ಊರುಗಳಲ್ಲಿ ನಮ್ಮ ಏಜಂಟ್ಕರಿರುವರು.

ತಯಾರಿಸುವವರು:—
ರಾಮುದಾಸ ಕೆಮಿಕಲ್ ವರ್ಕ್ಸ್, ಹುಬ್ಬಳ್ಳಿ.
ಜಿಲ್ಲಾ ಏಜಂಟರು:—
ಮಲ್ಲಾಪುರ ಕಂಪೆನಿ, ಲಿಮಿಟೆಡ್, ಹೊಸಗದ್ದೆಕೇರಿ, ಮಂಗಳೂರು.

INSURE WITH
CONFIDENCE
IN
INDIA
EQUITABLE
THE BEST
Life Office of its Age.
(Estd: 1908).
INDIA EQUITABLE INSURANCE CO. LTD. CALCUTTA.

The MAN behind the RUPEE

is a power to be reckoned with in every phase of modern life. People incline to pay respectful attention to the person who is powered with a bulky

BANK ACCOUNT

What you amount to in the eyes of others depends a good deal on how much capital you are believed to have or how much you can produce if occasion requires.

Create and substantiate a good impression by opening an account in

CANARA BANK
LIMITED.

ವಿದೇಶ

ಈಗಿರುವ ವಿದ್ಯಾ ಮತ್ತೂ ವೈದ್ಯಕೀಯ ಸಂಸ್ಥೆಗಳಿಗೂ, ಹೊಸ ದಾಗಿ ಏರ್ಪಡುವ ಅವೇ ಸಂಸ್ಥೆಗಳಿಗೂ, ಅಫಘಾನ್ ಅರಸರಾದ ಮಹಮ್ಮದ್ ಜಾಹಿರ್ ಷಾರವರು, ೪ ಲಕ್ಷ ಆಫಘಾನಿ ದ್ರವ್ಯವನ್ನು—೧,೧೨,೦೦೦ ರೂಪಾಯಿಗಳನ್ನು—ದಾನ ಮಾಡಿರುವರು. ಅಲ್ಲಿನ ಮಾತೋಶ್ರೀ ಮಹಾರಾಣಿಯವರು ಇದಕ್ಕಾಗಿ ೧ ಲಕ್ಷ ೨೦ ಸಾವಿರ ಆಫಘಾನಿಯನ್ನೂ ಅಫಘಾನ್ ನ್ಯಾಶನಲ್ ಬೇಂಕ್ ೧ ಲಕ್ಷ ೬೦ ಸಾವಿರ ಆಫಘಾನಿಯನ್ನೂ ಉಚಿತವಾಗಿ ಕೊಟ್ಟಿದೆ.

ಫ್ರಾನ್ಸಿನಲ್ಲಿ ಮುಷ್ಕರವೇನೋ ಮುಗಿದಿದೆಯಾದರೂ, ಇನ್ನೂ ೧॥ ಲಕ್ಷ ಮಂದಿ ಮುಷ್ಕರ ಹಿಡಿದೇ ಇದ್ದಾರೆ.

ಜಿನೋವದಲ್ಲಿ ಜನಾಂಗ ಸಭೆ ಸೇರಿದೆ. ಎಲ್ಲ ದೇಶಗಳ ಪ್ರತಿನಿಧಿಗಳೂ ಸೇರಿದ್ದಾರೆ. ಹಲವು ಸಂಗತಿಗಳನ್ನಾಲೋಚಿಸುತ್ತಿದ್ದಾರೆ. ಚಕ್ರವರ್ತಿ ನೇಗಸರೂ ಇಂಗ್ಲೆಂಡಿನಿಂದ ಅಲ್ಲಿಗೆ ತೆರಳಿದ್ದಾರೆ. ಆದರೆ ಅವರಿಗೆ ದೊರೆಯುವ ಲಾಭವೆಂದರೆ ಬಾಯುಪಚಾರವೇನೋ! ಮುಖ್ಯ ಬಿಳಿ ಜನಾಂಗಗಳ ಶಾಂತಿರಕ್ಷಣೆಗಾಗಿ, ಮುಂತಿನ ಪರಸ್ಪರ ಸ್ನೇಹಾಚಾರಕ್ಕಾಗಿ ಅಲ್ಲಿ ರಾಷ್ಟ್ರಗಳೊಳಗೆ ಮಾತುಕಥೆ ನಡೆಯಬಹುದು. ಇನ್ನು ಇತಿ ಲಿಗೂ, ಇತರ ಬಿಳಿ ಜನಾಂಗಗಳಿಗೂ ಮನಸ್ತಾಪವಿಲ್ಲದಂತೆ ಯಾವತ್ತೂ ಏರ್ಪಾಡುಗಳಾಗಬಹುದು.

ಪಾಲೆಸ್ತೈನ್ ಪ್ರಾಂತದಲ್ಲಿ ಗಲಭೆ ತಪ್ಪಿಲ್ಲ. ಅರಬರ ಹಾವಳಿ ಕಡಿಮೆಯಾಗಿಲ್ಲ. 'ಅಲ್ಲಿ ಟ್ಯೆನು ಉರುಳಿಸಿದರು; ಇಲ್ಲಿ ಕೈಕೈಯಾಯಿತು' ಎಂಬ ವಾರ್ತೆಗಳೇ. ಸಾಯುವವರು ಹೆಚ್ಚಾಗಿ ಅರಬರು. ಈ ಪೆಂಗೆಯ ಗಾಳಿ ಟ್ರಾನ್ಸ್‌ಜೋರ್ಡನ್ ಪ್ರಾಂತಕ್ಕೂ ಹರಡಬಹುದಾ ಹರೂ, ಬ್ರಿಟಿಷರಲ್ಲಿ ಸಿದ್ಧರಾಗಿಯೇ ಇದ್ದಾರೆ.

ಕರ್ನಾಟಕ

ಕೊಡಗಿನ ಕಾಫೀ ಪ್ಲಾಂಟರರ ಸಹಾಯಾರ್ಥವಾಗಿ, ಇಂಡಿಯಾ ಸರಕಾರವು ೭ ಲಕ್ಷ ರೂಪಾಯಿಗಳಷ್ಟೊಂದು ಸಾಲವನ್ನು ಕೊಡಲು ನಿರ್ಧರಿಸಿದೆ. ಇದಕ್ಕೆ ವರ್ಷಕ್ಕೆ ಬಡ್ಡಿ ಸೇಕಡ ೪ರ ಸಲೆ; ೫ ವಾರ್ಷಿಕ ಕಂತುಗಳಲ್ಲಿ ಸಾಲವನ್ನು ಹಿಂದಿರುಗಿಸಬೇಕು. ಎಕ್ರೆಯೊಂದಕ್ಕೆ ೪೬ ರೂಪಾಯಿಗಳ ಸಾಲ ದೊರಕುತ್ತದೆ. ಆದರೆ ಕಾಫೀ ತೋಟಗಳ ಮೇಲೆ ಇತರ ಸಾಲದ ಬಾಧೆಗಳಿರಕೂಡದೆಂಬ ಶರ್ತವಿರುವ ಕಾರಣ, ಇದರಿಂದ ಸಾಮಾನ್ಯ ಕಾಫೀ ಪ್ಲಾಂಟರರಿಗೆ ಸಹಾಯವಾಗದೆಂದು ಕೊಡಗಿನಲ್ಲಿ ಹಲವರ ಮತ.

ಸೊಂಡೂರಿನಲ್ಲಿ ಕೋವೀಮದ್ದು ಸಿಡಿದು ಇಬ್ಬರಿಗೆ ತುಂಬ ಪೆಟ್ಟಾಗಿದೆ.

ಧಾರವಾಡ ಬೇಂಕಿನಲ್ಲಿ ಸುಮಾರು ೨,೫೦೦ ಸಾವಿರ ರೂಪಾಯಿಗಳ ದುರುಪಯೋಗವಾಗಿದೆ ಎಂದು, ಕೆಲವು ಮಂದಿ ಡೈರೆಕ್ಟರರೇ ಆದಿಯಾಗಿ ೭—೮ ಮಂದಿಯ ಮೇಲೆ ಹೂಡಲಾದ ಒಂದು ಕ್ರಿಮಿನಲ್ ಮೊಕದ್ದಮೆ ಈಗ ಧಾರವಾಡ ಅಸಿ॥ ಸೆಶನ್ಸ್ ಜಡ್ಜರಲ್ಲಿ ವಿಚಾರಣೆಗಾರಂಭಿಸಿದೆ.

ಬೆಂಗಳೂರ ಬಳಿಯಲ್ಲಿ ಲೇಬರ್ ಕೊಲನಿಯನ್ನು ಸ್ಥಾಪಿಸಲಾಯಿತು. ಇದರ ವಿಸ್ತೀರ್ಣ ೧೮ ಎಕ್ರೆ. ಇದನ್ನು ಕೊಳ್ಳಲು ಸುಮಾರು ೨೮ ಸಾವಿರ ರೂಪಾಯಿಗಳು ತಗುಲಿತು. ಈಗ ಅಲ್ಲಿ ೭೫೦ ಮನೆಗಳನ್ನು ಕಟ್ಟಲಾಗಿದೆ. ಒಂದೊಂದು ಮನೆಗೂ ಬೆಂಗಳೂರು ಸಿಟಿ ಮುನಿಸಿಪಾಲಿಟಿಗೆ ತಗುಲಿದ ನೆಚ್ಚ ರೂ. ೪೨೦. ಒಟ್ಟು ವೆಚ್ಚ ರೂ. ೧ ಲಕ್ಷ ೫ ಸಾವಿರ. ಇಲ್ಲಿ ಇನ್ನು ಶಾಲೆ, ಆಸ್ಪತ್ರೆ, ಆಟದ ಬಯಲು, ವಾಚನಾಲಯ ಮೊದಲಾದುವುಗಳಿಗಾಗಿ ಏರ್ಪಾಡಾಗಲಿದೆ. ನೀರಿನ ನಲ್ಲಿ, ವಿದ್ಯುಚ್ಛಕ್ತಿಯ ದೀಪ ಇವುಗಳನ್ನಾಗಲೇ ಒದಗಿಸಲಾಗಿದೆ. ಸರ್. ಎಮ್. ಇಸ್ಮಾಯೇಲ್, ಮೈಸೂರ್ ದಿವಾನ್, ಇದರ ಆರಂಭೋತ್ಸವವನ್ನು ನೆರವೇರಿಸಿದರು.

ತುಂಗಭದ್ರಾ ನದಿಯ ಯೋಜನೆಯ ಸಂಬಂಧ, ಮೈಸೂರು, ಮದ್ರಾಸ್, ಹೈದರಾಬಾದು ಸರಕಾರಗಳು ಪ್ರತ್ಯೇಕ ಸಿಬಂದಿಯನ್ನು, ೭—೮ ತಿಂಗಳುಗಳ ವರೆಗೆ ನೇಮಿಸಿದೆ.

ತಾಲೂಕು ವರ್ತಮಾನ

ಫಲಿವಾರು:—ಸ್ಥಳೀಯ ಹಾ॥ ಎ॥ ಶಾಲಾ ಸಹಾಯಕ ಉಪಾಧ್ಯಾಯರಾದ ರಾ. ಆ॥ ಮಂಜಯ್ಯ ಸೆಟ್ರುನ್ನು ಇಲ್ಲಿಂದ ಶಂಕರ ನಾರಾಯಣಕ್ಕೆ ವರ್ಗಾಯಿಸಲಾಗಿದೆ. ಶ್ರೀಯುತರು ಊರಿನವರ, ಮಠಾಧಿಪತಿಗಳ ಹಾಗೂ ವಿದ್ಯಾರ್ಥಿ-ವಿದ್ಯಾರ್ಥಿನಿಯರ ತುಂಬಾ ಪ್ರೀತಿಗೆ ಪಾತ್ರರಾಗಿದ್ದರು. ಅದ್ದರಿಂದ ಮಾನ್ಯ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರು ಇವರನ್ನು ಇಲ್ಲಿಯೇ ಇಡುವಂತೆ ಏರ್ಪಡಿಸಿದ್ದರೆ ದೊಡ್ಡ ಉಪಕಾರವಾಗುತ್ತಿತ್ತು.

ಬಂಟ್ವಾಳ ಮೂಡೆ:—ಇಲ್ಲಿಯ 'ಹಯಾತುಲ್ ಇಸ್ಲಾಂ' ಮುಡರಸ್ಸಿನವರು, ಮುಸ್ತಫಾ ನಾಯಕರ (ಸ. ಆ.) ಜನ್ಮದಿನೋತ್ಸವವನ್ನು ತಾ. ೩೦—೬—'೩೬ನೇ ಶನಿವಾರ ದಿನ ಮದ್ರಸಾ ವರಾಂಡದಲ್ಲಿ ಹಾಜಿ ವಿ. ಎಚ್. ಅಬ್ದುಬಕರ್ ಮುಸ್ಲಿಯಾರರ ಅಧ್ಯಕ್ಷತೆಯಲ್ಲಿ ಬಹು ಆಡೋಪದಿಂದ ನೆರವೇರಿಸಿದ್ದರು.

ಜೈಕಂಪಾಡಿ:—ಕಲ್ಲಡ್ಕ ದಿ ಮುಸ್ಲಿಂ ಜಮಾತ್ ಐಕ್ಯ ಸಂಘದ ಒಂದು ಶಾಖೆಯು ಇಲ್ಲಿ ತಾ. ೧—೭—'೩೬ನೇ ದಿನ ಖಾಯಂ ಅಧ್ಯಕ್ಷರಿಂದ ತೆರೆಯಲ್ಪಡುತ್ತದೆ.

ಇಲ್ಲಿಯ ಮುಂಡಿಯ ಮೂಡಲಾಗಿ ವ.ಹಮ್ಮದ್ ಶಾಲಿಹ್ ಮಹಬೀದಿ ವರಾಂಡದಲ್ಲಿ ಹತ್ತಾರು ಕೊಂಬೆಗಳಿರುವ ಒಂದು ತಾಳಿಮರವಿರುವುದು. ಇದು ಅದ್ಭುತವೂ ಆಶ್ಚರ್ಯವೂ ಆಗಿರುವದರಿಂದ ನೋಟಕರು ಯಾವಾಗಲೂ ಒಂದು ಕಾಣಬಹುದು.

ಭಾರತೀಯ ಚಾ

ಸೇವನೆಯು ಕೆಲಸಮಾಡಲಿಕ್ಕೆ ಚುರುಕನ್ನೂ, ಶಕ್ತಿಯನ್ನೂ ಕೊಡುವುದು.



ಸರಿಯಾಗಿ ತಯಾರಿಸಿದ ಒಂದು ಬಟ್ಟಲು ಭಾರತೀಯ ಚಾವಿಗಿಂತ, ದೇಹಾಲಸ್ಯವನ್ನು ಹೋಗಲಾಡಿಸುವ ಪಾನ ಮತ್ತೊಂದೂ ಇಲ್ಲ. ಚಾ ಪಾನ ಮಾಡುವವರಿಗೆಲ್ಲಾ ಚುರುಕಾಗಿಯೂ ರಭಸದಿಂದಲೂ ಕೆಲಸಮಾಡಲು ಸಹಾಯಕರವಾದುದು ಚಾ ಎಂಬುದು ಗೊತ್ತಿದೆ. ಆಯಾಸವನ್ನು ಹೋಗಲಾಡಿಸಿ, ದೇಹಕ್ಕೆ ಅಮೃತವನ್ನು ಸೇವಿಸಿದ ಫಲವನ್ನು ಕೊಡುವುದು. ಆದುದರಿಂದ ಭಾರತೀಯ ಕೆಲಸಗಾರರಿಗೆಲ್ಲಾ ಚಾ ಒಂದು ನಿಧಿಯಾಗಿದೆ. ಕುಡಿಯುವವರಿಗೆ ಅದು ಆನಂದಭರಿತವಾದುದು ಮತ್ತು ದೇಶಭಕ್ತರ ಹೆಮ್ಮೆಗೆ ಒಂದು ಕಾರಣ.

ಚಾ ತಯಾರಿಸುವ ವಿಧಾನ:—

ನಿರ್ಮಲವಾದ ನೀರನ್ನು ಕಾಸಿ ಶುಚಿಯಾದ ಒಂದು ಪಾತ್ರೆಯನ್ನು ಬೆಚ್ಚಗೆಮಾಡಿ. ಅದರಲ್ಲಿ ತಲಾ ಒಬ್ಬರಿಗೊಂದು ಚಮಚ, ಕೊಸರಿಗೊಂದು ಚಮಚ ಉತ್ತಮವಾದ ಭಾರತೀಯ ಚಾಸೊಪ್ಪನ್ನು ಹಾಕಿ ನೀರು ಚೆನ್ನಾಗಿ ಕುದಿದ ಮೇಲೆ ಅದರ ಮೇಲೆ ಬಿಡಿ. ಐದು ನಿಮಿಷಗಳಾದ ಮೇಲೆ ಬಟ್ಟಲುಗಳಲ್ಲಿ ಹಾಕಿ ಹಾಲು ಸಕ್ಕರೆ ಬೆರಸಿ ಸೇವಿಸಿ.

ಹಿಂದೂದೇಶದ ಆನಂದ ಮತ್ತು ಹೆಮ್ಮೆ - ಭಾರತೀಯ ಚಾ

J. K. 23

ಕುಡಿಯಿರಿ! ಕುಡಿಯಿರಿ!!

ಕಣನ್ ದೇವನ್ ಟೀ

ಚಹಾ ರಾಜಾ

ಪರಿಶುದ್ಧತೆಯ ಗುರುತಿಗಾಗಿ ಈ ಪೆಟ್ಟಿಯಲ್ಲಿ ಇದೆ ಎಂಬುದನ್ನು ನೋಡಿ

ಮಹಾಜನರಿಗೆ ಮೆಚ್ಚಿಯಾದ ಚಹಾ.

SOLE S. K. AGENTS:

THE KERALA TEA SYNDICATE,

PONANI-MALABAR.

DIAMONDS! DIAMONDS!
BEST BRILLIANCY!

K. R. K. SHET,

Near Mission High School, MANGALORE.

ಮಂಗಳೂರಿನ ಪ್ರಸಿದ್ಧ ವಜ್ರ ವ್ಯಾಪಾರಿ!

ವಜ್ರಗಳು! ಎಮ್‌ಸ್ಟ್ರೈಡಮ್ಮಿನಿಂದ ಬರುವ ವಜ್ರಗಳು ಬಜಾರ ಧಾರಣೆಗಿಂತ ಐದು ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ.

ನಮ್ಮಲ್ಲಿ ಬಂದು ಸ್ವತಾಃ ಪರೀಕ್ಷಿಸಿ ನೋಡಿದಲ್ಲಿ ನಮ್ಮ ವಜ್ರಗಳ ಉತ್ಕೃಷ್ಟ ಚುನಾವಣೆಯೂ, ಸಲ್ಲಕ್ಷಣಗಳೂ ತಾನಾಗಿಯೇ ತಿಳಿದುಬರುವವು.

ನಿಮಗೆ ಬೇಕಾದುದನ್ನು ಏನೊಂದೂ ಹಂಗಿಲ್ಲದೆ ಪರೀಕ್ಷಿಸಿ ನೋಡಿರಿ. ಆಗ ತಾನೇ ನಿಮಗೆ ಖಚಿತವಾಗುವುದು.

ನಮ್ಮ ಒಂದು ಬ್ರಾಂಚು ಇತ್ತೀಚೆಗೆ ಹಂಪನಕಟ್ಟೆಯಲ್ಲಿ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್, ಜುವೆಲ್ಲರ್,
ಮಿಶ್ಶನ್ ಹೈ ಸ್ಕೂಲ್ ಬಳಿ, ಮಂಗಳೂರು.

ಅಪೂರ್ವ ಲಾಭ! ಒಳ್ಳೇ ಸಮಯ!! ತೀರಾ ಬೆಲೆ ಕಡಿಮೆ!!!

ಜಾತಕ ಪತ್ರಿಕೆ.

ಕ್ರಯ ರೂ. ೨-೦-೦.

ತಮ್ಮ ತಮ್ಮ ಮನೆಯಲ್ಲಿ ಜನಿಸಿರುವ ಬಾಲಕರ ಹುಟ್ಟಿದ ಸಂವತ್ಸರ, ಮಾಸ, ತಿಥಿ, ವಾರ, ಜನನವೇಳೆಯನ್ನು ಬರೆದು ಕಳಿಸಿದರೆ ನಾವು ಜನನ ಕಾಲವನ್ನು ಸ್ಥಿರ ಮಾಡಿಕೊಂಡು ಜನ್ಮಲಗ್ನ ಕುಂಡಲಿ ಅಂಶಕುಂಡಲಿ ದಶಸಿರ್ಣಯ ಮೊದಲಾದ ಗಣಿತಗಳನ್ನು ಮಾಡಿಕೊಂಡು ಮೊಗುವಿಗೆ ನಕ್ಷತ್ರ ದೋಷ, ಬಾಲಾರಿಷ್ಟ ದೋಷವನ್ನು ಶೋಧಿಸಿ, ಇದ್ದರೆ ಶಾಂತಿಮಾಡುವ ಕ್ರಮ, ಮೊಗುವಿಗೆ ಜನನಾದಿಯಾಗಿ ಆಯುಷ್ಯದ ವರಿಗೂ ಇಪ್ಪಿಪ್ಪತ್ತೇ ವರುಷಗಳಲ್ಲಿ ಉಂಟಾಗುವ ಬಾಲಾರಿಷ್ಟ ನೈಲಿ ದಡಾರ ಮುಟ್ಟುದೋಷ ಕಾಮಿಲೆ ಯಾವತ್ತು ಪೀಡೆಗಳ ವಿಷಯವನ್ನು ಯಾವ ಮೂಲಕ ಉಂಟಾಗುವ ಕಂಟಕಗಳ ವಿಷಯವನ್ನು ತಂದೆ ತಾಯಿಗೆ ಉಂಟಾಗುವ ಪೀಡೆ ವಿಷಯವನ್ನು ಬರೆದು ಜಾತಕ ಪತ್ರಿಕೆಯನ್ನು ತಯಾರುಮಾಡಿ ಕಳಿಸುತ್ತೇವೆ. ಪ್ರತಿ ಒಬ್ಬರು ತಮ್ಮ ತಮ್ಮ ಮಕ್ಕಳ ಜಾತಕ ಪತ್ರಿಕೆಯನ್ನು ಬರೆಯಿಸಿ ಮನೆಯಲ್ಲಿ ಇಟ್ಟುಕೊಂಡರೆ ಮುಂದೆ ಆ ಮಕ್ಕಳ ವಿವಾಹ ಮುಂತಾದ ಸಮಸ್ತ ಕಾರ್ಯಗಳಿಗೆ ಬಹಳ ಅನುಕೂಲವಾಗುತ್ತೆ. ಪ್ರತಿ ಒಬ್ಬರು ತಮ್ಮ ಮಕ್ಕಳಿಗೆ ಬರೆಯಿಸಿ ಇಟ್ಟುಕೊಳ್ಳುವ ದೆಶೆಯಿಂದ ಚಾರ್ಜನ್ನು ಬಹಳೇ ಕಡಿಮೆ ಇಟ್ಟಿರುತ್ತದೆ. ಅಲ್ಲದೆ ಈ ಜಾತಕ ಪತ್ರಿಕೆಗಳಿಂದ ಬಂದ ಹಣದಲ್ಲಿ ಕೆಲವು ಭಾಗ ಹಣವನ್ನು ಇಲ್ಲಿ ಸ್ಥಾಪಿಸಿರುವ ಶ್ರೀ ಪಂಚಮ ಜಾರ್ಜ ಸ್ಮಾರಕದ ಪಾಠಶಾಲಾಕ್ಕೆ ಏರ್ಪಡಿಸಿರುತ್ತೇವೆ. ಬಾಲಕರ ಎಲ್ಲಾ ಪೀಡೆಗಳ ಪರಿಹಾರದ ಉದ್ಧರಣೆಯನ್ನು ಕ್ರಯವಿಲ್ಲದೆ ಕಳಿಸುತ್ತೇವೆ. ಉದ್ಧರಣೆ ಸಹಿತ ಜಾತಕ ಪತ್ರಿಕೆಗೆ ಚಾರ್ಜು ರೂ. ೨—೦—೦.

ವಿಳಾಸ:— ಮೇನೇಜರ್,
ಟಿ. ಹೆಚ್. ಎಂ. ಅಂಡು ಕೊ.,
ಹರಪನಹಳ್ಳಿ, ಜಿಲ್ಲಾ ಬಳ್ಳಾರಿ.

ಪ್ರತ್ಯಕ್ಷಫಲ ಪಂಚ ಸಿದ್ಧಿ

ಇದು ರಾಯಚೂರು ಭೀಮಾವಧೂತರು

ಶ್ರೀ ಕಾಶೀ, ಗಯಾ, ಪ್ರಯಾಗ, ಹರಿದ್ವಾರ, ಬದ್ರಿನಾರಾಯಣ, ದ್ವಾರಕಾ, ಅಯೋಧ್ಯಾ, ಜಗನ್ನಾಥ ಇನ್ನೂ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ಅಲ್ಲಲ್ಲಿ ಇರುವ ಸಾಧು, ಸನ್ಯಾಸಿ, ಗೋಶಾಯಿ ಋಷಿಗಳೊಡನೆ ಭೆಟ್ಟಿಯಾಗಿ ಅವರ ಕಡೆಯಿಂದ ಅನುಭವ ತೆಗೆದು ಪ್ರತಿವಂದು ಸಿದ್ಧಿ ಮಾಡಿಕೊಂಡು ಬರೆದಿರುವರು.

೧-ನೇದು ಮಂತ್ರ ಪ್ರಕರಣದಲ್ಲಿ ಮಂತ್ರ ಪಠನದಿಂದಲೂ ಮಂತ್ರ ಪ್ರಯೋಗದಿಂದಲೂ ಎಲ್ಲಾ ದೇವಾನುದೇವತೆಗಳ ಪ್ರತ್ಯಕ್ಷವಾಗುವದಕ್ಕೆ ಸಿದ್ಧಿಮಾಡಿಕೊಳ್ಳುವ ಕ್ರಮವೂ ಇದೆ.

೨-ನೇದು ತಂತ್ರ ಪ್ರಕರಣದಲ್ಲಿ ದ್ರವ್ಯಪ್ರಾಪ್ತಿ, ಆಸನದಡಿಯಲ್ಲಿ ರೂಪಾಯಿಗಳು ಹೊರಡುವಿಕೆ, ಬೆಳ್ಳಿಯನ್ನು ಮಾಡುವದು, ವ್ಯಾಪಾರ ವೃದ್ಧಿ, ದಾರಿದ್ರ್ಯ ನಿವಾರಣ, ಇನ್ನು ನೂರಾರು ವಿಷಯಗಳು ಇದರಲ್ಲಿ ಅಡಕವಾಗಿರುತ್ತವೆ. ಅದನ್ನು ಸಿದ್ಧಿಮಾಡಿಕೊಳ್ಳುವ ವಿವರವೂ ಇದೆ.

೩-ನೇದು ಜ್ಯೋತಿಷ್ಯ ಪ್ರಕರಣದಲ್ಲಿ ಪ್ರತಿಯೊಂದು ಜ್ಯೋತಿಷ್ಯದಲ್ಲಿ ಯಾವದು ನಿಶ್ಚಯವಾಗಿರುವದೋ ಮತ್ತು ಕೆಲವು ಪ್ರಶ್ನೆಗಳು ಸಹ ಅದನ್ನೂ ಅನುಭವ ತೆಗೆದುಕೊಂಡು ತಿಳಿಸಿರುವರು.

೪-ನೇದು ಔಷಧ ಪ್ರಕರಣದಲ್ಲಿ ಯಾವಯಾವ ಗಿಡಮೂಲಿಕೆಗಳಿಂದ ಯಾವಯಾವ ರೋಗಗಳಿಗೆ ಕೊಡತಕ್ಕದ್ದೋ ಅವುಗಳನ್ನೇ ಅನುಭವ ತೆಗೆದುಕೊಂಡು ತಿಳಿಸಿರುವರು. ಮತ್ತು ಭಾವಾವೇಶಗಳ ಚುಟ್ಟುಸಹ ಇದರಲ್ಲಿ ಉಂಟು. ಇದು ಪ್ರತಿವಂದು ಕುಟುಂಬದಲ್ಲಿ ಉಂಟಾಗುವ ಯಾವತ್ತು ರೋಗಗಳಿಗೂ ಸುಲಭವಾಗಿ ಔಷಧ ಮಾಡುವ ಕ್ರಮವನ್ನು ಚನ್ನಾಗಿ ಬರದು ಇರುತ್ತದೆ ಮತ್ತು ಗಿಡಮೂಲಿಕೆಗಳು ಸಿಗುವ ಸ್ಥಳವು ಅವರ ವಿಳಾಸವು ತಿಳಿಸಿರುವರು.

೫-ನೇದು ಯಂತ್ರಪ್ರಕರಣದಲ್ಲಿ ವಶೀಕರಣ, ಗ್ರಹಪೀಡಾ ನಿವಾರಣ, ಭೂತ, ಪ್ರೇತ, ಪಿಶಾಚ, ಬ್ರಹ್ಮರಾಕ್ಷಸ, ವಗೈರೆ ನಿವಾರಣಾಗುವ ಯಂತ್ರಗಳನ್ನು ಅನುಭವ ತೆಗೆದುಕೊಂಡು ಇದರಲ್ಲಿ ತಿಳಿಸಿರುವರು. ಇದಲ್ಲದೆ ಇನ್ನೂ ಅನೇಕ ವಿಧವಾದ ಅಪೂರ್ವ, ಆಶ್ಚರ್ಯ, ಅದ್ಭುತ ವಿಷಯಗಳನ್ನು ಬರೆದಿರುವರು. ಈ ಗ್ರಂಥವು ಹತ್ತರ ಇದ್ದ ಬಳಿಕ ಎಲ್ಲಾ ದೇವಾನುದೇವತೆಗಳೂ, ದ್ರವ್ಯಗಳೂ ವೈದ್ಯರೂ, ಜ್ಯೋತಿಷ್ಯರೂ, ಮಾಂತ್ರಿಕರೂ, ತಾಂತ್ರಿಕರೂ ಮನೆಯೊಳಗೆ ಇದ್ದ ಹಾಗೆ ಆಗುತ್ತದೆ. ಇಂಥಾ ಗ್ರಂಥವು ಯಾರೂ ಕಣ್ಣಿನಿಂದ ನೋಡಿರಲಿಕ್ಕಿಲ್ಲಾ. ಪ್ರತಿವಬ್ಬರು ತರಿಸಿ ನೋಡಬೇಕೆಂದು ಇದರ ಬೆಲೆ ತೀರಾ ಕಡಿಮೆ ಮಾಡಿ ಇರುವೆವು. ಬೆಲೆ ಎರಡು ರೂಪಾಯಿ, ಟಪಾಲು ಹಾಸಲು ಸೇರಿ. ಸಮ್ಮ ವಿಳಾಸ:—

ಕೆ. ಸುಬ್ರಮಣ್ಯ ಪ್ರಭು,
ಶ್ರೀ ವೆಂಕಟೇಶ್ವರ ಬುಕ್ ಡಿಪೋ, ಬಳ್ಳಾರಿ.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ



ಡಿ. ಗೋಪಾಲಾಚಾರ್ಯರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಸ್ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರವ್ಯಾಧಿಗಳಿಗೂ ಸಿದ್ಧೌಷಧವು. ವ್ಯಾಧಿಗಳ ವಿಷಯವನ್ನು ತಿಳಿಸಿದರೆ ಉತ್ತಮ ಸಲಹೆಯಿಂದ ಗುಣಮಾಡಲ್ಪಡುವುದು.

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು:—**ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.**

ಮೈಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರರು:—**ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.**

ಮುದ್ದಾದ ಈ ಮಗು ಇದ್ದುದು ಹೀಗೆ!

ನರಳುತ್ತಿದ್ದ ಮಗುವನ್ನು ಅಕಸ್ಮಾತ್ತಾಗಿ ಸುಂದರವಾಗಿ ಮಾರ್ಪಡಿಸಿದೆ.

ಈ ಸಾಬೂನು ವಿಷಹರವಾಗಿದೆ; ಇದರಲ್ಲಿ ಕ್ರಿಮಿದೋಷ ತಟ್ಟದ ಗುಣವಿದೆ. ಇದು ನಿರ್ಮಲಗೊಳಿಸುತ್ತದೆ. ಕಜ್ಜಿ, ತುರಿಕಜ್ಜಿಗಳನ್ನು, ವಿರೂಪದ ಕೆಟ್ಟ ಮೊಡವೆಗಳನ್ನು, ಚರ್ಮದ ಇತರ ತೊಂದರೆಗಳನ್ನೂ ಪರಿಹರಿಸುತ್ತದೆ.

ಜೌಲ್‌ಮುಗ್ರಾ ಎಣ್ಣೆಯಿಂದ ಕೂಡಿದೆ. ಅತಿ ಮೃದುವಾದ ಚರ್ಮದ ಮೇಲಾದರೂ ಇದನ್ನು ಉಪಯೋಗಿಸಬಹುದು.

ಚೀಫ್ ರಿಪ್ರೆಸೆಂಟೇಟಿವ್:—
ಆರ್. ಸಿ ದಲಾಲ್,
ಕಲ್ಲಿಕೋಟೆ.

ದಿ ಸೌತ್ ಇಂಡಿಯಾ ಕೋ-ಒಪರೇಟಿವ್ ಇನ್‌ಶೂರೆನ್ಸ್ ಸೊಸೈಟಿ, ಲಿಮಿಟೆಡ್.

ಮುಖ್ಯ ಕಚೇರಿ:—**ಮದ್ರಾಸು. ಪೋಸ್ಟು ಬಾಕ್ಸ್ ನಂಬ್ರ 182.**

ಜೀವವಿಮೆಯ ಉತ್ಕೃಷ್ಟ ಪ್ರಯೋಜನಗಳನ್ನೆಲ್ಲ ಕೊಡುತ್ತದೆ.

'ರಿಜಿಸ್ಟ್ರಾರ್ ಓಫ್ ಕೊ-ಒಪರೇಟಿವ್ ಸೊಸೈಟೀಸ್' ಇವರ ಮೂಲಕ, ಸರಕಾರದಿಂದ ಅಡಳಿತೆಯ ಮೇಲ್ವಿಚಾರವೂ ಲೆಕ್ಕದ ಪರಿಶೋಧನೆಯೂ ನಡೆಯುತ್ತದೆ.

ಪ್ರೀಮಿಯಂ ದರಗಳು ಬಲು ಕಡಿಮೆ. ಪಾಲಿಸಿಯ ಶರತ್ತುಗಳು ಅತ್ಯಾಕರ್ಷಕ.

100ರಿಂದ 5000 ರೂಪಾಯಿ ವರೆಗಿನ ಪಾಲಿಸಿಗಳು ಸ್ವೀಕರಿಸಲ್ಪಡುತ್ತವೆ. ಕಡಿಮೆ ಖರ್ಚಿನಿಂದ ಹೆಚ್ಚು ಲಾಭ.

ದಕ್ಷಿಣ ಕನ್ನಡ, ಕೊಡಗು, ಮೈಸೂರು ಸಂಸ್ಥಾನಗಳಲ್ಲಿ ಇದರ ಏಜಂಟರು ಬೇಕು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏಜಂಟರಾಗಲಿಚ್ಛಿಸುವವರು ಈ ವಿಳಾಸಕ್ಕೆ ಬರೆಯಬೇಕು:—**ಕೆ. ಶಂಕರನಾರಾಯಣ ಕಿಣಿ, ಡಿಸ್ಟ್ರಿಕ್ ಆರ್ಗನೈಜರ್, ಸೌತ್ ಇಂಡಿಯಾ ಕೋ-ಒಪರೇಟಿವ್ ಇನ್ಶೂರೆನ್ಸ್ ಸೊಸೈಟಿ, ಲಿಮಿಟೆಡ್, ಮಾರುತಿ ವೀಥಿಕಾ, ಉಡುಪಿ, (ದ. ಕ).**

ಆಯಾ ವಿಭಾಗಗಳಿಂದ ಅರ್ಜಿ ಮಾಡುವವರು ಹೆಚ್ಚಿನ ಮಾಹಿತಿಯ ಬಗ್ಗೆ ಕೆಳಗಿನ ಲೋಕಲ್ ಬೋರ್ಡುಗಳಿಗೆ ಬರೆದುಕೊಳ್ಳಬಹುದು.

(1) ಸೆಕ್ರೆಟರಿ, ಸೌತ್ ಕೆನರಾ ಸೆಂಟ್ರಲ್ ಕೊ-ಒಪರೇಟಿವ್ ಬ್ಯಾಂಕ್, ಲಿಮಿಟೆಡ್, ಮಂಗಳೂರು.

(2) ಕನ್ವೀನರ್, ಕೂರ್ಗ್ ಲೋಕಲ್‌ಬೋರ್ಡು ಓಫ್ ದಿ ಸೌತ್ ಇಂಡಿಯಾ ಕೊ-ಒಪರೇಟಿವ್ ಇನ್ಶೂರೆನ್ಸ್ ಸೊಸೈಟಿ, C/o ಕೂರ್ಗ್ ಕೋ-ಒಪರೇಟಿವ್ ಸೆಂಟ್ರಲ್ ಬ್ಯಾಂಕ್, ಲಿಮಿಟೆಡ್, ಮಡಿಕೇರಿ, ಕೊಡಗು.

(3) ವೈ. ಶ್ರೀನಿವಾಸಯ್ಯ, ಕನ್ವೀನರ್ ಮತ್ತು ಗೌರವ ಕಾರ್ಯದರ್ಶಿ, ಫೆಡರಲ್ ಕೊ-ಒಪರೇಟಿವ್ ಯೂನಿಯನ್ ಓಫ್ ಮೈಸೂರು ಸಿಟಿ, ಮೈಸೂರು.

ಹಿಂದೂದೇಶ

ನಮ್ಮ ಆಧಿಪತ್ಯದಿಂದ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೨೦ ಸಾವಿರ; ಅವರಲ್ಲಿ ಕಾಲೇಜಿಗೆ ಸೇರಲು ಅರ್ಹತೆ ಪಡೆದವರು ಒಟ್ಟು ೭ ಸಾವಿರ. ಈ ವಿದ್ಯಾರ್ಥಿಗಳಲ್ಲಿ ಕಾಲೇಜಿಗೆ ಸೇರಿದವರು ೨ ಸಾವಿರ;—ಸೇಕಡಾ ೧೦. ಈ ವರ್ಷದ ಈ ಪರೀಕ್ಷಾಯಾಗದಲ್ಲಿ ಇಷ್ಟೊಂದು ಮಂದಿ ವಿದ್ಯಾರ್ಥಿಗಳ ಆಹುತಿಯಾಗಲು, ಕಳೆದ ಜನವರಿಯಲ್ಲಿ ಇಂಗ್ಲಿಷಿನಲ್ಲಿ ಮಾರ್ಕುಗಳು ಸೇಕಡಾ ೪೦ ಸಿಕ್ಕಬೇಕೆಂದು ಅಕಸ್ಮಾತಾಗಿ ನಿರ್ಧರಿಸಿ, ಕೂಡಲೇ ಜಾರಿಗೆ ತಂದುದೇ ಕಾರಣವೆಂದು ವಿದ್ಯಾಭಿಮಾನಿಗಳು ದೂರುತ್ತಿದ್ದಾರೆ.

ಶ್ರೀ. ನೆಲ್ಲೂಭಾಯಿ ದೇಸಾಯಿಯವರು ಇಂಡಿಯಕ್ಕೆ ತಲುಪಿದರು. ಕಳೆದ ಆದಿತ್ಯವಾರ ಬೊಂಬಯಿಗೆ ದಯೆಮಾಡಿಸಿರುವರು.

ಅಕ್ಷರಜ್ಞಾನಪ್ರಚಾರಕಾರ್ಯಕ್ಕಾಗಿ ಜಬಲ್ಪುರದಲ್ಲೊಂದು ಹೊಸ ಸಂಘವು ಸ್ಥಾಪಿತವಾಗಿದ್ದು, ಅದು ಸಿನೆಮೆಟೊಗ್ರಾಫಿನ ಮೂಲಕ ವಿದ್ಯಾಪ್ರಚಾರ ಮಾಡಲಿದೆ.

ಶ್ರೀ. ರಾಧಾಕಿಶನ್ ದಯಾನಾಥ ಎಂಬ ದೊಡ್ಡ ಸಾಹುಕಾರರು, ಯೋಗ್ಯರಾದ ಬಿಹಾರಿನ ಬಡವಿದ್ಯಾರ್ಥಿಗಳ ಮುಂದಿನ ಶಿಕ್ಷಣಕ್ಕಾಗಿ ಒಂದು ಟ್ರಸ್ಟನ್ನು ಏರ್ಪಡಿಸಿರುವರು. ಈ ಟ್ರಸ್ಟಿನ ವಾಸಿಕ ಪೊತ್ತ ೨ ಸಾವಿರ ರೂಪಾಯಿಗಳಂತೆ; ಇದು ೨ ವರ್ಷ ನಡೆಯುವುದು. ಬಿಹಾರಿನ ಮಂತ್ರಿಗಳು, ಈ ಹಣವನ್ನು, ವಿದ್ಯಾರ್ಥಿವೇತನಗಳಿಗಾಗಿ ಹಂಚಿಕೊಡಲು ಒಂದು ಕಮಿಟಿಯನ್ನೇರ್ಪಡಿಸಿರುವರು.

ಇದೇ ಕಳೆದ ಜೂನ್ ೧೮-೧೯ರ ಗ್ರಹಣದ ಸ್ನಾನದ ಸಂಬಂಧ ಬಂದಿದ್ದ ಬ್ರಾಹ್ಮಣ ಅತ್ತೆ-ಸೊಸೆಯರಿಬ್ಬರು, ಕಾಶೀ ರೈಲ್ವೇ ಸ್ಟೇಶನಿನ ವಠಾರದಿಂದ ಆಶ್ಚರ್ಯಕರವಾದ ರೀತಿಯಲ್ಲಿ ಕಾಣೆಯಾಗಿದ್ದಾರೆ. ಈ ಹೆಂಗಸರ ಪತ್ತೆಹಚ್ಚುವವರಿಗೆ ೫೦೦ ರೂಪಾಯಿಗಳ ಬಹುಮಾನವೆಂದು ಯಾತ್ರಾಸಂಘದ ದಿವಾನರು ಪ್ರಕಟಿಸಿರುತ್ತಾರೆ.

ಭರತ ಇನ್ಯೂರೆನ್ಸ್ ಕಂಪೆನಿಯ ೧೯ ಸಾವಿರ ರೂಪಾಯಿಗಳನ್ನು ಅಕ್ರಮದ ಉಪಯೋಗ ಮಾಡಿದರೆಂದು ಆ ಸಂಸ್ಥೆಯನ್ನು ನಡೆಸುತ್ತಿದ್ದ ಡೈರೆಕ್ಟರರಾದ, ಲಾಲಾ ಹರಿಕಿಶನ್‌ಲಾಲರ ಮಕ್ಕಳಾದ, ಜೆ. ಗೌಬಾ ಇವರಿಗೆ, ೫ ವರ್ಷಗಳ ಕಠಿಣ ಸಜೆ, ರೂ. ೫ ಸಾವಿರದ ಜುಲ್ಮಾನೆ ತಪ್ಪಿದರೆ ೧೪ ತಿಂಗಳ ಶಿಕ್ಷೆ ಎಂದು ಲಾಹೋರಿನ ಎಡಿ॥ ಡಿ॥ ಮ್ಯಾಜಿಸ್ಟ್ರೇಟರು ವಿಧಿಸಿರುತ್ತಾರೆ.

ತಿರುವಾಂಕೂರು ಸರಕಾರವು ತನ್ನಲ್ಲಿನ ಅಭಿವೃದ್ಧಿಕಾರ್ಯಗಳಿಗಾಗಿ, ಮೂರುವರೆ ಸಲೆಯ ೫೦ ಲಕ್ಷ ರೂಪಾಯಿಗಳ ಸಾಲವೆತ್ತಲಿದೆ.

ಕಣ್ಣಾನೂರಿನ ಎಡ್ವರ್ಡ್ ಟಾನ್‌ಹಾಲಿನ ಸಂಬಂಧ ಸರಕಾರವು ೧೨ ಸಾವಿರ ರೂಪಾಯಿಗಳ ಸಾಲವನ್ನು ಆ ಮುನಿಸಿಪಾಲಿಟಿಗೆ ಮಂಜೂರುಮಾಡಿದೆ.

ವಿಲ್ಲುಪುರವಿನ ಒಂದು ಕೊಳದಲ್ಲಿ ಮುಳುಗಿಹೋಗಲಿದ್ದ ಒಬ್ಬ ೬ ವರ್ಷದ ಬಾಲಕನನ್ನು ಅಲ್ಲಿನ ಕೋ-ಒಪರೇಟಿವ್ ಸಂಘಗಳ ಇನಸ್ಪೆಕ್ಟರೊಬ್ಬರು ಸಾಹಸದಿಂದ ಬದುಕಿಸಿದರು.

ಮೈಸೂರಿನ ಮಹಾರಾಜರಾದ ಶ್ರೀ ಕೃಷ್ಣರಾಜೇಂದ್ರ ಒಡೆಯರವರು ಡಾ। ಬಾಲಕೃಷ್ಣ ಮುದಲಿಯಾರ್, ಶ್ರೀ. ಜಡಕ್‌ಶಹಾ ಮೊದಲಾದವರೊಡಗೂಡಿ ಇದೇ ಕಳೆದ ತಾ. ೨೪ನೆಯ ಬುಧವಾರ ಬೆಳಿಗ್ಗೆ ೬ ಘಂಟೆಗೆ ಉಗಿಬಂಡಿಯಲ್ಲಿ ಮದ್ರಾಸು ಸೆಂಟ್ರಲು ಸ್ಟೇಶನಿನಲ್ಲಿ ಬಂದಿಳಿದರು. ಇವರನ್ನು ಬೀಳ್ಕೊಡುವುದಕ್ಕೆ ಮದ್ರಾಸಿನ 'ಮೋಡರ್ನ್ ಕೇಫೆ'ಯ ಮಾಲಿಕರಾದ ಶ್ರೀ. ಕೆ. ಸೀತಾರಾಮರಾಯರು, ಮೈಸೂರು ಎಸೋಸಿಯೇಶನಿನ ಪರವಾಗಿ ಶ್ರೀ.ಗಳಾದ ಟಿ. ಕೆ. ಸುಬ್ಬರಾಯಡು ಮತ್ತು ವೆಂಕಟರಾಯರು, ಇಂಜಿನಿಯರಿಂಗ್ ಎಸೋಸಿಯೇಶನಿನ ಪರವಾಗಿ ಇಂಜಿನಿಯರ್ ಕುಪ್ಪುಸ್ವಾಮಿಯವರು, ಹಿಂದೀ ಪ್ರಚಾರ ಸಭೆಯ ಪ್ರತಿನಿಧಿಗಳು ಅಲ್ಲದೆ ನೂರಾರು ಮೈಸೂರಿನ ಮಹನೀಯರ ಮಹಾರಾಜರ ಆಗಮನವನ್ನು ನಿರೀಕ್ಷಿಸುತ್ತ ರೈಲ್ವೆ ನಿಲ್ದಾಣದಲ್ಲಿ ನಿಂತಿದ್ದರು. ೯-೨೦ಕ್ಕೆ ಸರಿಯಾಗಿ ಮಹಾರಾಜರು ಬಂಡಿಯಿಂದ ಪ್ಲೇಟುಫಾರ್ಮಿಗೆ ಇಳಿಯುತ್ತಲೆ ಕಾದಿದ್ದ ಮಹನೀಯರೆಲ್ಲರೂ ಹಾರತುರಾಯಿಗಳನ್ನು ಮಹಾರಾಜರಿಗೆ ಅರ್ಪಿಸಿ ಸುಖಪ್ರಯಾಣವನ್ನು ಬಯಸಿದರು. ಮಹಾರಾಜರು, ಮಾಡಿದ ಸನ್ಮಾನವನ್ನು ಹರ್ಷಚಿತ್ತದಿಂದ ಸ್ವೀಕರಿಸಿ ಮುಂಬಯಿಗೆ ತೆರಳಿದರು. ಅಲ್ಲಿಂದ ಇಂಗ್ಲೆಂಡಿಗೆ ಹೋಗಲಿರುವರು.

ವಿಸೆಸ್ ಆಶ್ಲೇಟಾ ದೇ ಎಂಬಾಕೆಗೆ, ತನ್ನ ಗಂಡನಾದ ಕಾಳೀ ಮೋಹನ್ ದೇ ಎಂಬ ಡೆಟಿನ್ಯೂವಿನೊಡನೆ, ಆ ನಿರ್ಬಂಧ ಸ್ಥಾನದಲ್ಲಿ ವಾಸಿಸಲು ಸರಕಾರದ ಅನುಮತಿ ದೊರಕಿದೆ.

ಕಾಲ್ಸಾ ಪ್ರಾಂತದ ಫಾರೆಸ್ಟ್ ರೇಂಜರರೊಬ್ಬರು ಕಾರಿನಲ್ಲಿ ಹಿಬೋ ರೋಡಿನಲ್ಲಿ ಪ್ರಯಾಣಮಾಡುತ್ತಿದ್ದಾಗ, ಕಾರೊಂದು ಮರಕ್ಕೆ ಬಡಿದು, ರೇಂಜರರು ಮೃತರಾದರು.

ಇದೊಂದು ವಿಶೇಷವೇ. ಲಾಹೋರಿನಲ್ಲಿ ಬಂದು ಹಸು ಗ್ರಹಣಕಾಲದಲ್ಲಿ, ಮನುಷ್ಯರಂತೆ, ಉಪವಾಸ ಮಾಡಿದುದು. ವಾಡಿಕೆಯಂತೆ, ಹಸುವಿನ ಮುಂದೆ, ತಿನಿಸನ್ನಿಟ್ಟಿದ್ದರು. ಹಸು ಆ ಮೇವನ್ನು ತಿನ್ನಲಿಲ್ಲ. ಆ ಮೇಲೆ, ಗ್ರಹಣಕಾಲ ಮುಗಿದ ಬಳಿಕ, ಆ ತಂಗಳು ಮೇವನ್ನು ಬಿಸಾಟು, ಹೊಸ ಮೇವನ್ನು ಹಾಕುತ್ತಲೂ ಆ ಹಸುವು ಅದನ್ನು ತಿಂದಿತು.

ಕಲ್ಕತ್ತೆಯ ಸವಿಾಪದಲ್ಲಿ, ಕೆಲವೊಂದು ವಿಸ್ತೀರ್ಣದಲ್ಲಿ, ಬಯಲಿನ ವಿಾಟಿಂಗುಗಳೂ, ಸಾರ್ವಜನಿಕ ಮೆರವಣಿಗೆ ಇತ್ಯಾದಿಗಳೂ ನಡೆಯಕೂಡದೆಂದು ೧೪ಳನೇ ಪ್ರಕರಣವು ಜಾರಿಗೆ ಬಂದಿದೆ.

ಕಲ್ಕತ್ತೆಯ ಮುನಿಸಿಪಲ್ ಕಾರ್ಪರೇಶನ್, ತನ್ನ ನಗರಾಭಿವೃದ್ಧಿಯ ಕಾರ್ಯಗಳಿಗಾಗಿ ೬೦ ಲಕ್ಷ ರೂಪಾಯಿಗಳ ಸಾಲವೆತ್ತಲು ನಿರ್ಧರಿಸಿದೆ.

ಕಲ್ಕತ್ತೆಯ ಗುರುಮುಖಿ ದೈನಿಕ ಪತ್ರಿಕೆಯೊಂದರ ಮೇಲೆ ನಡೆದ ರಾಜದ್ರೋಹ ಆರೋಪಕಾರಕವಾದ ಮೊಕದ್ದಮೆಯಲ್ಲಿ—'ದೇಶದರ್ಪಣ'ವೆಂಬ ಆ ಪತ್ರಿಕೆಯ ಮುಖ್ಯ ಸಂಪಾದಕರನ್ನು ಬಿಟ್ಟರು. ಸಂಪಾದಕರಿಗೆ ೩ ತಿಂಗಳು ಕೊಟ್ಟರು. ಪ್ರಿಂಟರರಿಗೆ ೧೦೦ ರೂಪಾಯಿಗಳ ಜುಲ್ಮಾನೆ ಎಳೆದರು. ಇದು ಹೈಕೋರ್ಟಿನ ತೀರ್ಪು. ಕೆಳಕೋರ್ಟಿನಲ್ಲಿ ಈ ಮೂವರಿಗೂ ಸಜೆ ಮತ್ತೂ ಜುಲ್ಮಾನೆಗಳ ದಂಡನೆಯಾಗಿದ್ದಿತು.

ಪನ್ನಾ ಪ್ರಾಂತದಲ್ಲಿ ದೊಡ್ಡದೊಂದು ವಜ್ರದ ಕಾರ್ಖಾನೆಯನ್ನು ಸ್ಥಾಪಿಸುವ ಆಲೋಚನೆ ನಡೆಯುತ್ತದೆ. ಅಲ್ಲಿನ ವಜ್ರದ ಗಣಿಗಳನ್ನು ಶೋಧಿಸಬೇಕೆಂದು ಬೊಂಬಯಿ ಮತ್ತೂ ಅಹಮ್ಮದಾಬಾದಿನ ವರ್ತಕರು ಪ್ರಯತ್ನಿಸುತ್ತಿದ್ದಾರೆ. ಚಕ್ರವರ್ತಿ ಅಕ್ಬರನು ತನಗೆ ಬೇಕಾದ ವಜ್ರಗಳನ್ನೆಲ್ಲ ತರಿಸಿಕೊಳ್ಳುತ್ತಿದ್ದುದು ಇಲ್ಲಿಂದಲೇ ಎಂದು ಪ್ರತೀತಿಯುಂಟು.

ನಾಗಪುರ ಪ್ರಾಂತದಲ್ಲಿ ವಿಪರೀತ ಮಳೆಯಾಗಿ, ನೂರಾರು ಮನೆ, ಗುಡಿಸಲುಗಳೂ, ಪೈರುಗಳೂ ನಷ್ಟವಾಗಿವೆ. ಕೆಲವು ಸಂಕಸೇತುವೆಗಳೂ ಬಳಿದುಕೊಂಡು ಹೋಗಿವೆ.

ಡಕ್ಕದ ಧಾಕೇಶ್ವರಿ ಅರಳೇ ಮಿಲ್ಲುಗಳ ೩ ಮಂದಿ ಮ್ಯಾನೇಜಿಂಗ್ ಡೈರೆಕ್ಟರುಗಳು ಬ್ಯಾಲೆನ್ಸ್ ಶೀಟಿನಲ್ಲಿ ಸುಳ್ಳು ಸ್ಟೇಟ್‌ಮೆಂಟುಗಳನ್ನು ಪ್ರಕಟಿಸಿದ್ದರೆಂಬ ಕಾರಣದಿಂದ, ಅವರಿಗೆ ತಲಾ ೩ ತಿಂಗಳ ಸಾದಾ ಸಜೆ, ೫೦೦ ರೂಪಾಯಿಗಳ ಜುಲ್ಮಾನೆಯನ್ನು ಕಲ್ಕತ್ತೆಯ ಹೈ ಕೋರ್ಟಿನವರು ವಿಧಿಸಿರುತ್ತಾರೆ.

ಮಹಾತ್ಮಾ ಗಾಂಧಿಯವರ ಚಿತ್ರವಿರುವ ಒಂದು ಪೋಸ್ಟಲ್ ಕವರು, ಶ್ರೀ. ಪಿ. ವೀ. ಕೃಷ್ಣಯ್ಯ ಚೌಧುರಿಯವರ ವಿಳಾಸಕ್ಕೆ ಕಳುಹಿಸಲ್ಪಟ್ಟಿದ್ದು, ಅದವರಿಗೆ ತಲಪಿಸಲಿಲ್ಲವೇಕೆಂದು ಚೌಧುರಿಯವರು ಲಾ ಮೆಂಬರ್ ಶ್ರೀ. ಪನ್ನೀರು ಸೆಲ್ವಂರಲ್ಲಿ ದೂರಿರುವುದಾಗಿ ಉದಕಮಂಡಲದ ವಾರ್ತೆ.

ಖುದ್ ಭಕ್ಸ್ ಎಂಬ ಭಾರತೀಯ ಯೋಗಾಭ್ಯಾಸಿಗಳು ತನ್ನ ಅದ್ಭುತ ಯೋಗಸಾಮರ್ಥ್ಯದಿಂದ, ಬ್ರಿಟನಿನಲ್ಲಿ ಬ್ರಿಟಿಷ್ ವಿಜ್ಞಾನಿಗಳನ್ನು ಭ್ರಮೆಗೊಳಿಸುತ್ತಿರುವರು. ಕಣ್ಣನ್ನು ಕಟ್ಟಿಸಿಕೊಂಡು ಕುರುಡರಾಗಿ ಓದುವುದು, ಕೊಟ್ಟ ಕೊಟ್ಟ ವಿಷದ್ರವ್ಯಗಳನ್ನು ಕುಡಿದು ಬದುಕುವುದು, ಆ ಮೇಲೆ ಉರಿಯುವ ಕಲ್ಲಿದ್ದಲ ಚರಂಡಿಯಲ್ಲಿ ಬರಿಗಾಲಿನಿಂದ ನಡೆಯುವುದು—ಇಷ್ಟೆಲ್ಲವೂ ಆಯಿತು. ಈಗ ಸಮಾಧಿನಿಷ್ಠರಾಗಿ, ಕೆಲಕಾಲದ ಬಳಿಕ, ಆ ಗೋರಿಯಿಂದ ಹೊರಗೆ ಬರುವ ದೃಶ್ಯವೊಂದನ್ನು ತೋರಿಸಲಿರುವರು.

ಬರ್ಮಾ ಪ್ರಾಂತದಲ್ಲಿ ಕೆಲವು ದಿನಗಳ ಹಿಂದೆ ಒಂದು ರಾತ್ರಿ ಭಾರೀ ಮಳೆ. ಹಾಗೇ ಬೆಳದಿಂಗಳು. ಆ ಬೆಳದಿಂಗಳಲ್ಲಿ ಸ್ವಾಯಿಬೋ ನಗರದಲ್ಲಿ ಕಾಮನ ಬಿಲ್ಲೂ ಕಾಣಿಸಿಕೊಂಡಿತು;—ಚಂದ್ರನಿಗೆ ಎದುರಾಗಿ ಈ ಬಿಲ್ಲು ಅರ್ಧ ಗಂಟೆಯು ವರೆಗೂ ಇದ್ದಿತು.

ಗಾಂಧಿಯವರು ಬರುವ ಸಪ್ಟೆಂಬರ ಸುಮಾರಕ್ಕೆ ಯುರೋಪಿಗೆ ತೆರಳುವ ಯೋಚನೆಯುಲ್ಲಿದ್ದಾರೆಂದು ಕೆಲವು ಪತ್ರಿಕೆಗಳ ಹೇಳಿಕೆ.

ಮುಝಾಫರಪುರದಲ್ಲಿ ಒಂದು ಮಾವಿನ ಮರವು ಅಳುತ್ತಿದ್ದಿತೆಂತಲೂ, ಅದರದೊಂದು ಶಾಖೆಯನ್ನು ಕಡಿದುಹಾಕುವವರೆಗೆ ಆ ಶಬ್ದವು ನಿಲ್ಲಲಿಲ್ಲವೆಂತಲೂ, ಅನೇಕ ಜನರೀ ವಿಚಿತ್ರವನ್ನು ಕಂಡು ಕೇಳಿರುವರೆಂತಲೂ ತಿಳಿದುಬರುತ್ತಿದೆ.

ಸ್ವಸ್ತಿಕಾ
ಕೇಶ
ಸಿದ್ಧತೆಗಳು

ಇಂಡಿಯದಲ್ಲೆಲ್ಲಿಯೂ ಖ್ಯಾತಿ ಪಡೆದಿದೆ. ಬಿಳಿಯ ಮತ್ತು ಖನಿಜತೈಲಗಳಿಲ್ಲವೆಂದು ಗ್ಯಾರೆಂಟಿ ಇದೆ. ತೃಪ್ತಿಯಾಗದಿದ್ದರೆ ಹಣ ಹಿಂದೆ.

ಕೇಶವರ್ಧಕ ಟಾನಿಕ್

ಕೂದಲು ಯಥೇಷ್ಟ ಬೆಳೆಯುತ್ತದೆ, ಚಿಕ್ಕ ವಯಸ್ಸಿನಲ್ಲಿ ಕೂದಲು ಉದುರುವುದನ್ನು ತಡೆಯುತ್ತದೆ, ತಲೆಯ ಹೊಟ್ಟನ್ನು ನಿರ್ಮೂಲಿಸುತ್ತದೆ, ತಲೆಯ ಚರ್ಮದ ಮೇಲೆ ಮನೋಹರವಾದ ತಂಪನ್ನು ಉಂಟುಮಾಡುತ್ತದೆ, ಹೀಗೆಂದು ಪ್ರಬಲವಾಗಿ ಶಿಫಾರಸು ಮಾಡಲ್ಪಟ್ಟಿದೆ. ಹೊಸ ಹೂಗಳ ಹಾಗಿರುವ ಸೂಕ್ಷ್ಮವಾದ ಸುವಾಸನೆಯಿದೆ.

ಕೇಶತೈಲಗಳು

ಪುಟಕ್ಕಿಟ್ಟ ಶುದ್ಧ ತೆಂಗಿನೆಣ್ಣೆ ಮತ್ತು ತಿಲ್ ಎಣ್ಣೆಗಳಿಂದ ಮಾತ್ರವೇ ತಯಾರಿ. ಹಾನಿಕರವಾದ ಖನಿಜದ ಎಣ್ಣೆಗಳಿಲ್ಲವೆಂದು ಗ್ಯಾರೆಂಟಿ. 'ಸ್ವಸ್ತಿಕಾ' (ಸಾಮಾನ್ಯ ಸುವಾಸನೆ) ಮತ್ತೂ 'ಸುಪರ್‌ಫೈನ್' (ಬಲವಾದ ಸುವಾಸನೆ) ಎಂಬ ೨ ಜಾತಿಯಾಗಿ ೫ ಬಗೆಯ ಪರಿಮಳಯುಕ್ತವಾಗಿ ದೊರಕುತ್ತದೆ—ಗುಲಾಬೀ, ಮಲ್ಲಿಗೆ, ಗಂಧ, ಕಸ್ತೂರಿ, ಮಾಧುರಿಕಾ.

ಸುವಾಸನೆಯುಳ್ಳ ಹರಳೆಣ್ಣೆ

ಕೂದಲಿಗಿದು ಉತ್ಕೃಷ್ಟ ಶಕ್ತಿವರ್ಧಕ ಔಷಧ; ಕೂದಲು ಉದುರದು; ಬೆಳ್ಳಗಾಗದು; ತಲೆಯ ಚರ್ಮವನ್ನು ನಿರ್ಮಲವಾಗಿ, ತಂಪಾಗಿ ಇಡುತ್ತದೆ. ಅತ್ಯುತ್ತಮವಾಗಿ ಸುಗಂಧವೆಳ್ಳದು; ನಿಜವಾಗಿಯೂ ಉಚ್ಚ ತರಗತಿಯ ಸಾಧನ.

ಕೂದಲಿಗೆ ಶಿಕಾಕ್ಕಾಯ್ ಸಾಬೂನು

ಕೂದಲು ತೊಳೆಯುವಲ್ಲಿ, ಅದನ್ನು ಯಥೇಷ್ಟ ಬೆಳೆಸುವಲ್ಲಿ, ತಲೆ ಹೊಟ್ಟನ್ನು ನಿರ್ಮೂಲಿಸುವಲ್ಲಿ, ಕೂದಲಿಗೆ ಧಾರಾಳವಾಗಿ ನುಣುಪಿನ ಹೊಳಪು ಕೊಡುವಲ್ಲಿ ಇದಕ್ಕೆ ಸರಿ ಇಲ್ಲ. ತಲೆಯ ಚರ್ಮಕ್ಕೆ ಇದರಿಂದ ಹೊಸ ಚೈತನ್ಯ. ಸಂತೋಷಕರವಾದ ಸುವಾಸನೆ; ಸ್ನಾನಕ್ಕೂ ಇಷ್ಟೇ ಒಳ್ಳೆಯದು.

ದಿ ಸ್ವಸ್ತಿಕಾ ಆಯಿಲ್ ಮಿಲ್ಸ್ ಲಿಮಿಟೆಡ್
ವಡಾಲಾ, ಬೊಂಬಯಿ 15.

ಸಿವಿಲ್, ಕ್ರಿಮಿನಲ್, ಮತ್ತು ಜುಡೀಶಿಯಲ್ ಕೋರ್ಟುಗಳ ನ್ಯಾಯಾಧೀಶರು, ಪ್ರತಿನಿತ್ಯವೂ ಬೆಳಿಗ್ಗೆ, ತಮ್ಮ ನ್ಯಾಯಸ್ಥಾನವನ್ನೇರುವ ಮೊದಲು, ಕಕ್ಷಿಗಾರರ ಹಾಗೆಯೇ 'ನ್ಯಾಯವನ್ನು, ಸಂಪೂರ್ಣ ನ್ಯಾಯವನ್ನು ಮಾಡುತ್ತೇವೆ' ಇತ್ಯಾದಿಯಾದ ಒಂದು ಸತ್ಯಪ್ರಮಾಣರೂಪವಾದ ಪ್ರತಿಜ್ಞಾವಚನವನ್ನು ಕೈಕೊಳ್ಳುವ ಬಗೆಗೆ, ಲಾಹೋರಿನ ಎಂ. ಎಲ್. ಸೀ. ಗಳಾದ ಎಂ. ಎ. ಫನಿಯವರು ಪಂಜಾಬ್ ಲೆ॥ ಕೌನ್ಸಿಲಿನಲ್ಲಿ ಒಂದು ಬಿಲ್ ತರುವಂತೆ ನೋಟೀಸ್ ಕೊಟ್ಟಿರುವರು.

ಪ್ರಪಂಚದ ಧಾರ್ಮಿಕ ಪರಿಷತ್ತಿಗೆ ದಯೆಮಾಡಿಸಿರುವ ಕಲ್ಕತ್ತಾ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲ್ ಡಾ॥ ಸುರೇಂದ್ರನಾಥ ಗುಪ್ತರವರು, ಪ್ಯಾರೀಸಿನಲ್ಲಿ ಅನೇಕ ಅಮೂಲ್ಯ ಸಂಸ್ಕೃತ ಹಸ್ತಪತ್ರಿಕೆಗಳನ್ನು ಕಂಡುಕೊಂಡಿದ್ದು, ಅದರ ಫೊಟೊಗ್ರಾಫಿನಕಲುಗಳನ್ನು ತೆಗೆದು ಅವುಗಳನ್ನು ಇಂಡಿಯಕ್ಕೆ ತರುವ ಸಮಸ್ತ ಖರ್ಚು-ವೆಚ್ಚವನ್ನೂ ತಾವು ಸಹಿಸುವುದಾಗಿ, ಬರೋಡಾ ಮಹಾರಾಜರು ಡಾಕ್ಟರರಿಗೆ ತಿಳಿಸಿರುವುದಾಗಿ ಪ್ರಕಟನವಾಗಿವೆ. ಈ ಹಸ್ತಪತ್ರಿಗಳಲ್ಲಿ ಹಿಂದೂ ತತ್ವಜ್ಞಾನ ಶಾಸ್ತ್ರಗಳೂ, ಆಯುರ್ವೇದದ ಔಷಧಪದ್ಧತಿಯೂ ಇವೆಯಂತೆ.

ಸಹಕಾರ ಸಂಘಗಳ ಸಹಾಯಾರ್ಥವಾಗಿ ಇಂಡಿಯಾ ಸರಕಾರವು ಪ್ರಾಂತಿಕ ಸರಕಾರಗಳಿಗೆ ೧೦-೧೫ ಲಕ್ಷ ರುಪಾಯಿಗಳನ್ನು ಕೊಡಲಿದೆ. ಇದರಲ್ಲಿ ಸಂಯುಕ್ತ ಪ್ರಾಂತಕ್ಕೆ ರೂ. ೬೭,೫೦೦ ದೊರಕಲಿದೆ.

ಲಾಹೋರ್ ಮುನಿಸಿಪಲ್ ಕಮಿಟಿಯು ಮಂಜೂರ್ಮಾಡಿದ ಬಜೆಟನ್ನು ಲಾಹೋರ್ ಡಿವಿಜನಿನ ಕಮಿಶನರರು ಅಂಗೀಕರಿಸಿಲ್ಲ.

ಪ್ರಾಥಮಿಕ ಶಿಕ್ಷಣದ ಪುನರ್ಘಟನೆ.

ಈ ವಿಚಾರದಲ್ಲಿ ಹೊಸ ತಿದ್ದುಪಡಿಗಳನ್ನು ಸರಕಾರಕ್ಕೆ ಸೂಚಿಸುವುದಕ್ಕಾಗಿ ನೇಮಕ ಹೊಂದಿದ ಕಮಿಟಿಯು ತಾ. ೧೮, ೧೯ರಲ್ಲಿ ಊಟಕಮಂಡಿನಲ್ಲಿ ಸೇರಿತು. ವಿದ್ಯಾ ಇಲಾಖಾ ಮಂತ್ರಿಯವರೇ ಅಧ್ಯಕ್ಷರಾಗಿದ್ದರು. ಕೆಳಗಣ ಸೂಚನೆಗಳು ಮಂಜೂರಾದಂತೆ ತಿಳಿದುಬರುತ್ತಿದೆ.

ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವು ಹರಡುವ ಹಾಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕಾಗಿಯೂ, ಇಂತಹ ಶಿಕ್ಷಣವು ಜಹ್ಮರಿಗೆ ಬರುವಲ್ಲೆಲ್ಲ, ಸರಕಾರದ ಅಥವಾ ಖಾಸಗಿ ಶಾಲೆಗಳಲ್ಲಿ ಮಕ್ಕಳಿಂದ ಫೀಸನ್ನು ವಸೂಲ್ಮಾಡಿಕೊಳ್ಳಬಾರದಾಗಿಯೂ, ಆದರೆ ಶಾಲೆಗಳಿಗೆ ತೆರುವ ಗ್ರೇಂಟು ಹೆಚ್ಚಿಸಬೇಕಾಗಿಯೂ ಶಿಫಾರಸು ಮಾಡಲಾಗಿದೆ.

೮-೧೦ ವಯಸ್ಸಿನೊಳಗಣ ಎಲ್ಲ ಬಾಲಕ-ಬಾಲಿಕೆಯರನ್ನು ಕಡ್ಡಾಯಶಿಕ್ಷಣವಿಧಿಗೆ ಒಳಪಡಿಸಬೇಕಾಗಿಯೂ, ಡೈರೆಕ್ಟರರು ಎಲಿಮೆಂಟರಿ ಶಾಲೆಗಳಲ್ಲಿ ಉಪಯೋಗಕ್ಕೆ ಬರಬೇಕಾದ ಪಾಠಪಟ್ಟಿಯೊಂದನ್ನು ತಯಾರಿಸಿ ಈ ಕಮಿಟಿಯ ಮುಂದಿನ ಸಭೆಗೆ ಚರ್ಚೆಗೆ ಇಡುವಂತೆ ವ್ಯವಸ್ಥೆ ಮಾಡಬೇಕಾಗಿಯೂ ಸೂಚನೆಯಾಗಿದೆ.

ಸೆಕೆಂಡರಿ, ಮಿಡ್ಲ್, ಮತ್ತು ಹಾಯರ್ ಎಲಿಮೆಂಟರಿ ಶಾಲೆಗಳೊಳಗೆ ಕಚ್ಚಾಟಗಳಾಗದಂತೆ, ಈ ಶಾಲೆಗಳು ವ್ಯವಸ್ಥೆ ಹೊಂದುವಂತಾಗಬೇಕೆಂದೂ ಸೂಚನೆಯಾಗಿದೆ.

ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ ಓದುವ ಬಾಲಕ-ಬಾಲಿಕೆಯರಿಗೆ ಮಾತುಕತೆಯಾಡುವಷ್ಟು ಇಂಗ್ಲಿಷ ಭಾಷಾ ಜ್ಞಾನವು ಇರಬೇಕಾಗಿ, ಅದಕ್ಕನುಗುಣವಾಗಿ ಸಿಲೆಬಸನ್ನು ಸರಿಪಡಿಸಬೇಕೆಂದೂ ಸೂಚಿತವಾಯಿತು.

ಪ್ರಾಥಮಿಕ ಶಾಲೆಗಳ ಕೆಳ ತರಗತಿಗಳಲ್ಲಿ ಪ್ರೊಜೆಕ್ಟ್ ಮೆಥಡಿನಂತೆ ಪಾಠಕ್ರಮಗಳಿರಬೇಕೆಂದೂ, ದೇಶೀಯ ಭಾಷೆಗಳ ಕಡೆಗೆ ವಿಶೇಷ ಗಮನವಿಡಲೇ ಬೇಕೆಂದೂ ಸೂಚಿತವಾಗಿದೆ.

ಪ್ರತಿ ಜಿಲ್ಲೆಯಲ್ಲಿ ಪರೀಕ್ಷೆಗಳು ಒಂದೇ ಕ್ರಮದಂತಿರಬೇಕೆಂದೂ ಶಿಫಾರಸುಮಾಡಲಾಗಿದೆ.

ಪ್ರಾಥಮಿಕ ಶಿಕ್ಷಣದ ಅವಧಿಯನ್ನು ಕಡಿಮೆಮಾಡುವ ಬದಲಾಗಿ, ಮೂರು ತರಗತಿಗಳ ಶಾಲೆಗಳನ್ನು ಸ್ಥಾಪಿಸುವುದು ಅಗತ್ಯವೆಂದು ಸೂಚಿಸಿ,-ಐದನೆ ತರಗತಿ ವರೆಗಣ ಪೂರ್ಣ ಶಾಲೆಗಳೂ, ಎರಡು ತರಗತಿಗಳಿದ್ದು ಅಗತ್ಯವಿದ್ದಲ್ಲಿ ಮೂರು ತರಗತಿಗಳ ವರೆಗೆ ಶಿಕ್ಷಣ ಕೊಡುವ ಶಾಖಾ ಶಾಲೆಗಳೂ, ಕಡಿಮೆ ವಿದ್ಯಾರ್ಥಿಗಳಿರುವಲ್ಲಿ ಕನಿಷ್ಪಪಕ್ಷ ೩೦ ವಿದ್ಯಾರ್ಥಿಗಳಿದ್ದು ಐದನೆ ತರಗತಿಯ ತನಕ ಕಲಿಸುವ ಪ್ರತ್ಯೇಕ ಶಾಲೆಗಳೂ ಈ ಮೂರು ಬಗೆಯ ಪ್ರಾಥಮಿಕ ಶಾಲೆಗಳಾಗಬೇಕೆಂದು ಶಿಫಾರಸುಮಾಡಲಾಗಿದೆ.

ಐದನೆ ತರಗತಿಯ ವರೆಗೆ ಶಿಕ್ಷಣ ಹೊಂದಿದವರು ಮಾತ್ರ ಶಿಕ್ಷಿತ ತರಗತಿಗೆ ಸೇರಿದವರೆಂದು ನಿರ್ಧರಿಸುವಂತಿದೆ.

ಯೋಗ್ಯ ವಿದ್ಯಾರ್ಥಿಗಳನ್ನು ಬೇಗಬೇಗನೆ ಮೇಲ್ತರಗತಿಗಳಿಗೆ ಸೇರಿಸಬರುವಂತೆ ಪ್ರೊಮೋಶನ್ ಕ್ರಮವಿರುವುದು ಉತ್ತಮವೆಂದೂ ಕಮಿಟಿಯ ಅಭಿಪ್ರಾಯವಿದೆ.

ಶಹರುಗಳಲ್ಲೂ ಗ್ರಾಮಗಳಲ್ಲೂ ಹಾಯರ್ ಎಲಿಮೆಂಟರಿ ಶಾಲೆಗಳು ಇರುವ ಈಗಣ ವ್ಯವಸ್ಥೆಯು ಮುಂದೆಯೂ ಇರಬಹುದೆಂದೂ, ಆದರೆ ಅವುಗಳಲ್ಲಿನ ಶಿಕ್ಷಣಕ್ರಮವನ್ನು ಸಂಪೂರ್ಣವಾಗಿ ಪುನರ್ವ್ಯವಸ್ಥೆಮಾಡಬೇಕೆಂದೂ, ಇವುಗಳಲ್ಲಿ ಸೆಕೆಂಡರಿ ಗ್ರೇಡ್ ತರಬೇತಾದ ಉಪಾಧ್ಯಾಯರು ಇರಬೇಕೆಂದೂ ಮೇಲ್ತರಗತಿಗಳಲ್ಲಿ ಪ್ರತ್ಯಕ್ಷ ಪ್ರಯೋಗದಿಂದಲೇ ಕೈಕೆಲಸ ಮೊದಲಾದುವುಗಳನ್ನು ಕಲಿಸಬೇಕೆಂದೂ, ದೇಶಭಾಷೆಯಲ್ಲಿ ಶಿಕ್ಷಣ ನಡೆಯಬೇಕೆಂದೂ, ಪ್ರತಿಯೊಂದು ಹಾಯರ್ ಎಲಿಮೆಂಟರಿ ಶಾಲೆಗೆ ಒಂದೊಂದು ತೋಟವಿರಬೇಕೆಂದೂ, ಶಾಲಾವಾಠಗಳು ನಡೆಯುವ ಸಮಯದಲ್ಲೇ ಧಾರ್ಮಿಕ ಶಿಕ್ಷಣವನ್ನು ಬೋಧಿಸುವುದುತ್ತಮವೆಂದೂ ಶಿಫಾರಸು ಬರೆಯಲಾಗಿದೆ ಎಂದು ತಿಳಿದುಬರುತ್ತಿದೆ.

ಸಮಾಜಸೇವಾಶಿಕ್ಷಣಶಾಲೆ.

ಮುಂಬಾಯಿಯಲ್ಲಿ ಹೊಸ ಸಂಸ್ಥೆ.

ನ್ಯಾಯ, ವೈದ್ಯ, ಶಿಕ್ಷಣ ಮೊದಲಾದುವುಗಳಲ್ಲಿ ಪಾರಂಗತರನ್ನಾಗಿ ಮಾಡಿ ವಿದ್ಯಾರ್ಥಿಗಳಿಗೆ ಗ್ರೆಡ್ಯುವೇಟ್ ಪದವಿಯನ್ನು ಓದಗಿಸತಕ್ಕ ಕೊಲೆಜುಗಳು ಎಲ್ಲೆಲ್ಲಿಯೂ ಇರುವ ಹಾಗೆ, ಮುಂಬಾಯಿಯಲ್ಲಿ ಸಮಾಜಸೇವಾವಿಧಾನಗಳಲ್ಲಿ ಪಾರ್ಂಗತರನ್ನಾಗಿ ಮಾಡಿ ಧುರಂಧರರಾದವರಿಗೆ ಗ್ರೆಡ್ಯುವೇಟ ಪದವಿಯನ್ನು ಗಳಿಸಿಕೊಡುವ ಸರ್ ಡೊರಾಬ್‌ಜಿ ತಾತರವರ ಹೆಸರಿನಲ್ಲಿ ಹೊಸತೊಂದು ಶಾಲೆ ತೆರೆಯಲಾಗಿದೆ. (ತಾ. ೨೨ನೆ ಜೂನ್)

ವಕೀಲರು, ಡಾಕ್ಟರರು, ಶಿಕ್ಷಕರು ಮೊದಲಾಗಿ ಪ್ರಖ್ಯಾತವಾದ ವೃತ್ತಿಗಳನ್ನು ಅನುಸರಿಸುವ ಹಾಗೆ ಹೇಗೆ ಯುವಕಯುವತಿಯರಿಗೆ ಶಿಕ್ಷಣ ಕೊಡಲಾಗುತ್ತಿದೆಯೋ ಅದರಂತೆ, ಇಲ್ಲಿ ಸಮಾಜಸೇವೆಯ ಪ್ರತ್ಯಕ್ಷ ವಿಧಿಗಳನ್ನು ವ್ಯವಹಾರರೂಪದಲ್ಲಿ ಕಲಿಸಿಕೊಡುವರು. ಸಮಾಜಸೇವಾಕಾರ್ಯದ ಮಹತ್ವವು ಇಡೀ ಜಗತ್ತಿಗೆ ಇನ್ನು ಚೆನ್ನಾಗಿ ತಿಳಿದೇ ಬಂದಿದೆ; ನಮ್ಮಲ್ಲಿ ಅಲ್ಲಲ್ಲಿ ಇದಕ್ಕಾಗಿ ಕೆಲಸ ಮಾಡುವವರಿದ್ದಾರಾದರೂ, ಒಂದು ವ್ಯವಸ್ಥೆಗೆ ಒಳಪಟ್ಟು ಇವರನ್ನು ಸರಿಯಾಗಿ ತರಬೇತುಮಾಡುವ ಯೋಗ್ಯ ಸಂಸ್ಥೆ ಇದ್ದಿಲ್ಲ. ಈ ಕೊರತೆಯು ಇನ್ನು ನಿರ್ವಾಮವಾಯಿತು.

ಶಿಕ್ಷಣ ವಿಚಾರ

ಇಡೀ ದೇಶದಿಂದ ನೂರಕ್ಕೆ ಮೇಲ್ಪಟ್ಟು ಉಮೇದುವಾರರು ಈ ಶಾಲೆಯಲ್ಲಿ ಸೇರಲು ಅರ್ಜಿ ಬರೆದುಕೊಂಡಿದ್ದರು. ಅವರಲ್ಲಿ ೬೦ ಮಂದಿ (ಯುವಕ-ಯುವತಿ)ಯನ್ನು ಮಾತ್ರ ಈಗ ಪ್ರಥಮತಃ ಸೇರಿಸಿಕೊಳ್ಳಲಾಗಿದೆ. ಈ ದೇಶದಲ್ಲಿ ಸೇವೆ ಮಾಡಕಲಿಯುವ ಇವರ ಸಂಖ್ಯೆಯು ಈಗ ಇಷ್ಟು ಕಡಿಮೆಯಾಗಿ ತೋರಿದರೂ, ಸಮಾಜದ ಸಮಸ್ಯೆಗಳನ್ನು ಸರಿಯಾಗಿ ವಿಮರ್ಶಿಸಿ ನೂತನ ಫಲಕಾರಿಗಳಾಗಿರುವ ಉಪಾಯಗಳನ್ನು ಕಂಡುಕೊಂಡು ಅವುಗಳನ್ನು ಕೈಕೊಳ್ಳಬೇಕಾದರೆ, ಸದ್ಯಕ್ಕೆ ಇಷ್ಟೆ ಮಂದಿ ಸಾಕೆಂದು ಶಾಲಾಧಿಕಾರಿಗಳ ತಾತ್ಪರ್ಯವಾಗಿದೆ.

೧೯೦ಳರಲ್ಲಿ ಇಂಥದೊಂದು ಶಾಲೆಯನ್ನು ಅಮೇರಿಕದಲ್ಲಿ ತೆರೆದಾಗ ೨೬ ಮಂದಿಯನ್ನು ತರಬೇತಿಗೆ ಪ್ರಾರಂಭಿಸಿದ್ದರು. ಈಗ ಯುನೈಟೆಡ್ ಸ್ಟೇಟ್ಸ್‌ನಲ್ಲಿ ಇಂಥ ೫೫ ಶಾಲೆಗಳಿವೆ; ಇವು ಇಷ್ಟು ದಿನ ಕೆಲಸ ಮಾಡುತ್ತ, ಇಡೀ ರಾಷ್ಟ್ರಕ್ಕೆ ಬೇಕಾಗುವ ಸಮಾಜಸೇವಕರನ್ನು ಪ್ರತಿ ವರ್ಷವೂ ಓದಗಿಸುತ್ತಿವೆ. ಇಲ್ಲಿಯೂ ಇದೇ ರೀತಿ ಪ್ರತಿಯೊಂದು ಪ್ರಾಂತ್ಯದಲ್ಲಿ ಇಂಥ ಶಾಲೆಗಳು ಉಂಟಾಗಿ, ಪ್ರತಿ ನಗರದಲ್ಲೂ ಇಲ್ಲಿ ತರಬೇತಾದ ಸಮಾಜಸೇವಾಧುರೀಣರು ದೊರೆವಂತಾಗಬಹುದೆಂದು ನಿರೀಕ್ಷಿಸಲಾಗಿದೆ. ಇದನ್ನು ಗ್ರೆಡ್ಯುವೆಟ್ ಸ್ಕೂಲ್ ಆಗಿ ತೆರೆಯಲಾಗಿದೆ.

ಕೊಲೆಜುಗಳಲ್ಲಿ ಸಮಾಜಸೇವಾಜ್ಞಾನವನ್ನು ಕುರಿತಾದ ಅಭ್ಯಾಸಕ್ರಮವಿಲ್ಲದ್ದರಿಂದ, ಆ ಪಾಠಗಳೂ ಅಲ್ಲದೆ ಸೇವಾಕ್ರಮಗಳ ವಿಷಯವೂ ಇಲ್ಲಿಯ ಶಿಕ್ಷಣದಲ್ಲಿ ಸೇರಿವೆ.

ಮುಖ್ಯವಾಗಿ, ಶಿಕ್ಷಣ, ವ್ಯವಹಾರಜ್ಞಾನ, ನವೀನ ಶೋಧನೆಗಳೆಂಬ ಮೂರು ವಿಭಾಗಗಳಲ್ಲಿ ಇಲ್ಲಿ ಪಾಠಗಳು ನಡೆವುವು.

ಸಮಾಜದಲ್ಲಿ ಸಾಮಾಜಿಕನು ಹೇಗೆ ನಡೆದುಕೊಳ್ಳುತ್ತಾನೆಂಬುದು ತಿಳಿಯಬರುವಂತೆ, ಮನೋವಿಜ್ಞಾನದ ಪಾಠಗಳು ಇಲ್ಲಿ ಅಗತ್ಯವಾಗಿವೆ; ಜನಗಳು ತಲಾಂತರವಾಗಿ ನಂಬಿಬರುವ ನಂಬಿಕೆಗಳು, ರೂಢಿಗಳು, ಪದ್ಧತಿಗಳು, ಆಶಾಭರವಸೆಗಳು, ಜನಗಳ ಮಂದಿನ ಧ್ಯೇಯ-ಕರ್ತವ್ಯಾದಿಗಳು ಮೊದಲಾದುವನ್ನು ತಿಳಿದುಕೊಳ್ಳಬೇಕಾಗಿದೆ. ಸಮಾಜದ ವಿಧಾನಗಳಿಗೆ ಅನುಕೂಲವಾಗಿ ಸೇವಕನು ತನ್ನ ಕಾರ್ಯಕ್ರಮವನ್ನಿಟ್ಟುಕೊಳ್ಳಬೇಕು. ಅವನಿಗೆ ಸಾಂಪತ್ತಿಕ ವೈದ್ಯಕೀಯ ಕಾನೂನುಸಂಬಂಧವಾದ ನಾನಾ ಸಲಹೆಗಳೂ ತಿಳಿದಿರಬೇಕು.

ಪಾಶ್ಚಾತ್ಯರಲ್ಲಿ ಸಮಾಜಸೇವೆಯ ಕ್ರಮಗಳು ಯಾವುವೆಂದು ಇಲ್ಲಿನ ಸೇವಕರು ತಿಳಿಯಬೇಕಾಗಿದೆ. ಹಾಗೆಂದು ಅಲ್ಲಿನ ಕ್ರಮಗಳೆನ್ನೆ ಇಲ್ಲಿಯೂ ರೂಢಿಗೆ ತರಬೇಕೆಂದಿಲ್ಲ; ಆದರೆ ಉಪಯುಕ್ತ ಕ್ರಮಗಳನ್ನು ತಿಳಿದುಕೊಳ್ಳಬೇಕಷ್ಟೆ.

ಪ್ರತಿ ದಿನವೂ ಕಣ್ಣಿಗೆ ಗೋಚರವಾಗುವ ನಾನಾ ಸಾಮಾಜಿಕ ಸಮಸ್ಯೆಗಳನ್ನು ಈ ಶಾಲೆಯವರು ವಿಮರ್ಶಿಸಿ, ಹೊಸ ಶೋಧಗಳನ್ನು ಮಾಡುವರೆಂದೂ ನಂಬಲಾಗಿದೆ.

ಸ್ವಂತವಾಗಿ ಪ್ರತಿಯೊಂದು ವಿದ್ಯಮಾನವನ್ನು ಆಲೋಚಿಸಿ, ಪ್ರತ್ಯಕ್ಷ ಫಲದಾಯಕಗಳಾಗಿರುವ ಸದುಪಾಯಗಳನ್ನು ಹುಡುಕಿ ತೆಗೆವಷ್ಟು ಬುದ್ಧಿವಂತಿಕೆಯು ವಿದ್ಯಾರ್ಥಿಯಲ್ಲಿ ಹುಟ್ಟುವ ಹಾಗೆ ಇಲ್ಲಿ ಶಿಕ್ಷಣ ದೊರೆವುದು.

ವಿದ್ಯಾರ್ಥಿಗಳ ಶಾಸನ.

ಮುಂಬಾಯಿಯ 'ಸ್ಟೂಡೆಂಟ್ಸ್ ಬ್ರದರ್‌ಹುಡ್' ಎಂಬ ಸಮಿತಿಯ ಆಶ್ರಯದಲ್ಲಿ ವಿದ್ಯಾರ್ಥಿಗಳ ಹಕ್ಕು-ಜವಾಬುದಾರಿಗಳನ್ನು ಕುರಿತಾದ ಒಂದು ಶಾಸನವನ್ನು ಸಾರ್ವಜನಿಕ ಸಭೆಯೊಂದು ಸೇರಿ ಮಂಜೂರುಮಾಡಿದೆ. ಈ ಸೂತ್ರಗಳು ಸರ್ವಸಾಧಾರಣ ಸೂತ್ರಗಳಾಗಿದ್ದು ಇಡೀ ದೇಶದಲ್ಲಿ ಅಲ್ಲಲ್ಲಿರುವ ವಿದ್ಯಾರ್ಥಿಪಂಗಡಗಳಿಗೆ ಅನುಕೂಲವಾಗುವಂತೆ ತಿದ್ದುಪಡಿಯಾಗಲೂ ನಿರ್ಬಂಧವಿಲ್ಲವಾಗಿದೆ; ಅದರ ಸಾರಾಂಶ:—

'ನಾಗರಿಕತೆಯ ಮುಖ್ಯ ಲಕ್ಷಣಗಳೆಂದರೆ, ಆಲೋಚನಾ ಸ್ವಾತಂತ್ರ್ಯ, ವಾಕ್‌ಸ್ವಾತಂತ್ರ್ಯ; ಸಮಾಜಸೇವಾನಿರ್ಬಂಧ; ಅತಿ ಕಡಿಮೆ ಖರ್ಚಿನಲ್ಲಿ ಶಿಕ್ಷಣ ಹೊಂದುವ ಹಾಗೂ ಜನತೆಯು ತಾತ್ಕಾಲಿಕ ಸಂಪತ್ತಿಗೆ ಅನುಗುಣವಾಗಿ ತರಬೇತು ಹೊಂದುವ ಹಕ್ಕು ಇರುವಿಕೆ; ವಿದ್ಯಾರ್ಥಿಗೆ ತಿಳಿದಿರುವ ಎಲ್ಲ ವಿಷಯವು ವಿದ್ಯಮಾನಗಳಿಗೆ ತಕ್ಕಂತೆ ಪ್ರದರ್ಶನಹೊಂದುವಂತೆ ಮಾತ್ರವಲ್ಲದೆ ಅವನು ತಾನಾಗಿ ಪ್ರದರ್ಶಿಸಬಹುದಾದ ಹೆಚ್ಚಿನ ಆಸಕ್ತಿಯುಳ್ಳ ವಿಚಾರಗಳೂ ಹೊರ ಬೀಳುವಂತೆ ಯೋಗ್ಯತೆಸೂಚಕವಾದ ಪರೀಕ್ಷೆ ಇರುವಿಕೆ; ಎಂತಹ ಪರೀಕ್ಷೆಯಾದರೂ ಸಾಮಾನ್ಯವಾಗಿ ರೂಢಿಯಲ್ಲಿರುವ ಕ್ರಮವನ್ನು ಮೀರದಂತೆ ಇರುವಿಕೆ; ಸರಕಾರವಾಗಲಿ ಇತರ ಯಾವ ಸಂಸ್ಥೆಯಾಗಲಿ ವಿದ್ಯಾದಾನ ಮಾಡುವಾಗ, ಲಾಭಹೊಂದುವ ಇಚ್ಛೆಯಿಂದಲೂ ವಿದ್ಯಾರ್ಥಿಯನ್ನು ತರಬೇತುಗೊಳಿಸಿ ತಾನು ಪ್ರಯೋಜನ ಗಳಿಸಿಕೊಳ್ಳಬೇಕೆಂಬ ಇಚ್ಛೆಯಿಂದಲೂ ದೂರವಾಗಿರುವಿಕೆ; ಇದಲ್ಲದೆ ಸರಕಾರವು ವಿದ್ಯಾರ್ಥಿಯ ಸರ್ವತೋಮುಖವಾದ ಬೆಳವಣಿಗೆಗೆ ಬೇಕಾಗುವಷ್ಟು ಸಹಾಯವನ್ನು ಅಗತ್ಯವಾಗಿಯೂ ಮಾಡುವಿಕೆ.

'ಯಾವ ಶಾಲೆಯಾಗಲಿ, ಪರೀಕ್ಷಿಸುವ ಸಂಸ್ಥೆಯಾಗಲಿ ಲಾಭಸಂಪಾದನೆಗಾಗಿ ಇರಬಾರದು. ಜಾತಿ ಮತ ಮೊದಲಾದುವನ್ನು ಅನ್ವಯಿಸಿ ಶಾಲೆಗಳಿರಬಾರದು; ಹಾಗಿದ್ದಲ್ಲಿ ಅವುಗಳಿಗೆ ಸರಕಾರವು ಗ್ರೇಂಟನ್ನು ಪಬ್ಲಿಕ್ ಫಂಡಿನಿಂದ ಕೊಡಬಾರದು; ದೇಶವು ಅಭ್ಯುದಯವುಹೊಂದುವುದಕ್ಕೆ ಅಗತ್ಯವಾಗಿರುವ, ಜಾತಿ ಮತ್ತು ಸಾಮಾಜಿಕಗಳಾದ ಭೇದಗಳು ಬೆಳೆಯುವುದಕ್ಕೆ ಅವಕಾಶವನ್ನುಂಟುಮಾಡುವ ರೀತಿಯ ಗ್ರೇಂಟು ಅಥವಾ ಇತರ ಸೌಕರ್ಯಗಳನ್ನು ಸರಕಾರವು ಇಂತಹ ಶಾಲೆ ಯಾ ಸಂಸ್ಥೆಗಳಿಗೆ ಕೊಡಕೂಡದಾಗಿದೆ. ಬೋಧಕವರ್ಗಕ್ಕೆ ಜೀವನಕ್ಕೆ ಬೇಕಾಗಿರುವಷ್ಟು ವೇತನಾದಿಗಳನ್ನು ಶಾಲೆಗಳು ಓದಗಿಸಲೇ ಬೇಕು. ಪ್ರತಿ ಒಂದು ಶಿಕ್ಷಣಸಂಸ್ಥೆಯು ವಾಚನಾಲಯ, ಪುಸ್ತಕಭಂಡಾರ, ವ್ಯಾಯಾಮಶಾಲೆ, ಸಾಮಾಜಿಕ ಕೂಟಗಳಿಗಾಗಿ ಸೌಕರ್ಯಗಳು, ಶಾಲೆಯಲ್ಲಿ ಕಲಿಸುವ ವಿಷಯಗಳಲ್ಲದೆ ಇನ್ನಿತರ ವಿನೋದ ಚಟುವಟಿಕೆ ಮೊದಲಾದುವುಗಳ ಪುರವಠೆ, ಇತ್ಯಾದಿಗಳನ್ನು ಒದಗಿಸಬೇಕಾಗಿದೆ.'

'ವಿದ್ಯಾರ್ಥಿಗಳು ಈ ಜನಾಂಗದ ಮುಂದಣ ಗೌರವಸ್ತಂಭಗಳೆಂಬ ಭಾವನೆಯನ್ನು ರಕ್ಷಕರೂ ಶಿಕ್ಷಕರೂ ನೆನಪಿನಲ್ಲಿಟ್ಟುಕೊಂಡು, ವಿದ್ಯಾರ್ಥಿಗಳಿಗೆ ಇದ್ದೀರೀತಿಯಾಗಿ ಬೆಳೆದು ಬರುವ ಸಲಕರಣೆಗಳನ್ನು ಮಾಡಿಕೊಡಬೇಕು.'

ಎಸ್. ಎಸ್. ಎಲ್. ಸೀ. ಪರೀಕ್ಷೆ

ಹೆಡ್ ಮಾಸ್ಟರರ ಕೂಟದ ಅಭಿಪ್ರಾಯಗಳು.

ಈ ವರ್ಷ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ. ಇಂಗ್ಲಿಷು ಮತ್ತು ಚರಿತ್ರೆ (ಒಪ್ಶನಲ್)ಗಳಲ್ಲಿ ಹಿಂದೆ ಯಾವ ಶಾಲೆಗಳ ಫಲಿತಾಂಶ ಉತ್ತಮವಾಗಿದ್ದಿತೋ ಆ ಶಾಲೆಗಳು ಈ ವರ್ಷ ಕಡಿಮೆ ಫಲ ಹೊಂದಿವೆ.

ಶಾಲಾ ಪರೀಕ್ಷೆಗಳಲ್ಲಿ ಹೆಚ್ಚಿಗೆ ಮಾರ್ಕು ಪಡೆದ ವಿದ್ಯಾರ್ಥಿಗಳು ಸರಕಾರಿ ಪರೀಕ್ಷೆಯಲ್ಲಿ ಹೀಗೆ ಕಡಿಮೆ ಪಡೆಯಲು ಕಾರಣಗಳೇನು? ಪರೀಕ್ಷೆಯ ಪ್ರಶ್ನೆಗಳು ಹೊಸ ರೀತಿಯವಾದ ಕಾರಣವೊಂದು; ಪರೀಕ್ಷಕರು ಮಾರ್ಕು ಕೊಡುವ ಕ್ರಮದಲ್ಲಿ ಭಿನ್ನತೆಯುಂಟಾಗಿರುವುದಿನ್ನೊಂದು. ಇಂಗ್ಲಿಷಿನಲ್ಲಿ ಕಡಿಮೆಯೆಂದರೆ ೪೦ ಮಾರ್ಕು ಸಿಗಬೇಕಾಗಿದ್ದುದೂ ಈ ಪರೀಕ್ಷೆಯ ಪ್ರಶ್ನಾರೀತಿಯೂ ಬೇರೆಯಾಗಿದ್ದುದೂ ಇತರ ಕಾರಣಗಳು.

ಮೊಡರೇಶನ್ ಕ್ರಮವು ಸರಿಯಾಗಿಲ್ಲದಿರುವುದು ಮತ್ತೊಂದು ಕಾರಣ. ಶಾಸ್ತ್ರೀಯ ರೀತಿಯಲ್ಲಿ ಮೊಡರೇಶನ್ ಮಾಡುವುದೇನೂ ಇಲ್ಲ, ಆಯಾ ವರ್ಷಕ್ಕೆ ಒಂದೊಂದು ಬಗೆಯಾಗಿ ಮೊಡರೇಶನ್ ಸಾಗುತ್ತಿದೆ!

ಮುಖ್ಯ ಪರೀಕ್ಷಕರು ಮತ್ತು ಅವರ ಸಹಾಯಕರೊಳಗೆ ಐಕ್ಯಮತ್ಯ, ಸಮಾನ ರೀತಿಯ ತಿದ್ದುವಿಕೆಯ ಕ್ರಮವಿಲ್ಲದೆ ಇನ್ನೂ ಹಾಳಾದ ಫಲಗಳುಂಟಾಗುತ್ತಿವೆ. ಅವರ ಸಂಖ್ಯೆ ಕಡಿಮೆ, ಅವಧಿ ಕಡಿಮೆ, ಹೀಗಾಗಿ ಅವಸರವಾಗಿ ಅನ್ಯಾಯವುಂಟಾಗುತ್ತಿದೆ. ಅಲ್ಲಲ್ಲಿನ ಶಾಲೆಗಳಿಂದ ಕೆಲ ವಿದ್ಯಾರ್ಥಿಗಳು ಬರೆದ ಉತ್ತರಗಳನ್ನು ಪುನಃ ವಿಮರ್ಶಿಸಿದರೆ ಈ ಲೋಪದೋಷಗಳೆಲ್ಲ ಬಯಲಿಗೆ ಬರುವ ಕಾರಣ, ಇದಕ್ಕಾಗಿ ಒಂದು ಕಮಿಟಿಯನ್ನು ಏರ್ಪಡಿಸಿ ನೋಡಬೇಕೆಂಬ ಸೂಚನೆಯು ಮುಂದೆ ಬಂದಿದೆ.

ಫೈಲಾದ ವಿದ್ಯಾರ್ಥಿಯರ ಉತ್ತರಗಳನ್ನು ಪುನಃ ಪರೀಕ್ಷಿಸಿ ನೋಡಲು ಆಸ್ಪದವಿರುವಂತೆ, ನಿಯಮಗಳನ್ನು ತಿದ್ದುಪಡಿಗೊಳಿಸಬೇಕಾಗಿಯೂ ಸೂಚನೆಯಿದೆ.

ಇನ್ನು ಸ್ಕೂಲ್‌ಫೈನಲ್ ಪರೀಕ್ಷೆಯ ಫಲಿತಾಂಶಗಳನ್ನು ಎರಡು ವರ್ಗಗಳಾಗಿ ಪ್ರಕಟಿಸಬೇಕು; ಒಂದನೆ ವರ್ಗದಲ್ಲಿ ಶಾಲಾಶಿಕ್ಷಣ ಮುಗಿದು ಸರಕಾರಿ ಮತ್ತು ಇತರ ನೋಕರಿ ಹೊಂದಲು ಯೋಗ್ಯರಾದವರನ್ನೂ, ಎರಡನೆ ವರ್ಗದಲ್ಲಿ ವಿಶ್ವವಿದ್ಯಾಲಯದ ಶಿಕ್ಷಣ ಪಡೆಯಲು ಅರ್ಹರಾದವರನ್ನೂ ಮಾತ್ರ ಸೇರಿಸಬೇಕು; ಹೀಗೆ ಮಾಡಿದರೆ ಫೈಲಾದವರ ಸಂಖ್ಯೆ ಕಡಿಮೆಯಾಗುವುದು ಮಾತ್ರವನಲ್ಲದೆ, ವಿದ್ಯಾರ್ಥಿಗಳಿಗೆ ತೃಪ್ತಿ ಹೆಚ್ಚೀತು.

ಪಂಚಮ ಜಾರ್ಜರ ಸ್ಮಾರಕನಿಧಿಗೆ ಧನಸಹಾಯಪಿತ್ತವರ ಪಟ್ಟಿ.

(ಮುಂದರಿದುದು)

ರೂ. ೧ರಂತೆ ಕೆ. ಲಕ್ಷ್ಮಿನಿಧಿರಾವ್, ಪಿ. ವೆಂಕಟದಾಸಾಚಾರ್ಯ, ಮಿಸೆಸ್ ಎಲ್. ಎಂ. ಫೆರ್ನಾಂಡೀಸ್, ಬಿ. ಶ್ಯಾಮರಾಯ ಶೆಟ್ಟಿ, ಹೆಚ್. ದತ್ತಾತ್ರಯರಾವ್, ಯು. ಭವಾನಿಶಂಕರರಾವ್, ಕೆ. ಭವಾನಿಶಂಕರರಾವ್, ಕೆ. ಮಂಜುನಾಥ, ಕೆ. ಎಲ್. ಆಚಾರ್ಯ, ಸಿ. ವೆಂಕಪ್ಪ ಶೆಟ್ಟಿ, ಡಿ. ಎಸ್. ತಗ್ಗರ್ಶಿ, ಎಚ್. ಮುದ್ದಣ್ಣ ಶೆಟ್ಟಿ, ವ್ಯಾ. ದೇವರಾವ್, ಕೆ. ರಾಮಯ್ಯ ಶೆಟ್ಟಿ, ಎಂ. ಅಮ್ಮು, ವ್ಯಾ. ಕೃಷ್ಣರಾವ್, ಕೆ. "ಸರ್ವೋತ್ತಮರಾವ್, ಎ. ವಿ. ಲಸ್ರಾದೊ, ಕೆ. ದೇವರಾವ್, ಎಂ. ಸಿ. ಮಾಬೆನ್, ಅಡ್ಡಿಪಾಡಿ ಗೋಪಾಲಕೃಷ್ಣ ಭಟ್ಟ, ಈಶ್ವರ ಶೆಟ್ಟಿ, ರಾಮಯ್ಯ ಮುದ್ದಿ, ಕುಮಾರಯ್ಯ, ಪಿ. ರಾಮರಾವ್, ಯು. ಸೀತಾರಾಮಯ್ಯ, ಬಿ. ಟಿ. ಕಾಳಿಂಗರಾವ್, ಅಂತಪ್ಪ ಶೆಟ್ಟಿ, ರಾಮಕೃಷ್ಣಯ್ಯ. ಜೆ. ಎಂ. ಕರ್ರಿಸ್, ಫ್ರಾನ್ಸಿಸ್ ಸೋಜ, ಡಿಯೋಗ್ ಡಿ'ಸೋಜಾ, ಪಿ. ವಿಷ್ಣುಮೂರ್ತಿ ಮತ್ತು ಕೆ. ರಾಮರಾವ್; ಎಟ್ಟಿಹ ವಿ. ಆರ್. ಎಲ್. ಎಸ್. ಅರಸುರವರು ರೂ. ೮; ದೊಡ್ಡ ಮನೆ ಹಿರಿಯಣ್ಣ ಶೆಟ್ಟಿ ೦-೧೪-೦; ೧೨ ಆಣೆ ಪ್ರಕಾರ ಕೊಟ್ಟವರು— ಪಿ. ರಾಮರಾವ್, ಬಿ

ಹೊಸ ಇಂದ್ರಿಯ—ಶಕ್ತಿ

ದೀರ್ಘಕಾಲದ ಆರೋಗ್ಯಕರವಾದ ಜೀವನ

ಇದಕ್ಕೆ



ಒಕಾಸಾ.



ಒಕಾಸಾ ನಿಮ್ಮನ್ನು ಯೌವನಾವಸ್ಥೆಯಲ್ಲಿರಿಸುವ ವಿಧಾನ.

ಒ ಕಾ ಸಾ

ನಿಮ್ಮ ಜೀವನ, ಆರೋಗ್ಯ, ಇಂದ್ರಿಯಚೈತನ್ಯ

ಇವನ್ನು ರಕ್ಷಿಸುತ್ತದೆ.

ಈ ಆಶ್ಚರ್ಯಕರವಾದ ಔಷಧಿ, ಒಕಾಸಾ ಜರ್ಮನಿಯ ಪ್ರಸಿದ್ಧ ವಿಜ್ಞಾನಿಗಳಿಂದ ಮಾಡಲ್ಪಟ್ಟಿದು, ನಿಜವಾಗಿಯೂ ವಿಜ್ಞಾನದ ಅತ್ಯಮೋಘ ಸಾಹಸವಾಗಿರುತ್ತದೆ. ಬೇರಾವ ಟಾನಿಕೂ ಈ ವರೆಗೆ, ಇಂದ್ರಿಯಚೈತನ್ಯ, ಸಾಮಾನ್ಯ ನಿಶ್ಶಕ್ತಿ, ಜವನ್ನು ಪುನರ್ಜೀವನಗೊಳಿಸುವದಕ್ಕೆ ಮತ್ತು ಅಲ್ಪ ವಯಸ್ಸಿನಲ್ಲಿಯೇ ಬರುವ ಮುದಿತನವನ್ನು ನಿಲ್ಲಿಸುವದಕ್ಕೆ, ಒಕಾಸಾದಷ್ಟು ಜಗದ್ವಿಖ್ಯಾತ ಪ್ರಸಿದ್ಧಿಯನ್ನು ಪಡೆದಿಲ್ಲ. ಪರಿಣಾಮಗಳು ತಕ್ಷಣ, ನಿಶ್ಚಯ ಮತ್ತು ಊಹನಾತೀತ.

ಒಕಾಸಾ ಹೊಸ ಇಂದ್ರಿಯಶಕ್ತಿಯನ್ನುಂಟು ಮಾಡುತ್ತದೆ

ಮತ್ತು

ನಿಮ್ಮನ್ನು ಯೌವನರಾಗಿರಿಸುತ್ತದೆ.

ಇಂದೇ ಒಕಾಸಾ ಸೇವಿಸಲಾರಂಭಿಸಿ

ಒಕಾಸಾಔಷಧವನ್ನು ಒರೇ ಎರಡು ವಾರ ಸೇವಿಸಿ

ಆದು ನಿಮಗೆ ಒಂದು ದಿನಕ್ಕೆ ಒರೆ ೫ ಆಣೆ ಖರ್ಚನ್ನು ತಗಲಿಸುವುದು. ಡಾಕ್ಟರರ ಪ್ರಿಸ್ಕ್ರಿಪ್ಷನಿಗಿಂತಲೂ ಅಗ್ಗ. ಆದರೂ ಹೆಚ್ಚಿಗಿನ ವಿಶ್ವಾಸಕಾರಿ ಮತ್ತು ಅಧಿಕ ಫಲಕಾರಿ. ನೀವು ಸ್ವತಃ ಅನುಭವಿಸಿರಿ. ಏನೇನು ಪ್ರಯೋಜನಗಳನ್ನು ಪಡೆಯುವಿರೆಂದು—ಮುಂದಿನೆಂದಿಗಿಂತಲೂ ಅತ್ಯುತ್ತಮವಾದ ಆರೋಗ್ಯ, ಹೃದಯಚಲನ ನಿಲ್ಲುವಿಕೆ, ನರಗಳ ದೌರ್ಬಲ್ಯ, ನಿದ್ರಾಭಂಗ, ಮಾನಸಿಕ ಮತ್ತು ಶಾರೀರಿಕ ಅಶಕ್ತತೆ, ಅಲ್ಪ ವಯಸ್ಸಿನಲ್ಲಿಯೇ ಮುದಿತನ ಮತ್ತು ಜೈತನ್ಯನಾಶ ಇವುಗಳ ಬಾಧೆಗಳಿಂದೆಲ್ಲಾ ಪರಿಹಾರ ದೊರೆಯುತ್ತೆ.

ಒಕಾಸಾ ಎಲ್ಲಾ ಪ್ರಸಿದ್ಧ ಕಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತೆ.

ಸವಿಸ್ತಾರವಾದ ಮಾಹಿತಿಪತ್ರ, ಅಂತರರಾಷ್ಟ್ರೀಯ ಒಹು ಮಾನಪತ್ರಗಳ, ಹಿಂದೂಸ್ಥಾನ ಮತ್ತು ಯುರೋಪಿನ ಮಹಾ ಜನಗಳ ಪಿಫಾರಸುಪತ್ರಗಳ ನಕಲುಗಳಿಗಾಗಿ ಒರೆಯುವರೆ ವಿಳಾಸ:—

OKASA Co., Berlin (India), Ltd.
12, Rampart Row, Fort, P. O. B. 306, Bombay.

ಸ್ತನೋತ್ಸೇಧಃ

STHANO STHEDAH THE MALAYALA OUSHADHA CO., POST - CHALAPURAM, MALABAR.

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು. ಮನುಷ್ಯರನ್ನು ಆಕರ್ಷಿಸುವಂತಹುದು ಏನೆಂದು ಅವರಿಗೆ ಗೊತ್ತು. ಮನುಷ್ಯನ್ನು ಹೆಂಗ ಸೋರ್ವಳನ್ನು ಕಂಡೊಡನೆಯೆ ಅವನ ದೃಷ್ಟಿಯು ಆಕೆಯ ಮುಖದಿಂದ ಸರಿದು ಸ್ತನದ ಬಳಿ ನಿಲ್ಲುವುದು—ಅವುಗಳು ಉಬ್ಬಿ ಗೋಲಾಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯುವಿರಿ. ಇಲ್ಲವಾದರೆ ಹಣ ಪರತ

ಇವೆಲ್ಲವೂ ಮಲೆಯಾಳಿಗಳ ರಹಸ್ಯಮಯ ಔಷಧವಾದ 'ಸ್ತನೊತ್ಸೇಧಾ'ದಿಂದ ಸಾಧ್ಯ. ನಿಮ್ಮ ಸ್ತನಗಳು ಅಸೌಖ್ಯದಿಂದಲೂ, ಚಾರುಣವಾದ ಚಿಂತೆಯಿಂದಲೂ, ಪ್ರಾಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ, ಅವುಗಳು ಜೋಲುಬಿದ್ದಿದ್ದರೂ, ಸರಿಯಾಗಿ ಬೆಳೆಯದೆ ಇದ್ದರೂ, **ದಿ ಮಲೆಯಾಳಿ ಔಷಧ ಕಂಪೆನಿ, ಚಾಲಾಪುರಂ,** ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರು ಮಾಡಬಲ್ಲರು. ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಹೃಷ್ಟಪುಷ್ಟವಾಗಿಯೂ, ಬೆಳೆಯದ ಸ್ತನಗಳನ್ನು ಎದೆತುಂಬ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲುದು. ದೇಹದೊಳಗೆ ಹೋಗುವ ಔಷಧಿಯು ಶರೀರವೃದ್ಧಿಯನ್ನೂ ಸ್ತನಗಳ ಪೌಷ್ಟತೆಯನ್ನೂ, ಹೊರಗೆ ಲೇಪಿಸುವ ಮದ್ದು ಚರ್ಮರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸರಿಗೊಳಿಸಿ ಸ್ತನಗಳನ್ನು ಜನಮನಾಕರ್ಷಕಗಳನ್ನಾಗಿ ಮಾಡುವುದು. ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು. ಇದರಿಂದ ಸಾಧಕ ವಿನಹ ಬಾಧಕವಿಲ್ಲ. ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣಲಾಭವನ್ನು ಹೊಂದಿರುವರು. ಅಂತಹ ಗುಣವನ್ನು ನೀವೂ ಪಡೆಯಿರಿ.

ಸ್ತನೋ ಸ್ತಥ ನಂಬ್ರ 20 (ತಿನ್ನುವ ಔಷಧ) ರೂ. 3. ನಂಬ್ರ 21 (ಹೊರಗೆ ಲೇಪಿಸುವ ಮದ್ದು) ರೂ. 3.

ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ.

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ಮಲಬಾರು.

ಮಲೆಯಾಳ ಔಷಧಾ ಕಂಪೆನಿ

MALAYALA OUSHADHA CO., Post CHALAPURAM.

ಇವಲ್ಲದೆ ಜೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ.

1. ಮುಟ್ಟುದೋಷ, 2. ಸಂತತಿ ಪ್ರತಿಬಂಧಕ, 3. ಧಾತುಪುಷ್ಟಿ, 4. ಲಿಂಗವೃದ್ಧಿ, 5. ಶ್ವೇರೋಗ, 6. ಕ್ಷಯ ಸಂಹಾರಿ, 7. ವಾತರೋಗ.

THE GENERAL INSURANCE BANK OF INDIA LIMITED.,

OPPOSITE TALUK POLICE STATION,

MANGALORE.

ESTD. 1933.

AS ON 30TH APRIL 1936.

BENEFIT AMOUNT PAID EXCEEDS RS. 20,150/—

RESERVE FUND EXCEEDS RS. 6,250/—

WE HAVE THREE SCHEMES FOR YOU.

LIFE **MARRIAGE** **BIRTH**

ADMISSION FEE RS. 5—8—0 ONLY. (By Instalments if required)

MONTHLY PREMIUM RUPEE ONE ONLY.

WANTED SPECIAL AGENTS & REPRESENTATIVES ON LIBERAL TERMS.

For Full Prospectus & Agency Terms please call at or write to:—

THE GENERAL INSURANCE BANK OF INDIA LIMITED,

MANGALORE, S. K.

Mangalore, Dated 8th May '36.

P. K. MENON, *Secretary.*

ದಿ ಝಾಂಡೂ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಮುಂಬಾಯಿ.

ತಾಜಾ ಆಯುರ್ವೇದೀಯ ಔಷಧಗಳನ್ನು ಅತ್ಯಂತ ದೊಡ್ಡ ಪ್ರಮಾಣದಲ್ಲಿ ತಯಾರಿಸುವವರು.

ಆರೋಗ್ಯ, ಚೈತನ್ಯ ಮತ್ತು ಶಕ್ತಿಗಾಗಿ

ಝಾಂಡೂ ದ್ರಾಕ್ಷಾಸವ

ಉಪಯೋಗದ ಮೇಲೆಯೇ ಒತ್ತಾಯಪಡಿಸಿರಿ.

ರುಚಿಯನ್ನು ಹೆಚ್ಚಿಸುತ್ತದೆ. ಅಜೀರ್ಣ ಮತ್ತು ಆಯಾಸವನ್ನು ಹೋಗಲಾಡಿಸುತ್ತದೆ ವತ್ತು ಇಡೀ ದೇಹಕ್ಕೆ ನವಚೈತನ್ಯವನ್ನು ಕೊಡುತ್ತದೆ. ದೀರ್ಘಕಾಲದ ಕಾಹಿಲೆಯನಂತರ ಝಾಂಡೂ ದ್ರಾಕ್ಷಾಸವ ಅತ್ಯುಪಯುಕ್ತವಾಗಿ ಬೇಕಾಗಿರುತ್ತದೆ. ಸಂಕ್ಷೇಪತಃ ನಮ್ಮ ದ್ರಾಕ್ಷಾಸವ ಮೆದುಳಿನ ಕೆಲಸಗಾರರಿಗೊಂದು ವರಪ್ರದಾನ.

ಕ್ರಯ 1½ ಪೌಂಡು ರೂ. 1/12/- 1 ಪೌಂಡು ರೂ. 1/6/- 8 ಔನ್ಸು ಆ. 12/-

ಮದ್ರಾಸ್ ಆಧಿಪತ್ಯದ ಏಜಂಟರು:—ದಾಮೋದರ್ ಎಂಡ್ ಕೋ., 78, ಚೈನಾ ಬಜಾರ್ ರೋಡ್, ಮದ್ರಾಸ್.

ಮಂಗಳೂರು ಏಜಂಟರು:—ಷಾ ಅಂಡ್ ಕೋ., ಡೈಮಂಡ್ ಬಿಲ್ಡಿಂಗ್ಸ್, ಮಂಗಳೂರು.

ಉಡುಪಿ:—ಪಿ. ಎ. ಪೈ ಬ್ರದರ್ಸ್. — ಕಾರ್ಕಳ:—ವಿ. ವಿ. ಶೆಣೈ.

INVEST YOUR SAVINGS IN A East and West Policy.

OWN A EAST & WEST POLICY AND INCREASE YOUR SAVINGS! FOR THE EAST & WEST IS MAKING ASTOUNDING PROGRESS AND A EAST AND WEST POLICY IS, THEREFORE, A PROFITABLE INVESTMENT. IT ENCOURAGES THRIFT, ENSURES THE HIGHEST RETURNS AND OFFERS UTMOST SECURITY.

For Prospectus, Valuation Reports & Agency Terms apply to:—

MESSRS. PADUBIDRI BROS.,

Chief Agents,

MAHARASHTRA AND KARNATAKA,

East & West Insurance Co., Ltd.,

BOMBAY No. 8.

ಬಾಲಾರ್ಕಮಧು

ಚಿಕ್ಕಮಕ್ಕಳಿಗೆ ಪುಷ್ಟಿಯನ್ನೂ, ಆರೋಗ್ಯವನ್ನೂ, ಅದ್ಭುತ ಶಕ್ತಿಯನ್ನೂ ಕೊಡುವುದು.

ಶೀಸೆ 1ಕ್ಕೆ 12 ಆಣೆ; ಟಿ. ಖ. 11 ಆಣೆ.

ಸ್ಪ್ಲೀನೋಲಿವರ್

ಪ್ಲೀಹ, ಪಿತ್ತಕೋಶ, ಅಥವಾ ಮಕ್ಕಳ ಗೆಡ್ಡೆರೋಗ ಇದಕ್ಕೆ ಚೆಕ್ಕಬಿಂದು ದಿವ್ಯೌಷಧವು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು.

ಒಂದು ತಿಂಗಳ ಔಷಧದ ಕ್ರಯ ರೂ. 3-0-0; ಟಿ. ಖ. 6 ಆಣೆ.

ಯಂ. ವಿ. ಪ್ರಸಾದಿಕ ಔಷಧಾಲಯ,

ಶಿವಮೊಗ್ಗಾ, ಮೈಸೂರು ಸೀಮೆ.

ಯೋಗ್ಯ ದರದಲ್ಲಿ ಉತ್ತಮ

ದೇವಪೂಜಾ ಸಾಮಗ್ರಿ

ಅಪೇಕ್ಷಿಸುವವರು ಇದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಪುಕಟ್ಟಾ ಕಳುಹಿಸಿಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸದಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ. ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ, Kalmanje Vyasacharya,

ಭಾಂಡೆ ವ್ಯಾಪಾರಿ, Brass-ware Merchant,

ಉಡುಪಿ, ದ. ಕ. Udipi, S. K.

ವಿದ್ಯೆಯು ನಮಗೆ ಶಾಪವು!

'The Bookful Blockhead ignorantly read
With loads of learned lumber in his head'
(—POPE)

'ಮನುಷ್ಯರೂಪೇಣ ಮೃಗಾ ಚರಂತಿ' ಎಂದು ಕವಿಗಳು ವಿದ್ಯಾಹೀನನನ್ನು ಹಿಯ್ಯಾಳಿಸುತ್ತಿದ್ದ ಕಾಲವು ಮಾಸಿಹೋಗಿ, ಡಿಗ್ರಿಗಳ ಸಮುದಾಯಗಳನ್ನೆ ಕಟ್ಟಿಕೊಂಡು, ಊರು ಊರು ಅಲೆದಾಡುತ್ತಿರುವ 'ಮನುಷ್ಯರೂಪೇಣ ಮೃಗ'ಗಳು ಹೆಚ್ಚುತ್ತಲಿರುವ ಕಾಲವು ಬಂದೊದಗಿದೆ. ಆಸೆಗಳ ಹಿಮಾಲಯಗಳನ್ನು ಹತ್ತಿ, ಪಿತ್ರಾರ್ಜಿತವಾದ ಸೊಂಪನ್ನು ಸಂಪೂರ್ಣವಾಗಿ ವಿದ್ಯೆಗೆಂದು ವಿನಿಯೋಗಿಸಿ, ಕಟ್ಟಕಡೆಗೆ ನಿರುದ್ಯೋಗದ ಕಠಿಣ ಕೃತ್ಯಾರ್ಯವನ್ನು ತಾಳಲಾರದೆ, ನಿಷ್ಫಲವಾದ ಜೀವನದ ಹೊರೆಯನ್ನು ಹೊತ್ತುಕೊಂಡು, 'ಉಂಟುಮಾಡಿದ ದೇವರೇ ಊಟಕ್ಕೆ ಕೊಡಿ' ಎಂದು ಸಹಸ್ರನಾಮಜಪವನ್ನು ಮಾಡುವವರ ಕಾಲವಿದು. ವಿಜ್ಞಾನದ ಬೆಳವಣಿಗೆಯಾಗುತ್ತಿದೆ, ನಾಗರಿಕತೆಯು ಪಸರಿಸುತ್ತಿದೆ ಎಂದಂದುಕೊಂಡು, ತಾವೂ ವಿದ್ಯಾವಂತರಾಗಿ, ವೈಜ್ಞಾನಿಕರಾಗಿ, ನಾಗರೀಕರಾಗಿ ಪ್ರಸಿದ್ಧಿಗೊಳ್ಳಬೇಕೆಂದು ಹಂಬಲಿಸಿ, ಕಟ್ಟಕಡೆಗೆ ಬಡತನದ ಕ್ರೂರತೆಗೆ ಸಿಲುಕಿ ನರಳುವ ಮ್ಲೇಂಛರ ದುರ್ಧರತೆಯ ಕಾಲವಿದು. ಮಾನುಷಜೀವನದಲ್ಲಿ ಅಮೂಲ್ಯವಾದುವೆಂದೆಣಿಸಲ್ಪಟ್ಟಿರುವ ಕಿಶೋರಾವಸ್ಥೆಯನ್ನೂ, ಕೌಮಾರಾವಸ್ಥೆಯನ್ನೂ, ಅಗಣ ಬಲ-ತೇಜಸ್ಸನ್ನೆಲ್ಲ ವಿದ್ಯೆಗೆಂದು ಬರಿದುಗೊಳಿಸಿ, ಬುಂದೆ 'ಕರ್ಮಕ್ಕೆ ತಕ್ಕ ಫಲ'ವು ಸಿಗುವುದೆಂದು ಬಾಯಿ ತೆರೆದು ನಿರೀಕ್ಷಿಸಿ, ಕಡೆಗೆ ನಿರಾಶರಾಗಿ, ಪ್ರಾಣಹತ್ಯವನ್ನೂ ಮಾಡಿಕೊಳ್ಳುವವರ ಕಾಲವಿದು.

ಬೀದಿಗಳಲ್ಲಿ ವಾಹನಗಳು ಹೆಚ್ಚುತ್ತಿರುವಂತೆ, ನಿರುದ್ಯೋಗಿಗಳೂ ಹೆಚ್ಚುತ್ತಲಿದ್ದಾರೆ. ಆದರೆ ಪೋಲಿಗಳಲ್ಲ, ಕೇಡಿಗಳಲ್ಲ, ಕೂಲಿಗಳಲ್ಲ, ನಿರಕ್ಷರಕುಕ್ಷಿಗಳಾದ ನೀಚಕುಲೀನರಲ್ಲ—ಕಾಲೇಜುಶಿಕ್ಷಣವನ್ನು ಪಡೆದು, ಯುನಿವರ್ಸಿಟಿ ಡಿಗ್ರಿಗಳನ್ನು ಪಡೆದು, ಮುಂದಿನ ಗತಿಯನ್ನು ಕಾಣದೆ, ಎತ್ತ ಹೋದರೂ ನಿರಾಶೆಯೆ ತನ್ಮನಸ್ಸಿ ಕಾಯುತ್ತಲಿದೆಯೆಂದು ಬಲ್ಲ ನಿರ್ಭಾಗ್ಯ ಜನತೆ. ಎಲ್ಲಿ ಕೆಲಸವಿದೆಯೆಂದು ಹುಡುಕಾಡುತ್ತಾ, ಅಲ್ಲಲ್ಲಿ ವಿಚಾರಿಸುತ್ತ, ಬೆಹಳ ಸಾಧಿಸಿದರೂ ಯಾವ ತರದ ಪ್ರಯೋಜನವಾಗದೆ ಲೋಕದ ವ್ಯವಸ್ಥೆಯೆ ಕೆಟ್ಟುಹೋಗಿದೆಯೆಂದು ಅರಿತ ಸುಶಿಕ್ಷಿತ ಜೀವಿಗಳು. ಕೈಯಲ್ಲಿ ಸರ್ಟಿಫಿಕೇಟುಗಳಿವೆ—'ನಿಮ್ಮಲ್ಲಿ ಕೆಲಸವೊಂದು ಇದೆಯೆಂದು ಅರಿತಿರುವೆನು. ಆ ಕೆಲಸವು ನನಗೆ ದೊರೆತಲ್ಲಿ ನನ್ನ ಕೈಲಾದಷ್ಟು ಮಟ್ಟಿಗೆ ನಿಮ್ಮನ್ನು ಸಂತುಷ್ಟಿಗೊಳಿಸಲು ಸಾಧಿಸುತ್ತೇನೆ. ಇಂತಿಂತಹ ಕಾಲೇಜಿನಲ್ಲಿ ಇಂತಿಂತಹ ಡಿಗ್ರಿ ಪಡೆದು ಬಂದಿದ್ದೇನೆ.....ಮುಂತಾದುದು' ಅವುಗಳಲ್ಲಿ ಮಡಗಿದೆ. ಆದರೆ 'ಕೆಲಸವಿಲ್ಲ'ವೆಂದು ಮಾತ್ರ ಕವಿಯನ್ನು ಮುಟ್ಟುತ್ತಿದೆ. ಇಷ್ಟಕ್ಕೆಲ್ಲ ಹೊಣೆಗಾರರಾರು? ಕಾಲರಾಯನೆನ್ನುವರು ಕೆಲವರು. ಅಲ್ಲ; ನಾವೇ.

ಯೂರೋಪಿನಲ್ಲಿ ಶಿಕ್ಷಣಪ್ರಚಾರವು ಹೇಗೆ ನಡೆಯುತ್ತಿದೆ? ಬಾಲಕ ದರ್ಜೆಯಿಂದಲೂ ಹುಡುಗರಿಗೆ ಪೂರ್ಣ ಸ್ವಾತಂತ್ರ್ಯವಿದೆ. ಆದರೆ ಶಿಷ್ಯಶಿಷ್ಟತೆಯನ್ನು ಅವರು ಮರೆವಂತಿಲ್ಲ. ಉಪಾಧ್ಯಾಯರು–ಹುಡುಗರೊಳಗೆ ಸಹಕಾರವಿದೆ. ವಿದ್ಯಾಪ್ರಚಾರವು ಸುವ್ಯವಸ್ಥಿತ ರೀತಿಯಲ್ಲಾಗಬೇಕೆಂದು ಹವಣಿಸುತ್ತಿದ್ದ ಸರಕಾರವು ಸ್ತುತ್ಯಾರ್ಹವಾದ ರೀತಿಗಳನ್ನು ಪೋಣಿಸಿ, ಪ್ರತಿಯೊಂದು ವಿದ್ಯಾ ಇಲಾಖೆಯೂ ಅವನ್ನು ಸರಿಯಾಗಿ ಅನುಸರಿಸುವಂತೆ ಜಾಗ್ರತವಾಗಿ ನಿಬಂಧಿಸಿದೆ. ಜ್ಞಾನಬೆಳವಣಿಗೆಗೆ ಸಹಾಯಕಾರಿಯಾದ ಆಟಗಳನ್ನೂ ಉಂಟುಗೊಳಿಸಿ, ಪ್ರತಿಯೋರ್ವನೂ ಆಟದಲ್ಲೂ ಪಾಠದಲ್ಲೂ ಸರಿಯಾದ ಶಿಕ್ಷಣ ಪಡೆಯುವಂತೆ ಸಾಧಿಸುತ್ತಿದೆ. ಹುಡುಗರು ಮುಂದಿನ ತಮ್ಮ ಕಷ್ಟವನ್ನು ಹೊರಲು ಸಿದ್ಧರಾಗುವಂತೆ ಮಾಡುತ್ತಿದೆ. ಆದರೆ ನಮ್ಮ ಪ್ರಚಾರವು ಅದರ ಲೇಶಮಾತ್ರವಾದರೂ ಆಗಿರುವುದಿಲ್ಲ. ಕಾಲೇಜಿನಲ್ಲಿ ಕೊಡುವ ಶಿಕ್ಷಣವು ಮುಂದಿನ ಜೀವನದಲ್ಲಿ ಉಪಯುಕ್ತವಾದುದಲ್ಲ. ಷೇಕ್ಸ್‌ಪಿಯರ್, ಮಿಲ್ಟನ್, ಮುಂತಾದವರ ಕಾವ್ಯಗಳನ್ನೂ ನಾಟಕಗಳನ್ನೂ ಓದಿದಲ್ಲಿ, ಹುಡುಗನಿಗೆ ತನ್ನ ಜೀವಮಾನವನ್ನು ಪ್ರಬುದ್ಧ ರೀತಿಯಲ್ಲಿ ಕಳೆಯಲು ಸಹಕಾರಿಯಾಗುವುದಿಲ್ಲ. ಇದರಿಂದಲೇ ನಿರುದ್ಯೋಗ ಬಂದು, ಏಕಾದಶಿಗಳು ಹೆಚ್ಚುತ್ತಿವೆ.

ಸಣ್ಣ ಕ್ಲಾಸುಗಳಲ್ಲಿ ಹುಡುಗರು ಉಪಾಧ್ಯಾಯನ ಬೆತ್ತಕ್ಕೆ ಹೆದರಿ ಏನೇನೋ ಕಲಿಯುವರು. ಆ ಮೇಲೆ ಕೆಲವರು ಆಟದ ಮೇಲೂ ಉಳಿದವರು ಪಾಠದ ಮೇಲೂ ಸಮಯವನ್ನು ಕಳೆಯುವರು. ಉಪಾಧ್ಯಾಯನು ತನ್ನ ಸಂಬಳಕ್ಕೆ ಹಾನಿಬಾರದಂತೆ ನೋಡುವನು. ಹುಡುಗರು ತಮ್ಮ ಪ್ರಬಂಧಗಳನ್ನು ಸರಿಯಾಗಿ ಬರೆದಿದ್ದಾರೋ ಅವರು ಮನೆಗೆಲಸವನ್ನು ಮಾಡಿದ್ದಾರೋ ಎಂದು ನೋಡುವನು. ಅಲ್ಲದೆ ಶಿಷ್ಯರಿಗೆ ಲೋಕದ ವಿಚಾರಗಳನ್ನು ಹೇಳಿ ನಿಜವಾದ ವಿದ್ಯಾಪ್ರಚಾರವನ್ನು ಮಾಡಲಾರನು. ಹೈ ಸ್ಕೂಲನ್ನು ಬಿಟ್ಟ ಹುಡುಗನು ಬಿರುಗಾಳಿಗೆ ಹಾರಿಹೋಗುವವನಾಗುವನು. ಕೊಲೇಜಿನಲ್ಲಿ ಇನ್ನಿಷ್ಟು ಕಷ್ಟಪಟ್ಟು, ಇನ್ನಿಷ್ಟು ಮೈಯಲ್ಲಿನ ಮಾಂಸಖಂಡ

ಬಾಲವಿನೋದ

ಗಳನ್ನು ಚಲಿಸಿ, ಪ್ರಯತ್ನಪಟ್ಟು ಪಾಸುಮಾಡುವನು. ಆ ಬಳಿಕ ಆತನ ದೇಹಸ್ಥಿತಿಯ ಪ್ರಕಾರ ಆತನು ಯಾವ ಕಾರ್ಯರಂಗಕ್ಕಿಳಿಯಲ್ಲಿಕ್ಕೂ ಅಯೋಗ್ಯನಾಗುವನು. 'ಹಿಂದೂಸ್ಥಾನದ ಜನರಿಗೆ ನಡೆಯಲು ಕಲಿಸಿದುದು ಯುರೋಪಿಯನರು' ಎಂದು ಮೊನ್ನೆ ತಾನೆ ಹೆಸ್ ಹಿಟ್ಲರಿನ ವಾಗ್ದಾನವಾಗಿದೆ. ಅಹುದು, ಅವರಿಗೆ ನಡೆಯಲು ಕಲಿಸಿದರಿ, ಇನ್ನು ಏನೂ ಕಲಿಸಿಲ್ಲ. ಹೊಟ್ಟೆ ಹೊರಲು ಕಲಿಸಿಲ್ಲದಿದ್ದಲ್ಲಿ ಅಬಲತ್ವದಿಂದ ಅವರು ಪುನಃ ಬೀಳಲಾರರೇ?

ಆಂಗ್ಲವಿದ್ಯೆಯನ್ನು ಇಂಗ್ಲಾಂಡಿನಲ್ಲಿ ಪಡೆದು ಬಂದವರಿಗೆ ಮುಂಚೆ ಕೆಲಸ ದೊರೆವಂಥಾ ಕಾಲವೂ ಕಳೆಯಿತು. ಸಾವಿರಾರು ಪವನುಗಳನ್ನು ವಿದ್ಯಾಲಾಭಕ್ಕೆಂದು ವಿನಿಯೋಗಿಸಿ ಯುರೋಪಿನ ಯಾತ್ರೆ ಮಾಡಿ ಬಂದವರಿಗೂ ಈಗ ಉದ್ಯೋಗವಿಲ್ಲ! ಅಲ್ಲಿ ವಿದ್ಯೆ ಪಡೆಯುವಾಗ ಎಷ್ಟೋ ತಾಳ್ಮೆಯಿರಬೇಕು! ವರ್ಣಭೇದವಿರುವ ಇಂಗ್ಲಾಂಡು ಈಗೀಗ ಹಿಂದೀಯರಿಗೆ ಓರೆಗಣ್ಣು ತೋರಿಸುತ್ತಿದೆ. ಅಲ್ಲಿ ಅವರಿಗೆ ಉಳಕೊಳ್ಳಲು ಸ್ಥಿರವಾದ ಜಾಗವಿಲ್ಲ. ಬೇಕಾದ ಸೌಕರ್ಯವಿಲ್ಲ. ಹೀಗಿರುವಾಗ ವಿದ್ಯೆಯೇ ಬೇಡವೆನ್ನಿಸುತ್ತಿದೆ.

ವಿದ್ಯೆಯು ಶೂಲವಾಗಲು ಪರಿಣಮಿಸಿದೆ. ವಾಣಿಜ್ಯ, ಲೋಕಸಂಪರ್ಕವಿದ್ಯೆಯಾದರೂ ಕೊಡುವ ಇಲಾಖೆಗಳು ಬಹು ಕಡಿಮೆಯಾಗಿವೆ. ಅವುಗಳು ಹೆಚ್ಚಿದಿದ್ದಲ್ಲಿ, ಮತ್ತು ಹಿಂದುಸ್ಥಾನದ ವ್ಯಾಪಾರಕ್ಕೆ ಸರಕಾರದ ಬೆಂಬಲವಿಲ್ಲದಿದ್ದಲ್ಲಿ ನಿರುದ್ಯೋಗವು ಸದಾ ಉಳಿಯುವುದು, ಹೆಚ್ಚುವುದು, ಹಬ್ಬುವುದು.

